ಬುಕ್ಕಾಂಬುಧಿ ಕೃಷ್ಣಮೂರ್ತಿ

100 ಚೂರು ಪಾರು



ಶತಾಯುಷಿಯ
ನೂರು
ನೆನಪುಗಳು

ನೂರು – ಚೂರು – ಪಾರು

ಶತಾಯುಷಿಯ ನೂರು ಸವಿನೆನಪುಗಳು

ಲೇಖಕರು:

ಬುಕ್ಕಾಂಬುಧಿ ಕೃಷ್ಣಮೂರ್ತಿ

ಪ್ರಕಾಶಕರು :

ಮಹದಾನಂದ ಪ್ರಕಾಶನ

296, 17ನೇ ಮೇನ್, 35ನೇ ಕ್ರಾಸ್, 4ನೇ 'ಟಿ' ಬ್ಲಾಕ್

ಜಯನಗರ, ಬೆಂಗಳೂರು – 560 041. ಮೊ.: 98459 30412

ನೂರು – ಚೂರು – ಪಾರು

(ಶತಾಯುಷಿಯ ನೂರು ಸವಿನೆನಪುಗಳು)

– ಬುಕ್ಕಾಂಬುಧಿ ಕೃಷ್ಣಮೂರ್ತಿ

ಹಕ್ಕುಗಳು : ಲೇಖಕರವು

ಪ್ರಥಮ ಮುದ್ರಣ : 2026
ಪುಟಗಳು : 108
ಬೆಲೆ : ರೂ. 150.00
ಪುಸ್ತಕದ ಆಕಾರ : 1/8 ಡೆಮ್ಮಿ ಅಳತೆ

ಮುಖಪುಟ ವಿನ್ಯಾಸ : **ಡಾ. ಬಿ.ವಿ. ರಾಜಾರಾಂ**

ಪ್ರಕಾಶಕರು:
ಮಹದಾನಂದ ಪ್ರಕಾಶನ
296, 17ನೇ ಮೇನ್, 35ನೇ ಕ್ರಾಸ್
4ನೇ 'ಟಿ' ಬ್ಲಾಕ್, ಜಯನಗರ
ಬೆಂಗಳೂರು – 560 041
ಮೊ: 98459 30412

NOORU - CHOORU - PARU

Shatayushiya Nooru Savinenapugalu

– by Bukkambudhi Krishnamurthy

Copy rights : Author

Published by:
Mahadananda Prakashana
296, 17th Main, 35th Cross, 4th 'T' Block
Jayanagar, Bangalore - 560 041.
Ph.: 98459 30412

Book Size : Demi 1/8th
First Edition : 2026
Pages : 108
Price : Rs. 150.00

ಅಕ್ಷರ ಜೋಡಣೆ ಮತ್ತು ಮುದ್ರಣ:



ಸುಹಾಸ್ ಗ್ರಾಫಿಕ್ಸ್
Suhaas Graphics
CREATIVE • DESIGN • DEVELOPMENT
www.suhaasgraphics.com | Ph: 98453 55509

ಚೆನ್ನುಡಿ

ಜೀವನದಲ್ಲಿ ಸುಖ ದುಃಖಗಳೆಂಬ ಅನುಭವಗಳು ಎಲ್ಲರ ಜೀವನದಲ್ಲೂ ಇರುತ್ತವೆ. ಯಾರೊಬ್ಬರೂ ಪೂರ್ಣ ಸುಖಿಗಳೂ ಅಲ್ಲ; ಪೂರ್ಣ ದುಃಖಿಗಳೂ ಅಲ್ಲ. ಉಗಾದಿ ಬೇವು ಬೆಲ್ಲದಂತೆ ಸಿಹಿಕಹಿ ಅನುಭವಗಳ ಜೀವಿ ಮಾನವ. ಎರಡನ್ನೂ ಒಂದೇ ದೃಷ್ಟಿಯಿಂದ ನೋಡಿ ಕಾಲ ಕಳೆಯಬೇಕು ಎಂಬುವುದು ನನ್ನ ಅಭಿಪ್ರಾಯ. ಕೆಲವರ ಜೀವನದಲ್ಲಿ ಬೆಲ್ಲದಂಥ ಸಿಹಿ ಅನುಭವಗಳು ಹೆಚ್ಚಿರುತ್ತವೆ. ಮತ್ತೆ ಕೆಲವರ ಜೀವನದಲ್ಲಿ ಬೇವಿನಂಥ ಕಹಿ ಅನುಭವಗಳು ಹೆಚ್ಚಿರುತ್ತವೆ. ಎಲ್ಲವನ್ನೂ ಸರಿಸಮಾನವಾಗಿ ಅನುಭವಿಸುತ್ತಾ ಮಾನವಜನ್ಮ ಕಳೆಯುವುದಷ್ಟೆ ನಮ್ಮೆಲ್ಲರ ಕೆಲಸ.

ಎಲ್ಲರ ಬದುಕು ನೂರು ಮೀಟರ್ ಓಟದ ಪಂದ್ಯ ಇದ್ದಂತೆ! ಆಟದ ಸ್ಪರ್ಧೆಯಲ್ಲಿ ಓಡು ಓಡು ಎಂದು ಹುರಿದುಂಬಿಸುವ ಪ್ರೇಕ್ಷಕರಂತೆ, ನೂರು ಮೀಟರ್ ಓಟದಲ್ಲಿ ನೂರರ ಗಡಿಗೆ ಬಂದು ನಿಂತಿದ್ದೇನೆ. ಇದರಲ್ಲಿ ನನ್ನ ಪಾತ್ರವೇನಿಲ್ಲ. ತೊಟ್ಟಿಲಿನಲ್ಲಿ ಹಾಕಿ ನನ್ನನ್ನು ತೂಗಿ ಬೆಳೆಸಿದ ತಾಯಿ ತಂದೆಗಳು, ಶಿಕ್ಷಣ ನೀಡಿ ಕುರುಡನನ್ನು ಕೈ ಹಿಡಿದು ನಡೆಸಿದ ಗುರುಗಳು, ನನ್ನ ಹೆಂಡತಿ, ನನ್ನ ಕುಟುಂಬದವರು ಸೆಂಚುರಿ ದಾಟುವಂತೆ ಪ್ರೋತ್ಸಾಹಿಸಿದ ಹಿರಿಯರ ಹಾರೈಕೆ ಆಶೀರ್ವಾದಗಳ ಫಲವಾಗಿ ನಿಮ್ಮೆದುರು ನಿಂತಿದ್ದೇನೆ. ನಾನು ಕೃತಜ್ಞ, ಎಲ್ಲರಿಗೂ ನೂರು ನಮಸ್ಕಾರಗಳು.

ದೇವರು ಪ್ರತಿಯೊಬ್ಬನಿಗೂ ಲೋಕೋಪಕಾರ ಮಾಡಲು ಒಂದು ವಿಶಿಷ್ಟ ಶಕ್ತಿಯನ್ನು ಎಲ್ಲರಿಗೂ ಕೊಟ್ಟಿರುತ್ತಾನೆ. ಅದಕ್ಕೆ ತಕ್ಕಂತೆ ಅವನ ಆಯುಷ್ಯ ರೇಖೆಯನ್ನು ನಿರ್ಧರಿಸಿರುತ್ತಾನೆ. ನೂರು ವರ್ಷ ಸುಖವಾಗಿ ಆರೋಗ್ಯವಂತನಾಗಿ, ಆಯುಷ್ಯವಂತನಾಗಿ ಬಾಳು ಎಂದು ಗುರು–ಹಿರಿಯರ ಆಶೀರ್ವಾದ. ಮಾಡಿದ ಫಲವಾಗಿ ನೂರು ವರ್ಷ ಬದುಕಿದ್ದೇನೆ. ಆದರೂ ನೂರಾರು ವರ್ಷ ಬದುಕಬೇಕೆಂದು ಆಸೆ ಇದೆ. ಮನುಷ್ಯ ಎಂದರೆ ಆಶಾಜೀವಿ. ನಾನು ನೂರಾರು ವರ್ಷ ಅಲ್ಲದಿದ್ದರೂ ನೂರು+ಆರು = ನೂರಾರು ವರ್ಷ

ಬದುಕಬೇಕು. ನಿಮ್ಮೆಲ್ಲ ಜೊತೆ ಆನಂದದಿಂದ ಕಾಲ ಕಳೆಯುತ್ತೇನೆಂದು ನಂಬಿದ್ದೇನೆ.

ಕಾಫೀ ಜನಪ್ರಿಯ ಪಾನೀಯ. ಟೀ, ಹಾಲು ಇತ್ಯಾದಿ ಪಾನೀಯಗಳೂ ಜನಪ್ರಿಯವೇ. ನಾನು ಕಾಫೀಪ್ರಿಯ! ಕಾಫೀ ಬೋರ್ಡ್‌ನಲ್ಲಿ 39 ವರ್ಷ ಸರ್ವೀಸ್ ಮಾಡಿದ್ದೇನೆ. ನನ್ನ ಹವ್ಯಾಸ ದೇಶ ನೋಡು, ಕೋಶ ಓದು ಎಂಬತೆ ಸಾಮಾನ್ಯ ನಾಗರಿಕ. ಡಿವಿಜಿ ಅವರು ಹೇಳಿದಂತೆ ವನಸುಮವಾಗಿ ಬಾಳಲು ಆಸೆಪಟ್ಟವನು. ಇಂಥ ಸಾಮಾನ್ಯನನ್ನು ಹಿರಿಯನೆಂದು ಮಾನ್ಯನೆಂದು ಕುಟುಂಬದವರೂ ಅಷ್ಟೇ ಅಲ್ಲದೆ ಸಮಾಜದ ಹಿರಿಯ ಗಣ್ಯರು ಮೆಚ್ಚಿರುವುದು ನನ್ನ ಬಾಳಿನ ಭಾಗ್ಯ.

ನೂರರ ಹೊಸ್ತಿಲಿನಲ್ಲಿ ನಿಂತಿರುವ ನನ್ನನ್ನು ನಿಮ್ಮ ಬಾಳಿನ ಸವಿನೆನಪುಗಳಲ್ಲಿ ನೂರು ನೆನಪುಗಳನ್ನು ಬರೆಯಿರಿ ಎಂದು ನನ್ನ ಸಾಹಿತ್ಯ ಮಿತ್ರರೊಬ್ಬರಾದ ಅನಾಜಿ ಪ್ರೋತ್ಸಾಹಿಸಿದ್ದಾರೆ. ನನ್ನ ಮಕ್ಕಳು ಮಹದಾನಂದ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಇಲ್ಲಿಯ ಕೆಲವಾರು ಚಿತ್ರಗಳು ಶ್ರೀ ಸಂಕೇತ್ ಗುರುದತ್ತ್ ರಚಿಸಿ ಕೊಟ್ಟಿದ್ದಾರೆ. ಬಿ.ವಿ. ರಾಜಾರಾಂ ಮತ್ತು ಮೇಲುಕೋಟೆ ಮುರಳೀಧರ್, ಕು. ಜ್ಯೋತ್ಸ್ನಾ, ನಾಗರಾಜ್, ವಿಶ್ವನಾಥ್ ಹಾಗೂ ಸುಹಾಸ್ ಗ್ರಾಫಿಕ್ಸ್ ಬಳಗ ಅಚ್ಚು ಮಾಡಿ ಬೆಳಕಿಗೆ ತಂದಿದ್ದಾರೆ.

ನೀವೆಲ್ಲಾ ನೂರು ವರ್ಷ ಹರ್ಷದಿಂದ ಬಾಳಬೇಕು ಎಂಬುದೇ ನನ್ನ ಆಸೆ. ನನ್ನ ಭಾಗ್ಯ ನಿಮಗೆಲ್ಲಾ ಇರಲಿ. ಈ ನನ್ನ ನೂರು ಸವಿನೆನಪುಗಳ ನೂರು–ಚೂರು–ಪಾರು ನಿಮಗೆ ಸಂತಸ ತರಲಿ. ನಾನು ಧನ್ಯ,

ಜನ್ಮದಿನ 8–1–2026
ಬೆಂಗಳೂರು

ಬುಕ್ಕಾಬುಂಧಿ ಕೃಷ್ಣಮೂರ್ತಿ
ಲೇಖಕರು

ನೂರರ ನುಡಿ

ಇದು ಮಹದಾನಂದ ಪ್ರಕಾಶನದ ಕೃತಿ. ಇದುವರೆಗೂ ಶೀ ಬುಕ್ಕಾಬುಂಧಿ ಕೃಷ್ಣಮೂರ್ತಿಯವರು ಬರೆದ ಹನ್ನೆರಡು ಕೃತಿಗಳನ್ನು ನಮ್ಮ ಪ್ರಕಾಶನದಿಂದ ಪ್ರಕಟಿಸಿದ್ದೇವೆ.

ಜಯನಗರ ಟಿ ಬ್ಲಾಕ್‌ನಲ್ಲಿ ಬುಕ್ಕಾಂಬುಧಿ ಕೃಷ್ಣಮೂರ್ತಿಯವರು ಕಟ್ಟಿಸಿದ ಮನೆಯ ಹೆಸರು – ಮಹದಾನಂದ ಕೃಪ. ಗುರುಗಳ ಆಶೀರ್ವಾದದಿಂದ ಈ ಮನೆ ಕಟ್ಟಲಾಯಿತು. ಆನಂತರ ಲೇಖಕರ ಜೀವನದಲ್ಲಿ ಅನೇಕ ತಿರುವುಗಳು ಉಂಟಾದವು.

ಅವರು ಅಮೆರಿಕಾ ದೇಶದಲ್ಲಿ ವಾಸ ಮಾಡುವ ಕಾಲದಲ್ಲಿ ಕೃಷ್ಣಮೂರ್ತಿಯವರು, ಅನೇಕ ವಿಷಯಗಳ ಕುರಿತು ಕೃತಿಗಳನ್ನು ರಚಿಸಿದರು. ಆಯಾ ಕಾಲಕ್ಕೆ ತಕ್ಕಂತೆ ಸಿದ್ಧವಾದ ಕೃತಿಗಳನ್ನು, ಅವುಗಳಿಗೆ ಸಂಬಂಧ ಪಟ್ಟ ಚಿತ್ರಗಳೊಂದಿಗೆ ಪ್ರಕಟಣೆ ಮಾಡಲು ನಮಗೆ ಹೆಮ್ಮೆಯೆನಿಸಿದೆ.

ಈಗ ಈ **ನೂರು–ಚೂರು–ಪಾರು** ಕೃತಿ ಅವರ 100ನೇ ಹುಟ್ಟು ಹಬ್ಬದಂದು ಬಿಡುಗಡೆಯಾಗುತ್ತಿರುವುದು ಸಂಭ್ರಮ ತಂದಿದೆ. ಈ ಕೃತಿ ನೀಡಿದ ಅವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು. ತಮಗೆಲ್ಲಾ ಅವರ ಆಶೀರ್ವಾದಗಳು ಲಬಿಸಲಿ ಎಂದು ಹಾರೈಸುತ್ತೇವೆ.

ಜನ್ಮದಿನ 8–1–2026 – ಪ್ರಕಾಶಕರು
ಬೆಂಗಳೂರು

ಪರಿವಿಡಿ

ಚಿಂತನೆಗಳು ... 01

1. ಆ ಕಾಲ–ಈ ಕಾಲ ಯಾವುದು ಸುಕಾಲ ?
2. ಈಗಿನ–ಅರಿಶಿನ ಕುಂಕುಮ ಪದ್ಧತಿ
3. ಬತ್ತಿ ಹಚ್ಚಿದರೆ ಅಲ್ಲ ಗುಂಡಿ ಒತ್ತಿದರೆ ದೀಪ
4. ಆಗ ನೇಗಿಲು ಈಗ ಟ್ರ್ಯಾಕ್ಟರು
5. ನಾನು ಟ್ರೆಡಲ್ ಕಾಲದವನು
6. ಮಸಿ ಕುಡಿಕೆಯಿಂದ ಫೌಂಟನ್‌ಪೆನ್
7. ಆಗಿನ ಅಡುಗೆ ಮನೆ–ಈಗಿನ ಕಿಚನ್ ಮಿಷನ್
8. ನಮ್ಮ ಕಾಲದ ನಾಟಕ
9. ಸಗಣಿ–ರಂಗೋಲಿ ಈಗೆಲ್ಲಿ
10 ಜಟಕಾದಿಂದ ಜೆಟ್‌ವರೆಗೆ ಸಾಗಿದ ದಾರಿ
11. ಕಚೇರಿ ಕೆಲಸ
12. ಕನಸುಗಳು ನಿಜವೇ.
13. ಮನೆ ಕುಂಬಳವನ್ನು ಮನೆಯವರೇ ನೋಡಿರಲಿಲ್ಲ
14. ಪಿಪಿಪಿ ಅರ್ಥಾತ್ ಪ್ರಾಣೇಶ್ ಪ್ರಿಂಟಿಂಗ್ ಪ್ರೆಸ್
15. ಒಂದೊಂದು ಮಾತಿಗೂ ನಗುನಗು
16. ಬೇಬಿ ಸ್ವೆಟರ್ ಇದೆಯೇ ?
17. ಸೈಕಲ್ ಚಕ್ರಕ್ಕೆ ಗಾಳಿ
18. ಮಹಾತ್ಮರ ಮಾತಿಗಿರುವ ಪವರ್ ಎಷ್ಟು?
19. ಲೇಖನಕ್ರಮ ಹೇಗಿರಬೇಕು?
20. ಅಲ್ಲಾವುದ್ದೀನನ ಅದ್ಭುತ ದೀಪ
21. ಮಾತಿನ ಮಲ್ಲಿ.
22. ಸಿಗರೇಟ್ ವ್ಯಾಮೋಹ.

23. ಒಂಟಿ ಕುಟುಂಬ–ಜಂಟಿ ಕುಟುಂಬ.
24. ಕ್ರಿಸ್‌ಮಸ್ ಹಬ್ಬಕ್ಕೆ ಬಹುಮಾನಗಳು.
25. ವಿಧವಿಧವಾದ ಪಾತ್ರೆಗಳ ಬಳಕೆ.
26. ನಿಮಗಿದು ಗೊತ್ತೆ?
27. ಅತ್ಮೀಯತೆ, ಅನ್ಯೋನ್ಯತೆ, ಆಪ್ತತೆ
28. ಕಾಯೊಬ್ಬಟ್ಟು ತೊಂದರೆಗೆ ಪರಿಹಾರ.
29. 1942ರಲ್ಲಿ ಆದ ಕಾಂಗ್ರೆಸ್ ಚಳುವಳಿ.
30. ಹೆಂಡತಿ ಹೇಳಿದಂತೆ ಕೇಳಬೇಕು.
31. ನನ್ನ ಕಣ್ಣಿಗೆ ಟಿವಿ ಕಾರ್ಯಕ್ರಮಗಳು.
32. ವಿವಾಹ ಪದ್ಧತಿಗಳು ಮಾರ್ಪಾಡಾಗುತ್ತಿವೆ.
33. ಕನಸಿನಲ್ಲಿ ಕಂಡ ಕಲೆಗಾರನ ಕಿಬ್ಬೆಟ್ಟ.
34. ಸಂಗೀತ ಕಚೇರಿ ವ್ಯವಸ್ಥಾಪಕ ನಾನಲ್ಲ
35. ರೇಷ್ಮೆ ವ್ಯಾಪಾರಿ ಸಿದ್ದೋಜಿಯ ತಂತ್ರ.
36. ಕದ್ದ ಕಳ್ಳ ಬೆಚ್ಚಾದ
37. ಪರೀಕ್ಷಾ ಫಲಿತಾಂಶ ಏನಾಯ್ತು
38. ಸಮನ್ವಯ ಸಮತಾಭಾವ ಯಾವ ಮಟ್ಟದಲ್ಲಿ ?
39. ಪದಾರ್ಥ ಒಂದೇ ಹೆಸರು ಬೇರೆ
40. ನೋಟಿನ ಕಂತೆ ಹೊರಕ್ಕೆ ಬಂತು
41. ಮೊಟ್ಟೆ ಇಟ್ಟ ಕೋಳಿ ಮಾಯ

ಕಥೆ 38

42. ಜೀವನಕ್ಕೆ ಬೇಕಾದ ಒಂದು ವಿದ್ಯೆ ಸಾಕು.
43. ವರಮಹಾಲಕ್ಷ್ಮಿ ವ್ರತದ ಕಥೆ
44. ವಾರಪತ್ರಿಕೆಯಲ್ಲಿನ ಸ್ಪರ್ಧೆ
45. ಹುಟ್ಟುಹಬ್ಬದ ಬಹುಮಾನ.
46. ಆಶ್ಚರ್ಯ ಬಹುಮಾನ ಅಂಬಾಲಿಗೆ.
47. ಘನತೆಯ ರೇಟು ತಿಳಿಯಲಿಲ್ಲ.
48. ಹೊಸ ಮಾದರಿ ಎಂಜಿನ್?

49. ಊದುಗಡ್ಡಿಯ ಬಳಕೆಗೆ ಸರ್ಕಾರದ ಮನ್ನಣೆ!
50. ಹಾಲಿನ ಥಾಲಿಯಲ್ಲಿ ಬೆಕ್ಕು!
51. ಚೈನಾ ದೇಶದವನ ಚಮತ್ಕಾರ!
52. ಬುಕ್ಕಾಂಬುಧಿಯಲ್ಲಿ ಜಮಾಬಂದಿ.
53. ಟೆಲಿಫೋನ್ ಕಥೆಗಳು.
54. ಸಮಯ ಸ್ಫೂರ್ತಿ.
55. ಮಾತು ಕೇಳದವರ ಮಾತು ಕಥೆ
56. ಹೊಸ ವರ್ಷಕ್ಕೆ ಬಹುಮಾನ.
57. ನ್ಯಾಯಾಲಯದ ತೀರ್ಮ ಸದಾ ಸರಿಯೇ ?
58. ಪ್ರೇಮಪತ್ರದ ಪರಿಣಾಮ
59. ಅಂಗಡಿಯ ಪಾಲುದಾರರು.
60. ಅಳಿಯನ ಕಿವುಡು ಬಯಲಾಯಿತು!
61. ಆಧುನಿಕ ಉಪಕರಣಗಳು, ಹುಷಾರಾಗಿರಿ!

ಪ್ರಸಂಗ 58

62. ಕಲಿತಿರುವುದು ಇಷ್ಟು, ಕಲಿಯಬೇಕಾದದ್ದು ಅಷ್ಟು
64. ಅಮೇರಿಕಾದಲ್ಲಿ ನಮ್ಮ ದೇವಸ್ಥಾನಗಳು
65 ಸಪ್ತನಾರಾಯಣ ನಮೋ ನಮೋ.
66. ಹುಟ್ಟುಹಬ್ಬದ ವಿಶೇಷತೆ.
67. ಕಾಣೆಯಾಗಿದ್ದಾನೆ !
68. ಸೀಮಂತದಲ್ಲಿ ನಾನು ನರ್ತಿಸಿದೆ
69. ಉದ್ದಿನವಡೆಗೆ ಸಲಕರಣೆ.
70. ಮದುವೆ ಪದ್ಧತಿಗಳಲ್ಲಿ ಬದಲಾವಣೆ.
71. ಯಾರನ್ನು ಏನೆಂದು ಕರೆಯುತ್ತಾರೆ.
72. ಯಂತ್ರ–ಮಾನವ ಯಾರು ಮೇಲು ?

ವಿನೋದ 69

73. ಲೂಸ್ (LOSE) ಮತ್ತು ಲೂಸ್ (LOOSE)
74. ಇಸ್ಪೀಟ್ ಎಲೆಗಳ ಚಮತ್ಕಾರ.

75. ಸುಲಭ ಚಿಕಿತ್ಸೆ – ಸೂಕ್ತ ಪರಿಹಾರ?
76. ಸುಳ್ಳು ಪ್ರಕಟಣೆಗಳಿಗೆ ಬಲಿಯಾಗಬೇಡಿ!
77. ಕಾಂಪೌಂಡ್ ಎಷ್ಟುಸಲ ಹಾರಬಹುದು?
78. ಭೂಲೋಕಕ್ಕೆ ದೇವರುಗಳ ಪ್ರಯಾಣ.
79. ಮದುವೆ ನಿಶ್ಚಿತಾರ್ಥ.

ಜೀವನ 78

80. ದೇಹದಾನದ ಉಯಿಲು
81. ದಸರಾ ಮಹೋತ್ಸವ ಮೈಸೂರಿನಲ್ಲಿ.
82. ವರ್ತಮಾನಪತ್ರಿಕೆ ಓದಲು ಕೂಲಿ.
83. ಮಾತನಾಡುವುದರಲ್ಲಿ ಆದ ಅಭಾಸ.
84. ಬದಲಾವಣೆಯ ಅಗತ್ಯ ಬೇಕು ಈ ಕ್ಷೇತ್ರದಲ್ಲಿ.
85. ಪಂಡಿತನಿಗೆ ಬೇಕಾದದ್ದು ವಿಚಾರ–ಆಚಾರ
86. ನಾನು ಯಾರು ಗೊತ್ತೆ?
87. ಚನ್ನಗಿರಿ ಕೇಶವಮೂರ್ತಿಯೂ ಅವರೆ, ಕ್ರಿಕೆಟ್'ಮೂರ್ತಿಯೂ ಅವರೇ
88. ಹೊಸಮನೆಗೆ ಪ್ರವೇಶ, ಹೊಸಮಾದರಿ ಪೂಜೆ!
89. ಬು. ಕೃ. ಮೂರ್ತಿಗಳು ಸ್ವರ್ಗದ–ಕನಸಿನಲ್ಲಿ.
90. ಹತ್ತತ್ತು ವರ್ಷಗಳ ಆತ್ಮ ಕಥನ.
91. ಅನಾಜಿ ಮತ್ತು ನಾನು.
92. ಅಂದು ಕೈ ಬೀಸಣಿಗೆ ಹುಡುಗ ಇಂದು ವಿದ್ಯುತ್ ಪಂಕದ ಕೆಳಗೆ ಅಜ್ಜ
93. ತಾತನ ಕಾಲದಲ್ಲಿ ತಂದೆಯ ಕಾಶೀಯಾತ್ರೆ.

ಪ್ರಬಂಧ 97

94. ಮಾವು ನೂರು ತರಹ.
95. ಅಮೆರಿಕಾದ ಆಫೀಸುಗಳಲ್ಲಿ ದಂಡವಾಗುವ ಪದಾರ್ಥಗಳು.
96. ಪಾಪ, ಪಾಪಿ, ಪಾಪೂ.
97. ಅಮೆರಿಕಾದ ನಾಯಿಗಳಿಗೆ ಶುಶ್ರೂಷೆ.
98. ಪವನಹೋಮ, ಜೇನು ಕಡಿತ!
99. ಔಷಧಿಗಳ ಪೈಪೋಟಿ.
100. ಅಂಕಿತನಾಮ, ಅರ್ಧನಾಮ, ಅಡ್ಡಹೆಸರು.

ಬೆನ್ನುಡಿ ... 107

ನೂರು – ಚೂರು – ಪಾರು

1. ಆ ಕಾಲ–ಈ ಕಾಲ ಯಾವುದು ಸುಕಾಲ ?

ನಾನು ಹುಟ್ಟಿದಾರಭ್ಯ 100 ವರ್ಷಗಳ ಅವಧಿಯಲ್ಲಿ ಏನೆಲ್ಲ ಬದಲಾವಣೆಗಳಾಗಿವೆ. ಬದಲಾವಣೆಗಳು ಎಲ್ಲ ಕ್ಷೇತ್ರಗಳಲ್ಲೂ ಜರುಗುತ್ತಿವೆ, ವೈದ್ಯಕೀಯ ರಂಗ, ವ್ಯವಸಾಯ, ವಿಜ್ಞಾನ, ವಿದ್ಯಾಭ್ಯಾಸ, ವಾಹನ ಸಂಚಾರ, ಅಡುಗೆ ಮನೆಯ ಸಲಕರಣೆಗಳು, ಉಡುಪುಗಳು, ರೀತಿನೀತಿ. ಎಲ್ಲುಂಟು ಎಲ್ಲಿಲ್ಲ.

ಸುಮಾರು ಎಪ್ಪತ್ತು ವರ್ಷಗಳ ಹಿಂದೆ, ನನ್ನ ಐದು ವರ್ಷದ ಮಗಳಿಗೆ ಝಾಂಡಿಸ್ ಆಗಿತ್ತು. ವೈದ್ಯರು ಇದು ವಾಸಿಯಾಗುವ ಕಾಯಿಲೆಯಲ್ಲ ಎಂದು ತೀರ್ಮಾನಿಸಿದರು. ಆಗಿನ್ನೂ ಈಗ ಕಾಣುವ ಹಾಗೆ ವೈದ್ಯಕೀಯಕ್ಷೇತ್ರದಲ್ಲಿ ಪ್ರಯೋಗಗಳು ಮುಂದುವರೆದಿರಲಿಲ್ಲ. ಇನ್ನು ಹದಿನೈದು ದಿವಸಗಳಲ್ಲಿ ಅವಳ ಆಯಸ್ಸು ಮುಗಿಯುತ್ತೆ ಎಂದೂ ಹೇಳಿಬಿಟ್ಟರು. ಇದು ನನಗೆ ಗೊತ್ತಾದರೂ ಮನೆಯಲ್ಲಿ ಯಾರಿಗೂ ತಿಳಿಸುವಂತಿಲ್ಲ. ಆಗ ನಾನು ಚಿಕ್ಕಮಗಳೂರಿನಲ್ಲಿದ್ದೆ. 36 ಮೈಲಿ ದೂರದಲ್ಲಿರುವ ಹಾಸನದಲ್ಲಿ ತಕ್ಕ ಔಷಧಿ ಸಿಕ್ಕರೂ ಸಿಗಬಹುದು ಎಂದರು. ಏನೋ ಒಂದು ಆಸೆ, ಅನುಕೂಲವಾಗಬಹುದೋ ಅಂತ. ಆ ಔಷಧಿಯನ್ನು ತಂದರೂ ಅವಳನ್ನು ಉಳಿಸಿಕೊಳ್ಳುವ ಯೋಗ ಬರಲಿಲ್ಲ. ಅವರು ಹೇಳಿದಂತೆ, ಹದಿನೈದು ದಿವಸಗಳಲ್ಲೇ ತೀರಿಕೊಂಡಳು. ಈಗ ನೋಡಿ ಒಂದೊಂದು ಊರಿನಲ್ಲೂ ಹೆಜ್ಜೆಗೊಂದು ಔಷಧಿ ಅಂಗಡಿ ಇದೆ. ಶಸ್ತ್ರಚಿಕಿತ್ಸೆ ಇಲ್ಲದೇ ಕಾಯಿಲೆಯನ್ನು ಗುರ್ತಿಸುವ ಕ್ಯಾಮೆರಾಗಳು ಇವೆಯಂತೆ.


ಒಂದು ವರ್ಷದ ಹಿಂದೆ ನಾನು ಆರು ಮೆಟ್ಟಿಲುಗಳು ಮೇಲಿಂದ ಕೆಳಕ್ಕೆ ಬಿದ್ದುಬಿಟ್ಟೆ. ತಲೆಗೆ ಪೆಟ್ಟಾಗಿ ರಕ್ತ ಬಂತು. ಏಳುವುದಕ್ಕೇ ಆಗಲಿಲ್ಲ. ಅಕಸ್ಮಾತ್ ನಮ್ಮ ಮನೆಯಲ್ಲಿದ್ದವರನ್ನು ಕೂಗಿದಾಗ ಅವರು ಬಂದು ರಕ್ತವನ್ನು ಒರೆಸಿ ಶುಶ್ರೂಷೆ ಮಾಡಿದರು. ಕೂಡಲೇ ಆಸ್ಪತ್ರೆಗೆ ಸೇರಿಸಿದರು. ಎಲ್ಲ ಪರೀಕ್ಷೆಗಳೂ

ನಡೆದನಂತರ ಗೊತ್ತಾಯಿತು. ನನ್ನ ಎದೆಯಲ್ಲಿ ಅಯೋರ್ಟಾ ಎನ್ನುವ ಭಾಗದಲ್ಲಿ ಒಂದು ತುಂಬಾ ಶಿಥಿಲವಾಗಿದೆಯೆಂದು ತಿಳಿದು, ಅದನ್ನು ಬೇರೇ ಹಾಕಬೇಕೆಂದು ತೀರ್ಮಾನಿಸಿದರು. ಈಗೆಲ್ಲ ಮೊದಲಿನಹಾಗೆ ಶಸ್ತ್ರಚಿಕಿತ್ಸೆ ಮಾಡಲಿಲ್ಲ. ದೇಹದೊಳಕ್ಕೆ ಒಂದು ಕೊಳವೆಯನ್ನು ಹಾಕಿ ಬದಲಾಯಿಸಿಬಿಟ್ಟರು. ಮಾರನೇ ದಿವಸವೇ ಮನೆಗೆ ಹಿಂತಿರುಗಿದೆ. ಆಕ್ಸಿಜನ್ ಎಮ್. ಆರ್. ಐ.. ಹೆಸರುಗಳನ್ನು ಕೇಳಿದ್ದೆನೇ ಹೊರತು, ಅವು ಏನೆಂದು ನನಗೆ ಗೊತ್ತಿರಲಿಲ್ಲ. ಹೀಗೆ ಆಸ್ಪತ್ರೆಗೆ ಸೇರಿದ್ದು ಇದೇ ಮೊದಲು. ಅಲ್ಲಿಂದ ಮುಂದೆ ಆಲನ್ (Allen) ಎಂಬುವವರು ವಾರಕ್ಕೆ ಎರಡು ದಿವಸ ಬಂದು ವಾಕರ್ ಮೂಲಕ ನಡೆದಾಡುವುದಕ್ಕೆ ತರಬೇತಿ ಕೊಡುತ್ತಿದ್ದರು.

ಮಕ್ಕಳ ಉಡುಪುಗಳಂತೂ ಲೆಕ್ಕವಿಲ್ಲದಷ್ಟು. ನಮ್ಮ ತಾಯಿ ಇದ್ದಾಗ, ನನ್ನ ತಂಗಿಗೆ ಒಂದು ಲಂಗ ಹೊಲಿಸಬೇಕೆಂದು ಹಟಮಾಡಿ ನಮ್ಮ ತಂದೆ ಶಾಲೆಯಿಂದ ಬಂದ ಕೂಡಲೆ ಅವರನ್ನು ಪೇಟೆಗೆ ಅಟ್ಟಿದರಂತೆ. ಅವರು ಪಾಪ ಅಷ್ಟು ಆಸೆಯಿಂದ ಕೇಳುತ್ತಿದ್ದಾಳೆ ಎಂದು ತಕ್ಷಣ ಹೋಗಿ ಲಂಗವನ್ನು ಹೊಲಿಸಿ ತಂದರಂತೆ. ಅದು ಲಂಬಾಣಿ ಬಟ್ಟೆಯ ಲಂಗ. ಯಾರ ಮನೆಯಲ್ಲಿ ನೋಡಿದರೂ ಅದರದೇ ಸಡಗರ. ತಂದ ಮೇಲಾದರೂ ಅವರಿಗೆ ಊಟಕ್ಕೆ ಬಡಿಸಬೇಡವೆ. ಅದನ್ನು ನನ್ನ ತಂಗಿಗೆ ತೊಡಿಸಿ ಅವಳನ್ನು ಕೊಂಕಳಿಗೆ ಏರಿಸಿಕೊಂಡು ಅಕ್ಕಪಕ್ಕದ ಮನೆಯವರಿಗೆ ತೋರಿಸಲು ಹೋಗಿಯೇಬಿಟ್ಟರಂತೆ. ಈಗ ಯಾವ ಅಂಗಡಿಗೆ ಹೋದರೂ ರಾಶಿಗಟ್ಟಲೆ ಮಕ್ಕಳ ಉಡುಪುಗಳು ಪೇರಿಸಿಟ್ಟಿರುವುದು ಕಾಣುತ್ತೆ. ಬದಲಾವಣೆ!

2. ಈಗಿನ–ಅರಿಶಿನ ಕುಂಕುಮ ಪದ್ಧತಿ

ನಾನು ಕಂಡಂತೆ ಮದುವೆ, ಮುಂಜಿ ಸಮಾರಂಭಗಳಲ್ಲಿ, ಮುತ್ತೈದೆಯರಿಗೆ ಅರಿಶಿನವನ್ನು ಬೊಗಸೆಯ ತುಂಬ ಕೊಡುತ್ತಿದ್ದರು.





ಅವರು ಅದನ್ನು ಸೆರಗಿನ ತುದಿಯಲ್ಲಿ ಕಟ್ಟಿಕೊಂಡು ಹೋಗುತ್ತಿದ್ದರು. ಕಾಲಕ್ರಮೇಣ ಅರಿಶಿನ ಕುಂಕುಮದ ಬಟ್ಟಲನ್ನು ಅವರ ಮುಂದೆ ಹಿಡಿಯುವುದು ಶುರುವಾಯಿತು. ನಂತರ ತಾಂಬೂಲವನ್ನು ಕೊಡುವಾಗ ಪ್ಲಾಸ್ಟಿಕ್ ಚೀಲದಲ್ಲಿ ಸೇಬು ಅಥವಾ ಕಿತ್ತಿಲೆಹಣ್ಣು ಜೊತೆಗೆ ಅರಿಶಿನ ಕುಂಕುಮ ಪಕ್ಕಪಕ್ಕದಲ್ಲಿ ಸೇರಿರುವ ಒಂದು ಸಣ್ಣ ಪ್ಲಾಸ್ಟಿಕ್ ಪ್ಯಾಕೆಟ್. ಅದರಲ್ಲಿ ಒಂದು ಚಿಟಿಕೆಯಷ್ಟು ಅರಿಶಿನ ಇರುತ್ತೆ. ಈಗ ನೋಡಿ ಇದು ಇನ್ನೂ ವಿಚಿತ್ರ. ಬದಲಾವಣೆ! ಇದು ಹೀಗೇ ಮುಂದುವರೆದರೆ, ಎರಡು ಬಣ್ಣದ ಕಾಗದದಮೇಲೆ, ಅರಿಶಿನ, ಕುಂಕುಮ ಎಂದು ಬರೆದಿಟ್ಟುಬಿಡಬಹುದು!



ನವಗ್ರಹಪೂಜೆಗೆ ಧಾನ್ಯಗಳನ್ನು ಒಂದು ದೊನ್ನೆಯಲ್ಲಿ ಇಡುತ್ತಿದ್ದರು. ಒಂಬತ್ತು ಧಾನ್ಯವೂ ಸುಮಾರು ಅರ್ಧ ಮುಕ್ಕಾಲು ಪಾವು ಇರುತ್ತಿತ್ತು. ಈಗ ನವಧಾನ್ಯಗಳನ್ನು ಒಟ್ಟಿಗೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಇಡುತ್ತಾರೆ. ಒಂದೊಂದು ಧಾನ್ಯವೂ ಒಂದು ಚಮಚದಷ್ಟು ಅದರಲ್ಲಿ ಬದಲಾವಣೆ!

3. ಬತ್ತಿ ಹಚ್ಚಿದರೆ ಅಲ್ಲ ಗುಂಡಿ ಒತ್ತಿದರೆ ದೀಪ

ದೇವರ ದೀಪಕ್ಕೆ ಎಣ್ಣೆ ಬತ್ತಿ ಕೂಡ ಇಲ್ಲ. ವಿದ್ಯುಚ್ಛಕ್ತಿಯ ಸೊಡಿಲು ನೋಡಿ ಎಷ್ಟು ಚೆನ್ನಾಗಿದೆ, ಎಣ್ಣೆ ಬತ್ತಿಯ ರಂಪವಿಲ್ಲ ಎಂದರು ಒಬ್ಬಾಕೆ. ಚಿತ್ರ

ಅದೆಲ್ಲಾ ಏನ್ ಮಹಾ ಬಿಡಿ. ಕೆಲವು ಮನೆಗಳಲ್ಲಿ ಹಣ್ಣು ಕಾಯಿಗಳನ್ನೂ ಇಡುವುದಿಲ್ಲ. ಪ್ಲಾಸ್ಟಿಕ್ ತೆಂಗಿನಕಾಯಿ ಹೋಳು, ಪ್ಲಾಸ್ಟಿಕ್ ಬಾಳೇಹಣ್ಣು. ಐದಾರು ವರ್ಷ ಇಟ್ಟರೂ ಕೆಡುವುದಿಲ್ಲ. ನಿಜವಾದ ತೆಂಗಿನಕಾಯಿ ಹೋಳಿನ ತಲೆಯಮೇಲೆ ಹೊಡೆದಹಾಗಿರುತ್ತೆ ಎಂಥ. ಬದಲಾವಣೆ!



ಆಹಾರ ಪದಾರ್ಥಗಳಲ್ಲೂ ಬದಲಾವಣೆ. ತಂಬಿಟ್ಟು, ಚಿಗಳಿ,


ತಾಲೀಪಿಟ್ಟು ಎಂದರೆ, ಅದು ಪ್ರಾಣಿಯ ಅಥವಾ ಊರಿನ ಹೆಸರೇ ಎಂದು ಮಕ್ಕಳು ಕೇಳಿದರೆ ಆಶ್ಚರ್ಯವೇನಿಲ್ಲ. ಪಿಜ್ಜಾ ಎಂದರೆ ಅದು ಚೆನ್ನಾಗಿ ಗೊತ್ತು ಈಗಿನ ಮಕ್ಕಳಿಗೆ.


ನನ್ನ ಮದುವೆ ಆದದ್ದು 1944ರಲ್ಲಿ. ಆಗೆಲ್ಲ ಫೋಟೊ ಶಬ್ದವೇ ಇರಲಿಲ್ಲ. ಈಗೆಲ್ಲ ಮದುವೆ, ಮುಂಜಿ ಸಮಾರಂಭಗಳಲ್ಲಿ ಫೋಟೊ ತೆಗೆಸುವುದು ಸರ್ವೇಸಾಮಾನ್ಯ. ಅದರಲ್ಲೂ ಮದುವೆಯಾದ ವಧೂವರರ ಫೋಟೋಗಳನ್ನು ನಾನಾಮುಖದಲ್ಲಿ ತೆಗೆಯುತ್ತಾರೆ. ಮದುವೆಯಾಗಿ ಎಷ್ಟೋ ದಿವಸಗಳ ನಂತರ ಮನೆಗೆ ಬಂದ ನೆಂಟರಿಷ್ಟರಿಗೆ ಆ ಫೋಟೋಗಳ ಸಂಪುಟವನ್ನು ತೋರಿಸುವುದೇ ಒಂದು ಸಂಭ್ರಮ.

ಅದೇನೋ ಸರಿ. ಇನ್ನೂ ಒಂದು ವಿಚಿತ್ರವೆಂದರೆ, ಒಂದು ಸಂಸಾರದಲ್ಲಿ ಮನೆಯಾತ ತೀರಿಕೊಂಡ. ಅವನ ಸಂಬಂಧಿಕರು ಹೆಣದ ಬಾಯಿಗೆ ಅಕ್ಕಿಕಾಳನ್ನು ಹಾಕುವಾಗ, ಪುರೋಹಿತರಿಗೆ ಹೇಳಿದರಂತೆ, ಸ್ವಲ್ಪ ತಡೆಯರಿ ಫೋಟೋ ತೆಗೆದುಕೊಳ್ಳುತ್ತಾರೆ. ನಂತರ ಮಂತ್ರ ಹೇಳಿ ಎಂದು. ನಿಧಾನವಾಗಿ ಅಕ್ಕಿಕಾಳನ್ನು ಹೆಣದ ಬಾಯಿಗೆ ಹಾಕಿದರಂತೆ ಫೋಟೊ ತೆಗೆಯಲು ಅನುಕೂಲವಾಗಲೆಂದು! ಇದೆಂತಹ ಬದಲಾವಣೆ!

4. ಆಗ ನೇಗಿಲು ಈಗ ಟ್ರ್ಯಾಕ್ಟರು ಚಿತ್ರ

ಬೇಸಾಯ ಅಂದು ಇಂದು ನಮ್ಮ ಹಳ್ಳಿಯಾದ ಬುಕ್ಕಾಂಬುಧಿಯಲ್ಲಿ ಸಾಮಾನ್ಯವಾಗಿ ಹೊಲ, ಗದ್ದೆಗಳಲ್ಲಿ ಉಪಯೋಗಿಸುತ್ತಿದ್ದುದು ನೇಗಿಲು, ಗುದ್ದಲಿ, ಪಿಕಾಸಿ, ಮಚ್ಚು , ಹಾರೆ ಮುಂತಾದುವು ಮಾತ್ರ. ಕೆಲವು ಭಾರಿ ಜಮೀನ್‌ದಾರರು ಟ್ರ್ಯಾಕ್ಟರ್ ಇಟ್ಟುಕೊಂಡಿರುತ್ತಿದ್ದರು. ಮತ್ತೆ ಕೆಲವರು (ಕಾಫೀ ಬೆಳೆಗಾರರು) ಆನೆಯನ್ನು ಸಾಕಿದ್ದರು ಮರಮುಟ್ಟುಗಳನ್ನು ಅಲ್ಲಿಂದಿಲ್ಲಿಗೆ ಸಾಗಿಸುವುದಕ್ಕೆ..





ನಾನು ನೋಡಿದಹಾಗೆ ಅಮೆರಿಕಾದಲ್ಲಿ ಔಷಧಿ ಚುಮುಕಿಸುವುದಕ್ಕೆ ಹೆಲಿಕಾಪ್ಟರ್ ಉಪಯೋಗಿಸುತ್ತಾರೆ. ಇಲ್ಲಿಯ ಜಮೀನುಗಳು ಕೂಡಾ ಸಾವಿರಾರು ಎಕರೆಗಳನ್ನು ಆಕ್ರಮಿಸಿಕೊಂಡಿರುತ್ತವೆ. ವಯೋಮಿಂಗ್ ಎಂಬ ರಾಜ್ಯದಲ್ಲಿ ಹೊಲಕ್ಕೆ ನೀರು ಹಾಯಿಸಲು ಮೈಲಿಗಟ್ಟಲೆ ಉದ್ದದ ಕೊಳವೆಯನ್ನು ಜೋಡಿಸಿದ್ದಾರೆ.

ನಮ್ಮ ಊರಿನಲ್ಲಿ ರಾಗಿ ಭತ್ತವನ್ನು ಶೇಖರಿಸಿಡಲು ಬೊಂಬನ್ನು ಸೀಳಿ ಮಾಡಿರುವ ಕಣಜ ಉಪಯೋಗದಲ್ಲಿದೆ. ಅಮೇರಿಕಾದಲ್ಲಿ ಸುಮಾರು ಮೂವತ್ತು ಅಡಿ ಎತ್ತರದ ದಪ್ಪವಾದ ಕಬ್ಬಿಣದ ಕೊಳವೆಯನ್ನು ಇಟ್ಟಿದ್ದಾರೆ. ಅದಕ್ಕೆ ಗೋಧಿಯನ್ನು ಹೆಲಿಕಾಪ್ಟರ್ ಮೂಲಕ ತುಂಬುತ್ತಾರಂತೆ.





5. ನಾನು ಟ್ರೆಡಲ್ ಕಾಲದವನು

ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ಆಗಿರುವ ಬದಲಾವಣೆಗಳಂತೂ ಅದ್ಭುತವಾಗಿವೆ. ಆಗಿನ ಕಾಲಕ್ಕೆ ಪ್ರೆಸ್‌ಗಳಲ್ಲಿ ಕೆಲಸಮಾಡುವ ಕೆಲಸಗಾರರು ಸಣ್ಣಸಣ್ಣ ಅಕ್ಷರದ ಮೊಳೆಗಳನ್ನು ಒಂದಕ್ಕೊಂದನ್ನು ಜೋಡಿಸಿ ಅದು ಅಲುಗಾಡದಂತೆ ದಾರದಿಂದ ಕಟ್ಟಿ ಒಂದು ಪುಟ ಮುಗಿದಮೇಲೆ ಅಚ್ಚಿನಮಣೆಗೆ ಸೇರಿಸುತ್ತಿದ್ದರು. ನಂತರ ಒಂದು ಒದ್ದೆಕಾಗದವನ್ನು ಅದರಮೇಲಿಟ್ಟು ಅದುಮಿದರೆ ಅದು ಅಚ್ಚಾಗುತ್ತಿತ್ತು. ಆಗ ಅದರಲ್ಲಿರುವ ತಪ್ಪುಗಳನ್ನು ತಿದ್ದಿ ಯಂತ್ರಕ್ಕೆ ಸೇರಿಸಿ, ಎಷ್ಟು ಪ್ರತಿಗಳು ಬೇಕೋ ಅಷ್ಟನ್ನು ಅಚ್ಚುಹಾಕುತ್ತಿದ್ದರು. ನಾನೂ ಕೆಲವಾರು ತಿಂಗಳು ಒಂದು ಪ್ರೆಸ್‌ನಲ್ಲಿ ಕೆಲಸಮಾಡಿದ್ದೆ.

ಈಗೆಲ್ಲ ಆ ಪ್ರಕರಣವೇ ಇಲ್ಲ. ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿದರೆ ಸಾಕು. ಅದನ್ನು ಅಚ್ಚುಹಾಕುವ ಯಂತ್ರಕ್ಕೆ ಸೇರಿಸಿ ಪುಸ್ತಕರೂಪದಲ್ಲಿ ಹೊರತರುತ್ತಾರೆ. ಮುಖಪುಟ ಎಲ್ಲವೂ ಸೇರಿರುತ್ತೆ. ಇದು ಒಂದು ಅದ್ಭುತ ಬದಲಾವಣೆ ಆ ಕ್ಷೇತ್ರದಲ್ಲಿ.

1932–33ರಲ್ಲಿ ಸಂತೆಯಲ್ಲಿ ಕೊಂಡದ್ದು, ರುಪಾಯಿಗೆ 15 ಸೇರು ಅಕ್ಕಿ. ರುಪಾಯಿಗೆ 16 ತೆಂಗಿನಕಾಯಿ ಅಂದರೆ, ಇದೆಲ್ಲ ಕಟ್ಟುಕತೆ ಎಂದು ಈಗಿನವರು ನಂಬುವುದಿಲ್ಲ. ನಾನೇ ಸಂತೆಯಲ್ಲಿ ಕೊಂಡಿದ್ದೇನೆ ಎಂದರೂ ಕೇಳಬೇಕಲ್ಲ ಈ ಜನ!

ಅಕ್ಕಿಯನ್ನು ಸೇರಿನಲ್ಲಿ ಅಳೆಯುವ ಕಾಲ ಹೋಯಿತು. ಅಕ್ಕಿಗೂ ಒಂದು ZIP ಇರುವ ಚೀಲ! ಬೇಳೆ, ಕಾಳು ಮುಂತಾದುವನ್ನು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟಿರುತ್ತಾರೆ. ಚೌಕಾಸಿ ಮಾಡುವಂತಿಲ್ಲ. ಅದರ ಮೇಲೆ ನಮೂದಿಸಿರುವ ಬೆಲೆಯನ್ನು ಕೊಟ್ಟು ತೆಪ್ಪನೆ ಬರಬೇಕು. ಇದು ವ್ಯಾಪಾರಕ್ಷೇತ್ರದಲ್ಲಿ ಕಂಡುಬಂದಿರುವ ಬದಲಾವಣೆ.

ವಿಜ್ಞಾನ ವಿಭಾಗದಲ್ಲಂತೂ ಕೇಳಲೇಬೇಡಿ. ಪ್ರತಿದಿನವೂ ಆಗುತ್ತಿರುವ ಬದಲಾವಣೆಗಳನ್ನು ನೋಡುತ್ತಿದ್ದೇವೆ. ಕೂತಕಡೆಯಿಂದಲೇ ಮೊಬೈಲ್ ಫೋನ್ ಮೂಲಕ ಎಲ್ಲವನ್ನೂ ಕಾಣಬಹುದು.

ಮೊನ್ನೆ ಒಂದು ಇ–ಮೆಯಿಲ್ ನೋಡಿದೆ. ಯಾವುದೋ ಮಂತ್ರವನ್ನು ಪಠಿಸಿದರೆ, ಹೃದಯರೋಗ ನಿವಾರಣೆಯಾಗುತ್ತೆಂದು! ಪುರಾಣದಲ್ಲಿ ಕೇಳಿದ್ದೇವೆ ಋಷಿಗಳು ಮಾವಿನಹಣ್ಣು ಕೊಟ್ಟಿದ್ದಕ್ಕೇ ಮಕ್ಕಳಾಗಿತ್ತೆಂದು, ಹಿಂದೆಲ್ಲಾ ಹೇಳುತ್ತಿದ್ದರು. ಮಕ್ಕಳಾಗದಿದ್ದ ಹೆಂಗಸರು ನಲವತ್ತೆಂಟು ದಿವಸ ಅಶ್ವತ್ಥವೃಕ್ಷಕ್ಕೆ ಪ್ರದಕ್ಷಿಣೆಮಾಡಿದರೆ ಮಕ್ಕಳಾಗುವುದೆಂದು. ಒಬ್ಬ ಹೆಂಗಸು ಹಾಗೆಮಾಡಿ ಮಾರನೇ ದಿನವೇ ಹೊಟ್ಟೆಯನ್ನು ಮುಟ್ಟಿ ನೋಡಿಕೊಂಡಳಂತೆ! ತನ್ನಲ್ಲಿ ಬದಲಾವಣೆ ಆಯ್ತಾ ಅಂತಾ ಹೀಗೆಲ್ಲ ಆಗುವುದಾದರೆ ಆಸ್ಪತ್ರೆ, ವೈದ್ಯಮಂಡಲಿ ಎಲ್ಲವೂ ವ್ಯರ್ಥವೆಂದು ತೀರ್ಮಾನಿಸಬೇಕೇ? ಮಂತ್ರಕ್ಕೆ ಮಾವಿನಕಾಯಿ ಉದುರುತ್ತದೆಯೇ ಅನ್ನುವುದು ಗಾದೆ.

6. ಮಸಿ ಕುಡಿಕೆಯಿಂದ ಫೌಂಟನ್‌ಪೆನ್

ಸ್ಲೇಟು, ಬಳಪ, ಶಾಯಿಗೆ ಅದ್ದಿ ಬರೆಯುವ ಕಾಲ ಎಂದೋ ಮುಗಿಯಿತು. ಶಾನುಭೋಗರು ಕಪ್ಪು ಮತ್ತು ಕೆಂಪು ಮಶಿ ಗುಳಿಗೆಗಳನ್ನು ನೀರಿನಲ್ಲಿ ಹಾಕಿ ಶಾಯಿ ಮಾಡುತ್ತಿದ್ದರು. ಕಾಲಕ್ರಮೇಣ ಶಾಯಿ ತುಂಬಿರುವ ಪೇನಾ ಬಳಕೆಗೆ ಬಂತು. ಈಗೆಲ್ಲಾ ಆ ಪ್ರಕರಣವೂ ಇಲ್ಲ. ಪೆನ್ಸಿಲ್, ಪೇಪರ್, ಡಾಟ್ ಪೆನ್,

ನಾವೆಲ್ಲ ಸಾಮಾನ್ಯವಾಗಿ ಒಂದರಿಂದ ಇಪ್ಪತ್ತೈದರತನಕ ಬಾಯಲ್ಲೇ ಮಗ್ಗಿ ಹೇಳುತ್ತಿದ್ದೆವು. ಈಗಿನ ಮಕ್ಕಳಿಗೆ ಅರವತ್ತಕ್ಕೆ ನಲವತ್ತನ್ನು ಕೂಡಿಸು ಎಂದರೆ, ತಕ್ಷಣ ಕ್ಯಾಲ್ಕುಲೇಟರ್ ಉಪಯೋಗಿಸಿ. ತಟ್ಟನೆ ನೂರು ಎಂದು ಹೇಳುತ್ತಾನೆ. ನಮ್ಮ ಹುಡುಗ ತುಂಬಾ ಚುರುಕು ಎಂದು ಅವನ ತಂದೆತಾಯಿಗಳು ಪ್ರಶಂಸಿಸುತ್ತಾರೆ! ನಮ್ಮ ಕಾಲಕ್ಕೆ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ, ಉಕ್ತಲೇಖನ (ಆಉಛಿಣಚಿಣುಠಟಿ) ಮುಕ್ಕಾಲುಗಂಟೆಗಳ ಕಾಲ ಬರೆಸುತ್ತಿದ್ದರು. ಕೈಬರವಣಿಗೆ ಮುದ್ದಾಗಿರಬೇಕೆಂದು. ಈಗೆಲ್ಲ ಅದು ನಿಂತುಹೋಗಿದೆ. ಹುಡುಗ ಎಷ್ಟೇ ಬುದ್ಧಿವಂತನಾದರೂ, ಅವನ ಬರವಣಿಗೆ ಅವನಿಗೇ ಗೊತ್ತಾಗುವುದಿಲ್ಲ.

ಉಪಾಧ್ಯಾಯಿನಿಯೊಬ್ಬಳು ವಿದ್ಯಾರ್ಥಿಗಳಿಗೆ ಉಕ್ತಲೇಖನ ಕೊಟ್ಟು, ಅವರು ಬರೆದನಂತರ, ಅವುಗಳನ್ನು ಒಂದೊಂದಾಗಿ ನೋಡಿ ಅವಳ ಪ್ರತಿಕ್ರಿಯೆಯನ್ನು ಬರೆದುಕೊಟ್ಟಳು. ಒಬ್ಬ ಹುಡುಗನಿಗೆ ಅವಳು ಏನು ಬರೆದಿದ್ದಾಳೆಂದು ಗೊತ್ತಾಗಲಿಲ್ಲ. ಅದನ್ನು ತೋರಿಸಿದಾಗ, ಉಪಾಧ್ಯಾಯಿನಿಯೂ ಅರ್ಧಗಂಟೆ ಯೋಚಿಸಿ ನಂತರ ಹೇಳಿದಳಂತೆ ಅದು. ಸ್ಪಷ್ಟವಾಗಿ ಬರೆಯಬೇಕು ಎಂದು!

ಹುಡುಗರು ಪರೀಕ್ಷೆಯಲ್ಲಿ ನೂರಕ್ಕೆ ಮುವ್ವತ್ತೈದು ಅಂಕಗಳು ಬಂದು ತೇರ್ಗಡೆಯಾದರೆ ಸಾಕು ಎಂದು ಭಾವಿಸಿದರೆ, ನಂತರ ಅವನಿಗೆ ವಿದ್ಯಾ ಇಲಾಖೆಯಲ್ಲೇ ಅಧಿಕಾರಿ ಕೆಲಸ ದೊರಕಿದರೆ, ಅವನಿಂದ ವ್ಯಾಸಂಗ ಪಡೆಯುವ ವಿದ್ಯಾರ್ಥಿಯ ಗತಿ ಏನಾಗಬೇಕು?

7. ಆಗಿನ ಅಡುಗೆ ಮನೆ–ಈಗಿನ ಕಿಚನ್ ಮಿಷನ್

ಅಡುಗೆ ಮನೆಯಲ್ಲಿ ಆಗಿರುವ ಬದಲಾವಣೆಗಳಂತೂ ವಿವರಿಸುವುದಕ್ಕೆ ಸಾಧ್ಯವಿಲ್ಲ. ನಾನಾ ತರಹ ಮಿಕ್ಸಿಗಳು, ಚಪಾತಿ ಮಾಡುವುದಕ್ಕೆ, ಬೋಂಡಾ ಕರಿಯುವುದಕ್ಕೆ ಸಲಕರಣೆಗಳು, ಕುಕ್ಕರುಗಳು, ಕೆಲವು ಪದಾರ್ಥಗಳಂತೂ ರೆಡಿವೇಡ್ ಸಿಗುತ್ತವೆ. ಅಷ್ಟೇಕೆ ಸ್ವಾಮಿ, ಒಂದು ಚಿತ್ರವನ್ನು ನೋಡಿದೆ. ಈಗೆಲ್ಲ ರಾಗಿ ಉಪಯೋಗಿಸುವುದೇ ಅಪರೂಪ. ಅಂತಹುದರಲ್ಲಿ. ರಾಗಿಮುದ್ದೆ ಮಾಡುವುದಕ್ಕೆ ಒಂದು ಯಂತ್ರ. ಅದರಲ್ಲಿ ಎರಡು ದೊಡ್ಡ ಬಟ್ಟಲುಗಳಿವೆ. ಒಂದರಲ್ಲಿ ರಾಗಿಹಿಟ್ಟು, ಇನ್ನೊಂದರಲ್ಲಿ ಅದಕ್ಕೆ ಸಾಕಷ್ಟು ನೀರು ಹಾಕಿ, ಒಂದು ಚಮಚ ಎಣ್ಣೆ, ಉಪ್ಪು ಬೆರೆಸಿ ಸ್ವಿಚ್ ಹಾಕಿದರೆ, ಐದೇ ನಿಮಿಷದಲ್ಲಿ, ಹಿಟ್ಟು ಬೆಂದು,



ಮುಂದಿನ ಕೊಳವೆಯಿಂದ ಒಂದು ಹೇರಳೆಹಣ್ಣಿನ ಗಾತ್ರದ ಮುದ್ದೆಗಳು ಪಟಕ್ ಪಟಕ್ ಅಂತ ಹೊರಗೆ ಬೀಳುತ್ತೆ!

ಮೊನ್ನೆ ನಮ್ಮ ಪಕ್ಕದ ಮನೆಯಾಕೆ ಗಂಡನಿಗೆ ಹೇಳುತ್ತಿದ್ದರಂತೆ, 'ನೋಡಿ ಆ ಮೂಲೆಮನೆ ರುಕ್ಮಿಣೀಬಾಯಿ ಒಂದು ಮಿಕ್ಸಿ ತಂದಿದಾರೆ, ಹತ್ತು ಹದಿನೈದು ಮಂದಿಗೆ ಆಗುವಷ್ಟು ಚಟ್ನಿಯನ್ನು ಮೂರೇ ನಿಮಿಷದಲ್ಲಿ ಮಾಡಬಹುದಂತೆ' ಎಂದು ಹೇಳಿ ಚಿತಾವಣೆಮಾಡಿ ಆ ದಿನವೇ ತರಿಸಿಕೊಂಡರಂತೆ.

ನಮ್ಮ ಕಾಲದಲ್ಲಿ ಒನಕೆ ರುಬ್ಬುಗುಂಡು, ಒರಳು, ಬಳಕೆ ಆಗುತ್ತಿತ್ತು. ಮೊರ, ಚಿಬ್ಬಲು, ತಟ್ಟೆ ಬಳಕೆ ಇದ್ದವು. ಈಗ ಅವೆಲ್ಲಾ ವಸ್ತು ಪ್ರದರ್ಶನದ ವಸ್ತುಗಳಾಗಿವೆ. ಮೊರ ಬಾಗಿನಕ್ಕೆ ಮೀಸಲು. ಒನಕೆ ಶಾಸ್ತ್ರಕ್ಕೆ ಮೀಸಲು. ರುಬ್ಬುಗುಂಡು, ಒರಳು ಕಲ್ಲು ಬೀದಿಪಾಲು. ಇನ್ನು ರುಬ್ಬಲು ಈಗಿನ ನಾರಿಯರಿಗೆ ಶಕ್ತಿಯೇ ಇಲ್ಲ.

8. ನಮ್ಮ ಕಾಲದ ನಾಟಕ

ನಾಟಕ ಪ್ರದರ್ಶನದಲ್ಲಿಯೂ ಅನೇಕ ಬದಲಾವಣೆಗಳಾಗಿವೆ. ಹಿಂದೆಲ್ಲ ಪೆಟ್ರೊಮ್ಯಾಕ್ಸ್ ದೀಪಗಳನ್ನಿಟ್ಟುಕೊಂಡು ನಾಟಕ ಆಡುತ್ತಿದ್ದರು. ಚಿತ್ರ

ಈಗ ತರಹೇವಾರಿ ಬಣ್ಣಬಣ್ಣದ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿರುತ್ತಾರೆ. ಅದನ್ನೆಲ್ಲ ಜೋಡಿಸುವುದಕ್ಕೇ ಬೇಕಾದಷ್ಟು ಕಂಪೆನಿಗಳು ಇವೆ.

ಹಿಂದೆ ನಾಟಕಧುರಂಧರ ವರದಾಚಾರ್ ಕಂಪೆನಿಯಲ್ಲಿ ಹೆಣ್ಣುಪಾತ್ರಕ್ಕೆ ಕೆಲವು ಗಂಡಸರು ಮೀಸಲಾಗಿರುತ್ತಿದ್ದರು. ಈಚೀಚಿನ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಹುಟ್ಟಿಕೊಂಡ ಸಣ್ಣಪುಟ್ಟ ನಾಟಕಮಂಡಲಿಗಳಲ್ಲೂ ಹೆಣ್ಣುಪಾತ್ರವನ್ನು ಗಂಡಸರೇ ಮಾಡುತ್ತಿದ್ದರು. ಆಧುನಿಕ ತಂಡಗಳಲ್ಲಿ, ಹೆಣ್ಣುಪಾತ್ರಕ್ಕೆ ಹೆಂಗಸರೇ ಮುಂದುವರಿದು ಬರುತ್ತಿದ್ದಾರೆ. ಅದು ಸ್ವಾಭಾವಿಕವಾಗಿಯೇ ಹೆಚ್ಚು ಕಳೆಕೊಟ್ಟಿದೆ.

ಹಿಂದೆ ದೊಡ್ಡದಾಗಿ ಗುಂಡಿ ತೋಡಿ, ಬರುವ ಮಣ್ಣನ್ನೆಲ್ಲ ಮೇಲಕ್ಕೆ ಹರಡಿದಾಗ ಅದು ನಾಟಕ ವೇದಿಕೆ ಆಡುವುದಕ್ಕೆ, ಗುಂಡಿಯಲ್ಲಿ ಚಾಪೆ ಹಾಕಿ, ನಾಟಕವನ್ನು ನೋಡುವ ನಾಲ್ಕಾಣೆ ಪ್ರೇಕ್ಷಕರು, ಮಡಿ ಹೆಂಗಸರು ಚಾಪೆಯನ್ನು ತೆಗೆದುಕೊಂಡು ಹೋಗಿ ನಾಟಕವನ್ನು ನೋಡುತ್ತಿದ್ದರಂತೆ. ನಮ್ಮ ಪಕ್ಕದ ಮನೆಯಲ್ಲಿ ಇದ್ದ. ನನ್ನ ಮಗಳನ್ನು ಕರೆದುಕೊಂಡು ಹೋಗುತ್ತಿದ್ದರು.

9. ಸಗಣಿ–ರಂಗೋಲಿ ಈಗೆಲ್ಲಿ

ಮನೆಯ ಮುಂದೆ ದೇವರ ಉತ್ಸವ ಬಂದಾಗ, ರಂಗೋಲಿ ಎಷ್ಟು ಚೆನ್ನಾಗಿ ಕೈಯಲ್ಲಿ ಬರೆಯುತ್ತಿದ್ದರು. ಈಗ ಕೈಯಿಂದ ಬರೆಯುವ ಪ್ರಮೇಯವಿಲ್ಲ. ಅದಕ್ಕೂ ಒಂದು ಕೈ ಸಲಕರಣೆ ಬಂದಿದೆ. ಅದರಲ್ಲಿ ರಂಗೋಲಿ ತುಂಬಿ ಮನೆಯಮುಂದಿಟ್ಟು, ಸ್ವಿಚ್ ಹಾಕಿದರೆ. ತರಹಾವಾರಿ ಚಿತ್ರದ ಆಕಾರಗಳು!





ರಂಗೋಲಿ ಪ್ರತಿದಿನ ಬೆಳಿಗ್ಗೆ ಮನೆ ಮುಂದೆ ಹಾಕುತ್ತಿದ್ದರು. ಸಗಣಿಯಿಂದ ನೆಲ ಸಾರಿಸುತ್ತಿದ್ದರು. ಈಗ ಸಗಣಿ ಪತ್ತೆ ಇಲ್ಲ. ರಂಗೋಲಿ ಹಾಕಲು ಅಂಗಳವೇ ಇಲ್ಲ. ಅಂಗಳ ಇದ್ದರೂ ಎಷ್ಟೋ ಹುಡುಗಿಯರಿಗೆ ಇಂದು ರಂಗೋಲಿ ಹಾಕಲು ಬರುವುದೇ ಇಲ್ಲ. ಪ್ರತಿ ಹಬ್ಬಕ್ಕೂ ಇಂಥದೇ ರಂಗೋಲಿ ಹಾಕಬೇಕೆಂದು ಶಾಸ್ತ್ರವಿತ್ತು.

ನಮಗೆ ಇನ್ನೇನು ಬೇಕು, ಇನ್ನೇನು ಬೇಡ. ಎಂದು ನಿರ್ಧರಿಸುವುದೇ ಕಷ್ಟವಾಗಿದೆ. ನಮಗೆ ಈಗಿರುವ ಒಂದೇ ಒಂದು ಕಷ್ಟ ಎಂದರೆ, ನಮ್ಮ ಬಾಯಲ್ಲಿ ಹಾಕಿಕೊಂಡ ಅನ್ನದ ತುತ್ತನ್ನು ನಾವೇ ಅಗಿದು ನುಂಗಬೇಕು! ಮರಿಮಕ್ಕಳ ಕಾಲಕ್ಕೆ ಅದಕ್ಕೂ ಒಂದು ಸಲಕರಣೆ ಕಂಡುಹಿಡಿಯಬಹುದು!

10 ಜಟಕಾದಿಂದ ಜೆಟ್‌ವರೆಗೆ ಸಾಗಿದ ದಾರಿ

ಅಗೆಲ್ಲಾ ಹತ್ತು ಹನ್ನೆರಡು ಮೈಲಿ ದೂರವಿರುವ ಹಳ್ಳಿಗೆ ಕಾಲ್ನಡಿಗೆಯಲ್ಲೇ ಹೋಗುತ್ತಿದ್ದೆವು. ಬಸ್ ಸೌಕರ್ಯ ಬಂದ ನಂತರ ಎರಡು ಮೈಲಿ ದೂರಕ್ಕೂ ಬಸ್ಸಿಗಾಗಿ ಅರ್ಧ ಗಂಟೆ ಕಾಯುತ್ತೇವೆ. ಕಾರು, ರೈಲು, ವಿಮಾನ ಪ್ರಯಾಣ ಜಾರಿಗೆ ಬಂದ ಮೇಲಂತೂ ಕೇಳಲೇಬೇಡಿ. ದೇಶದಿಂದ ದೇಶಕ್ಕೆ ಹೋಗುವುದು ಅಡುಗೆ ಮನೆಯಿಂದ ಬಚ್ಚಲುಮನೆಗೆ ಹೋದಂತೆ.






ಮೊನ್ನೆ ನನ್ನ ಸ್ನೇಹಿತರು ಚಿರಾಗ್ ನಮ್ಮ ಆಫೀಸಿಗೆ ಬಂದಿದ್ದರು. ಈಗೆಲ್ಲ ಚಳಿಗಾಲ ಶುರುವಾಗಿರುವುದರಿಂದ ಸಂಜೆ ಐದು ಗಂಟೆಗೆಲ್ಲ ಕತ್ತಲಾಗಿರುತ್ತೆ. ಅವರು ನನ್ನನ್ನು ಅವರ ಕಾರಿನಲ್ಲಿ ಮನೆಗೆ ಬಿಡುವುದಾಗಿ ತಿಳಿಸಿದರು. ಇಬ್ಬರೂ ಆಫೀಸಿನಿಂದ ಹೊರಗಡೆ ಹೊರಟೆವು. ಅವರು ನನ್ನ ಪಕ್ಕದಲ್ಲಿ ಇರುವಾಗಲೆ, ಅವರ ಕಾರು ಇದ್ದ ಸ್ಥಳದಿಂದ ಹಿಂದುಹಿಂದಕ್ಕೆ ಬರುತ್ತಿತ್ತು! ನನಗೆ ಆಶ್ಚರ್ಯವಾಯಿತು ಏನೋ ತೊಂದರೆಯಾಗಿರಬೇಕೆಂದು. ನಂತರ ಗೊತ್ತಾಯಿತು. ಅವರು ರಿಮೋಟ್ ಕಂಟ್ರೋಲ್ ಇಟ್ಟುಕೊಂಡಿದ್ದಾರಂತೆ. ಈ ಕಾರಿನ ಬೆಲೆ 52,000 ಡಾಲರ್. ನೋಡಿ ಹೇಗಿದೆ ಈ ಕಾರು!





ಈ ಬದಲಾವಣೆಗಳ ಪರಿಣಾಮ ಏನಾಗುತ್ತೆ ಅಂದರೆ ನಮ್ಮ ಮೆದುಳಿನ ಶಕ್ತಿ ಕಮ್ಮಿಯಾಗುತ್ತೆ. ಸಹಜವಾಗಿಯೇ ಕೈಕಾಲುಗಳಿಗೆ ದೊರೆಯುತ್ತಿದ್ದ ವ್ಯಾಯಾಮ ಸಿಗದಂತಾಗಿ ಸಣ್ಣಪುಟ್ಟ ಕಾಯಿಲೆಗಳಿಗೆ ವೈದ್ಯರಿಗೆ ಶರಣುಹೋಗುತ್ತೇವೆ.

ನಮ್ಮ ಕಾಲಕ್ಕೆ ಇದ್ದಿದ್ದು ಜಟಕಾಗಾಡಿ, ಎತ್ತಿನಗಾಡಿ ಸಾರ್ವಜನಿಕ ವಾಹನಗಳು. ಕುದುರೆಸಾರೋಟು, ಕುದುರೆ ಸವಾರಿ, ಪಲ್ಲಕ್ಕಿ, ಶ್ರೀಮಂತರ ಪೀಠಾಧಿಪಾತಿಗಳ ವಾಹನ. ಆಮೇಲೆ ಬಸ್ ಬಂತು. ಖಾಸಗಿಜನ ಕಾರು ಬಳಸಿದರು. ಬಸ್



ಬಡವರ ವಾಹನವಾಗಿದ್ದರೆ. ಕಾರು ಶ್ರೀಮಂತರ ಸಾಧನವಾಯಿತು. ಸೈಕಲ್ ಮಧ್ಯಮ ವರ್ಗದವರ ಪ್ರಯಾಣ ಸಾಧನವಾಗಿತ್ತು.

ಬದಲಾವಣೆಗಳ ಅಗತ್ಯವಿಲ್ಲವೆಂದು ನಾನು ಹೇಳುತ್ತಿಲ್ಲ. ಏಕೆಂದರೆ, ನಾವು ಈಗ ಎತ್ತಿನಗಾಡಿಯಲ್ಲಿ ಪ್ರಯಾಣ ಮಾಡುತ್ತಿಲ್ಲ. ಆದರೆ ಅವು ಒಂದು ಸೀಮಿತಮಟ್ಟದಲ್ಲಿದ್ದರೆ ಉತ್ತಮ ಎಂದು ನನ್ನ ಅಭಿಪ್ರಾಯ. ನನ್ನ ಅಭಿಪ್ರಾಯವನ್ನು ಇನ್ನೊಬ್ಬರಮೇಲೂ ಹೇರುವಷ್ಟು ಶಕ್ತ ನಾನಲ್ಲ.

ನಮ್ಮ ಕಾಲದಲ್ಲೇ ಆಗಿರುವ ಬದಲಾವಣೆಗಳು ಅಜಗಜಾಂತರ. ನಮ್ಮ ಮೊಮ್ಮಕ್ಕಳು, ಮರಿಮಕ್ಕಳ ಕಾಲಕ್ಕೆ ಬದಲಾವಣೆಗಳು ಯಾವ ಮಟ್ಟದಲ್ಲಿರಬಹುದು ಊಹಿಸುವುದೂ ಕಷ್ಟ.

11. ಕಚೇರಿ ಕೆಲಸ

ಆಫೀಸ್ ಕೆಲಸಕಾರ್ಯಗಳಲ್ಲೂ ಬದಲಾವಣೆ ಕಂಡುಬಂದಿವೆ. ಇಂಡಿಯದಲ್ಲಿ ನಾನು 39 ವರ್ಷಗಳ ಕೆಲಸ ಕಾಫೀಬೋರ್ಡಿನಲ್ಲಿ ಮಾಡಿದ್ದೇನೆ. ಈಗ 28 ವರ್ಷಗಳಿಂದ ಅಮೇರಿಕಾದಲ್ಲಿ ಮಾಡುತ್ತಿರುವ ಕೆಲಸದ ರೀತಿಗೂ ಬಹಳ ವ್ಯತ್ಯಾಸಗಳನ್ನು ಕಾಣುತ್ತಿದ್ದೇನೆ. ಆಗೆಲ್ಲಾ ಕಂಪ್ಯೂಟರ್ ಇರಲಿಲ್ಲ. ನಾನು ಕಾಫೀಬೋರ್ಡಿನಿಂದ ನಿವೃತ್ತನಾದಾಗ (1984) ನಮ್ಮ ಆಫೀಸಿನಲ್ಲಿ ಎರಡು ಮೂರು ಕಂಪ್ಯೂಟರ್ಗಳಿದ್ದುವು. ಲೆಕ್ಕವನ್ನೆಲ್ಲ ಕೈಯಿಂದಲೇ ಮಾಡಬೇಕಾಗಿತ್ತು. ಒಂದು ಸ್ವಲ್ಪ ತಪ್ಪಾದರೂ, ಅದನ್ನು ಸರಿಪಡಿಸುವುದಕ್ಕೆ ಗಂಟೆಗಟ್ಟಲೆ ಬೇಕಾಗುತ್ತಿತ್ತು. ನನಗೆ ಟೈಪಿಂಗ್ ಗೊತ್ತಿದ್ದುದರಿಂದ ಒಂದೇ ವಾರದಲ್ಲಿ ಇಲ್ಲಿಯ ಆಫೀಸ್ ರೀತಿನೀತಿಗಳಿಗೆ ಹೊಂದಿಕೊಂಡುಬಿಟ್ಟೆ. ನಮ್ಮ ಆಫೀಸರ್ ನಾಗಾನಂದ ಕೂಡಾ ಬಹಳ ಸಹನೆಯಿಂದ ಹೇಳಿಕೊಟ್ಟರು. 28 ವರ್ಷಗಳಿಂದ ಅವರ ಬಳಿಯಲ್ಲಿಯೇ ಉದ್ಯೋಗಿಯಾಗಿದ್ದೇನೆ.

ಎಷ್ಟೇ ಬದಲಾವಣೆಗಳನ್ನು ಎಲ್ಲ ಕ್ಷೇತ್ರಗಳಲ್ಲೂ ಕಂಡುಬಂದರೂ, ಅನಾಚಾರಗಳೇ ಹೆಚ್ಚಾಗುತ್ತಿರುವ ಈ ಪ್ರಪಂಚದಲ್ಲಿ ಮನುಷ್ಯತ್ವ ಬದಲಾವಣೆ ಸಾಧ್ಯವೇ? ಇಷ್ಟೆಲ್ಲಾ ಮುಂದುವರಿದಿದ್ದರೂ ನಮ್ಮ ಮುಂದೆಯೇ ಕಾಣಿಸುತ್ತಿರುವ ದೌರ್ಜನ್ಯ, ಕೊಲೆ, ರಕ್ತಪಾತ, ಕ್ರೌರ್ಯ, ದರೋಡೆ, ಎಲ್ಲವೂ ದಿನದಿನಕ್ಕೂ ಹೆಚ್ಚಾಗುತ್ತಿವೆ. ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ

ಅನ್ನುವುದನ್ನು ಪುಸ್ತಕದಲ್ಲೂ ಓದಿದ್ದೇವೆ. ಪುರಾಣದಲ್ಲೂ ಕೇಳಿದ್ದೇವೆ, ಟೀವೀ ಮೂಲಕವೂ ನೋಡಿದ್ದೇವೆ. ಬಹುಶಃ ಆ ದೇವರಿಗೂ ನಿವಾರಣೆಮಾಡುವುದು ಸಾಧ್ಯವಿಲ್ಲದಷ್ಟು ಭ್ರಷ್ಟಾಚಾರಗಳು ಆಗುತ್ತಿವೆ. ಅದಕ್ಕೇ ಅವನು ಈ ಕಡೆ ತಿರುಗಿನೋಡಿಲ್ಲವೆಂದು ತೋರುತ್ತೆ!


12. ಕನಸುಗಳು ನಿಜವೇ

ಸಾಮಾನ್ಯವಾಗಿ ಜಲಬಾಧೆಯಿಂದಾಗಿ ರಾತ್ರೆ ಎರಡು ಮೂರು ಸಲ ಎಚ್ಚರವಾಗಿರುತ್ತೇನೆ. ಒಂದುಬಾರಿ ಎದ್ದಾಗ ಕಣ್ಣು ಎಳೆಯುತ್ತಿದ್ದರೂ ಬಲವಂತವಾಗಿ ನಾಲ್ಕಾರು ಅಂಶಗಳನ್ನು ಗುರ್ತುಹಾಕಿ ಮಲಗಿದೆ. ಈ ಕೆಲವಾರು ವ್ಯಕ್ತಿಗಳನ್ನು ಕನಸಿನಲ್ಲೂ ನೋಡಿದ ಜ್ಞಾಪಕ. ನಿಜಪ್ರಪಂಚದಲ್ಲೂ ನೋಡಿದ್ದೇನೆ. ಆದ್ದರಿಂದ ಅದು ಕೇವಲ ಕನಸು ಎಂದು ತಳ್ಳಿಹಾಕಲು ಸಾಧ್ಯವಿಲ್ಲ.

ಒಳ್ಳೆಯ ಗುಣಗಳು, ಕೆಟ್ಟಗುಣಗಳು ಅನೂಚಾನವಾಗಿ ಬಂದಿರಲಿಕ್ಕೂ ಸಾಕು. ಅಥವಾ ಕೆಟ್ಟ ಸಹವಾಸದಿಂದಲೂ ನಮ್ಮೊಳಗೆ ಸೇರಿರಬಹುದು. ಹುಟ್ಟುಗುಣವಾಗಿದ್ದರೆ ಅದನ್ನು ಸರಿಪಡಿಸಲು ಸೃಷ್ಟಿಕರ್ತನಾದ ಬ್ರಹ್ಮನಿಂದಲೂ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಸಹವಾಸದೋಷದಿಂದಾಗಿ ಅಂಟಿಕೊಂಡಿದ್ದರೆ ಬದಲಾವಣೆ ಮಾಡಲು ಮಾರ್ಗವಿದೆ. ಆದರೆ ಅದನ್ನು ಅವರವರೇ ತೀರ್ಮಾನಮಾಡಬೇಕು.

13. ಮನೆ ಕುಂಬಳವನ್ನು ಮನೆಯವರೇ ನೋಡಿರಲಿಲ್ಲ

ಬುಕ್ಕಾಂಬುಧಿಯಿಂದ ಮೂರು ಮೈಲಿ ದೂರದಲ್ಲಿದೆ ತಾವರೇಕೆರೆ. ಅಲ್ಲೇ ನಮ್ಮ ಅಣ್ಣನ ಮಾವನ ಮನೆ ಇರುವುದು. ನಮ್ಮ ಅಣ್ಣನ ಮಗನ ಮಾವನ ಮನೆಯೂ ಅದೇ. ತಾವರೇಕೆರೆ ಶಂಕರಯ್ಯನವರು ಮನೆಯ ಯಜಮಾನರು. ಅವರ ಹಿರಿಯ ಮಗಳು ಭಾಗೀರಥಮ್ಮ ನಮ್ಮ ಅಣ್ಣನ ಹೆಂಡತಿ. ನಮ್ಮ ತಂದೆಯವರು (ವೆಂಕಟರಮಣ ಭಾಗವತರು) ವರ್ಷಕ್ಕೊಂದುಬಾರಿಯಾದರೂ ಅಲ್ಲಿಗೆ ಹೋಗುತ್ತಿದ್ದರು.



ಶಂಕರಯ್ಯನವರ ಹಳೆಯ ಮನೆ ಮುಂಭಾಗದಲ್ಲಿ ದೊಡ್ಡ ಪಡಸಾಲೆ. ಅಲ್ಲಿ ಒಂದು ಭಾಗದಲ್ಲಿ ಎರಡು ಮೂರು

ಹಸುಗಳನ್ನು ಕಟ್ಟುತ್ತಿದ್ದರು. ಉಳಿದ ಭಾಗದಲ್ಲಿ ಯಾರಾದರೂ ಹೊರಗಿನಿಂದ ಬಂದರೆ ಮಲಗಲು ಅವಕಾಶವಿತ್ತು. ಅಲ್ಲಿ ಕೋಟು, ಶರ್ಟ್ ತಗುಲಿಹಾಕಲು ಒಂದು ಮರದ ಕೊಕ್ಕೆಗಳುಳ್ಳ ಕೋಟ್ ಹ್ಯಾಂಗರ್ ಗೋಡೆಗೆ ತಗುಲಿಸಿದ್ದರು. ಆದರೆ ಅದನ್ನು ಯಾರೂ ಉಪಯೋಗಿಸುತ್ತಿರಲಿಲ್ಲ.

ನಮ್ಮ ತಂದೆಯವರು ಒಂದುಸಲ ತಾವರೇಕೆರೆಗೆ ಹೋದಾಗ ಅವರ ಗಂಟನ್ನು (ಗಂಟು ಅಂದರೆ ಅದರಲ್ಲಿದ್ದದ್ದು ಎರಡು ಉಡುವ ಪಂಚೆ, ಒಂದು ಶರ್ಟ್, ಸ್ನಾನಕ್ಕೆ ಬೇಕಾದ ಎರಡು ಥೋಟಾ ಪಂಚೆ, ವಿಭೂತಿಯ ಡಬ್ಬಿ) ಕೋಟ್ ಹ್ಯಾಂಗರ್ ಮೇಲೆ ಇಡಲು ಹೋದಾಗ ಅಲ್ಲಿ ಒಂದು ದೊಡ್ಡ ಕುಂಬಳಕಾಯಿ ಕೂತಿತ್ತು! ಕುಂಬಳಕಾಯನ್ನು ಅಲ್ಲಿ ಏಕೆ ಇಟ್ಟಿದ್ದಾರೆ ಎಂದು ಅವರಿಗೆ ಆಶ್ಚರ್ಯ, ಶಂಕರಯ್ಯನವರ ಮಕ್ಕಳನ್ನು ವಿಚಾರಿಸಿದಾಗ ಅವರ್ಯಾರಿಗೂ ಗೊತ್ತಿಲ್ಲವೆಂದು ಹೇಳಿದರು. ಮನೆಯವರೊಬ್ಬರೂ ಆ ಕುಂಬಳಕಾಯನ್ನು ನೋಡಿಯೇ ಇರಲಿಲ್ಲವಂತೆ.

ಕೋಟ್ ಹ್ಯಾಂಗರ್ ತಗುಲಿಹಾಕಿರುವ ಗೋಡೆಯ ಹಿಂಭಾಗದಲ್ಲಿ ಕುಂಬಳ ಬಳ್ಳಿಯೊಂದು ಹುಟ್ಟಿ ಮೇಲ್ಪಾಗದಿಂದ ಇಳೀಬಿದ್ದು ಸಣ್ಣ ಹೀಚುಬಿಟ್ಟು ದೊಡ್ಡ ಕುಂಬಳಕಾಯಾಗಿತ್ತು. ಆದರೆ ಮನೆಯವರೊಬ್ಬರೂ ಅಷ್ಟೊಂದು ದಢೀ ಕುಂಬಳಕಾಯನ್ನು ನೋಡದೇ ಇದ್ದದ್ದು ಆಶ್ಚರ್ಯದ ಸಂಗತಿ!

14. ಪಿಪಿಪಿ ಅರ್ಥಾತ್ ಪ್ರಾಣೇಶ್ ಪ್ರಿಂಟಿಂಗ್ ಪ್ರೆಸ್

ಚಿಕ್ಕಮಗಳೂರಿನಲ್ಲಿ ನಾನು ಕಂಡಂತೆ ನಾಲ್ಕಾರು ಪ್ರಿಂಟಿಂಗ್ ಪ್ರೆಸ್‌ಗಳಿದ್ದುವು. ಮಂಜುನಾಥ ಪವರ್ ಪ್ರಸ್, ಮಲೆನಾಡು ಪ್ರಿಂಟಿಂಗ್ ಪ್ರೆಸ್, ಕನ್ನಿಕಾಪರಮೇಶ್ವರಿ ಪ್ರೆಸ್, ದುರ್ಗಾಪ್ರೆಸ್ ಮತ್ತು ಪ್ರಾಣೇಶ್ ಪ್ರಿಂಟಿಂಗ್ ಪ್ರೆಸ್. ಪ್ರಾಣೇಶ್ ಪ್ರಿಂಟಿಂಗ್ ಪ್ರೆಸ್ಸನ್ನು ಪಿಪಿಪಿ ಎಂದು ಕರೆಯುತ್ತಿದ್ದರು. ಅಲ್ಲಿ ಅನುಭವಸ್ಥರಾದ ಕೆಲಸಗಾರರು ಇರಲಿಲ್ಲ. ಆಗೆಲ್ಲ ಸಣ್ಣ ಅಕ್ಷರದ ಮೊಳೆಗಳನ್ನು ಕೈಯಲ್ಲಿ ಜೋಡಿಸಿ ಅಚ್ಚು ಹಾಕುವುದಕ್ಕೆ ಕೊಡುತ್ತಿದ್ದರು. ಆ ಪ್ರೆಸ್ಸಿನಲ್ಲಿ ಅಚ್ಚಾದ ಮದುವೆ, ಮುಂಜಿ ಮುಂತಾದ ಕರೆಯೋಲೆಗಳಲ್ಲೂ ಏಳೆಂಟು ತಪ್ಪುಗಳಿರುತ್ತಿದ್ದುವು. ನಾನೇ ಒಂದುಬಾರಿ ಮದುವೆ ಕರೆಯೋಲೆಯಲ್ಲಿ ತಪ್ಪುತಪ್ಪಾಗಿದ್ದ ಪದಗಳನ್ನು ತಿದ್ದಿ ಅವರಿಗೇ ವಾಪಸ್ ಕಳುಹಿಸಿದ್ದೆ. ನಿಮ್ಮ ಕೆಲಸಗಾರರಿಗೆ ಎಚ್ಚರದಿಂದ ಕೆಲಸಮಾಡಲು ತಿಳಿಸಿ ಎಂದು.

ಮಂಜುನಾಥ ಪ್ರೆಸ್‌ನವರ ಮಾಲಿಕರು ಗುಂಡೂರಾವ್, ನಂಜುಂಡಯ್ಯ ಇಬ್ಬರೂ ನನಗೆ ಚಿರಪರಿಚಿತರು. ಸಂಜೆ ನಾನು ಕಾಫೀಬೋರ್ಡ್ ಆಫೀಸಿನಿಂದ ಬಂದಾಗ ಅವರ ಪ್ರೆಸ್ಸಿಗೆ ಭೇಟಿ ಇದ್ದೇ ಇರುತ್ತಿತ್ತು. ಅಲ್ಲಿ ಅಚ್ಚಾದ ನಾಲ್ಕಾರು

ಪುಟಗಳನ್ನು, ನೀನೂ ಒಂದುಸಲ ನೋಡಿಕೊಡು ಎಂದು ಕೊಡುತ್ತಿದ್ದರು. ನನ್ನ ಮೇಲೆ ಅಷ್ಟು ಭರವಸೆ.

ನನ್ನ ಸ್ನೇಹಿತರೊಬ್ಬರು, ಹೆಸರು ಶ್ರೀನಿವಾಸ ಶೆಟ್ಟಿ. ಅವನ ಮದುವೆ ಗೊತ್ತಾಗಿತ್ತು. ಲಗ್ನಪತ್ರಿಕೆಯನ್ನು ಪೀಪೀಪಿನಲ್ಲಿ ಮಾಡಿಸಿದ್ದ. ಅದನ್ನು ತೋರಿಸಲು ನಾನು ಮಂಜುನಾಥ ಪ್ರೆಸ್‌ನಲ್ಲಿದ್ದಾಗ ಬಂದ. ನಾನು ಕೂಡಲೇ ಅವನಿಗೆ ಹೇಳಿದೆ. ಕಂಡೂಕಂಡೂ ಆ ಪ್ರೆಸ್‌ನಲ್ಲಿ ಏಕೆ ಪ್ರಿಂಟ್ ಮಾಡಿಸಿದೆ ಎಂದೆ. ಆ ಪ್ರೆಸ್ ಮಾಲಿಕರು ಅವನಿಗೆ ಹೆಣ್ಣು ಕೊಡುತ್ತಿರುವ ಮಾವ. ಆದ್ದರಿಂದ ಅಲ್ಲೇ ಹೋಗಬೇಕಾಯಿತು. ನಾನೇ ಪಕ್ಕದಲ್ಲಿ ಕುಳಿತು ತಪ್ಪುಗಳನ್ನೆಲ್ಲಾ ತಿದ್ದಿ ಸರಿಪಡಿಸಿದೆ ಎಂದು ಹೇಳಿದ. ಅದನ್ನು ನನಗೆ ತೋರಿಸಿದ ಒಂದು ಕ್ಷಣದಲ್ಲಿ ನನಗೆ ಒಂದು ತಪ್ಪು ಕಾಣಿಸಿತು. ಅದನ್ನು ತೋರಿಸಿದಕೂಡಲೆ ಶೆಟ್ಟಿಯ ಮುಖ ಇನ್ನೂ ಕಪ್ಪಾಯಿತು. ನಾನೇ ಅವನಿಗೆ ಸಮಾಧಾನಮಾಡಿ, ಯೋಚಿಸಬೇಡ ಯಾರೂ ಅದನ್ನು ಗಮನಿಸುವುದಿಲ್ಲ. ಹೆಣ್ಣು ಗಂಡಿನ ಹೆಸರು, ಎಲ್ಲಿ ಮದುವೆ, ತಾರೀಖು ಅಷ್ಟೇ ನೋಡುವುದು ಎಂದು ಹೇಳಿ ಕಾಫೀ ಕೊಡಿಸಿ ಕಳುಹಿಸಿದೆ!

15. ಒಂದೊಂದು ಮಾತಿಗೂ ನಗುನಗು

ಇದ್ದಕ್ಕಿದ್ದಂತೆ ದುಡುಂ ಅಂತ ಬಂದ ಶಿವರಾಮು ಅವನ ಸ್ನೇಹಿತ ರಾಮಸ್ವಾಮಿಯವರ ಮನೆಗೆ. ರಾಮಸ್ವಾಮಿಯವರು ಕಾಲೇಜಿನಲ್ಲಿ ಸಂಸ್ಕೃತ ಪಂಡಿತರು. ಇಬ್ಬರೂ ಬಹಳ ವರ್ಷಗಳಿಂದ ಪರಿಚಿತರಾದವರು.

ಏನ್ ರಾಯರೇ, ಸಂಸ್ಕೃತದಲ್ಲಿ ಹೆಂಡತಿಗೆ ಏನ್ ಅಂತಾರೆ ಎಂದು ಕೇಳಿದ. ಅವರು ನಕ್ಕು, ಸಂಸ್ಕೃತ ಒಂದೇ ಅಲ್ಲ ಶಿವರಾಮು, ಯಾವ ಭಾಷೆಯಲ್ಲೂ ಹೆಂಡತಿಗೆ ಏನೂ ಅನ್ನಬಾರದು. ಹುಶಾರಾಗಿರು ಎಂದು ಹೇಳಿ ಕಳುಹಿಸಿದರು!

ವೆಂಕಟಸುಬ್ಬು ಬಹಳ ಮೃದುಸ್ವಭಾವದವನು. ಎಷ್ಟು ಪ್ರಕೃತವೋ ಅಷ್ಟೇ ಮಾತು. ಹೆಂಡತಿ, ಲಕ್ಷ್ಮಿ ತದ್ವಿರುದ್ಧ. ಯಾವಾಗಲೂ ಅವಳದೇ ಯೋಚನೆ. ನೋಡಿ ನೋಡಿ ಸಾಕಾಗಿ, ಹೆಂಡತಿಗೆ ಹೇಳಿದ. ಇನ್ನು ಮೇಲಾದರೂ ನಾನು, ನನಗೆ. ನನ್ನಿಂದ ಅನ್ನುವುದನ್ನು ಬಿಟ್ಟುಬಿಡು. ನಮ್ಮಿಬ್ಬರದೂ ಅನ್ನುವುದನ್ನು ಕಲಿ ಎಂದು ಉಪದೇಶಿಸಿ. ಏನ್ ಹುಡುಕ್ತಾ ಇದೀಯ ಎಂದು ಕೇಳಿದ. ಅವಳು, ನಮ್ಮಿಬ್ಬರದೂ ನೈಟಿ ಹುಡುಕ್ತಾ ಇದೀನಿ ಅಂದಳಂತೆ!

16. ಬೇಬಿ ಸ್ವೆಟರ್ ಇದೆಯೇ ?

ಬೇಬಿ ಅನ್ನುವ ಪದವನ್ನು ಒಬ್ಬೊಬ್ಬರು ಒಂದೊಂದು ಅರ್ಥದಲ್ಲಿ ಬಳಸುತ್ತಾರೆ. ಸಾಮಾನ್ಯವಾಗಿ ಮಕ್ಕಳನ್ನು ಬೇಬಿ ಎಂದು ಕರೆಯುವುದು ಸರ್ವೇಸಾಮಾನ್ಯ. ಇನ್ನು ಕೆಲವರು ಹೆಸರು ಬೇರೆ ಇದ್ದರೂ ಬೇಬಿ ಎನ್ನುತ್ತಾರೆ. ಅದು ಏಕೆ ಹಾಗೆ ಕರೆಯುತ್ತಾರೆಂದು ಬಹುಶಃ ಕರೆಯುವವರಿಗೂ ಗೊತ್ತಿಲ್ಲ. ಕರೆಸಿಕೊಳ್ಳುವವರಿಗೂ ಗೊತ್ತಿರಲಾರದು.

ನಾನು ಕಾಫೀಬೋರ್ಡಿನಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನ ಸಹೋದ್ಯೋಗಿಯೊಬ್ಬರು, ಬೇಬಿ ಪೂರ್ಣಿಮ. ಅವಳನ್ನು ಎಲ್ಲರೂ ಬೇಬಿ ಎಂದು ಕರೆಯುತ್ತಿದ್ದರು. ಸ್ವಲ್ಪ ದಢೂತಿ ಹೆಂಗಸು, ಕಾಫೀಬೋರ್ಡಿನ ನೌಕರರಿಗಾಗಿ ಒಂದು ಕೋ ಆಪರೇಟಿವ್ ಸೊಸೈಟಿ ಸ್ಥಾಪನೆಯಾಯಿತು. ಅಲ್ಲಿ ನಿತ್ಯದ ಬಳಕೆಗೆ ಬೇಕಾದ ಸೋಪು, ಬ್ರಷ್, ಮುಂತಾದ ಕೆಲವು ವಸ್ತುಗಳು, ಸ್ವೆಟರ್, ಸೊಳ್ಳೆಪರದೆಗಳನ್ನು ತರಿಸಿ ಮಾರುತ್ತಿದ್ದರು. ಅದರ ಹಣವನ್ನು ನಾವು ಕಂತಿನಲ್ಲಿ ಕೊಡಬಹುದಾಗಿತ್ತು. ಆ ಸೌಕರ್ಯವನ್ನು ಎಲ್ಲರೂ ಉಪಯೋಗಿಸಿಕೊಳ್ಳುತ್ತಿದ್ದರು.

ಒಂದು ಬಾರಿ ತರಹಾವಾರಿ ಸ್ವೆಟರ್ಗಳನ್ನು ತರಿಸಿದ್ದರು. ನಮ್ಮ ಸ್ನೇಹಿತರೊಬ್ಬರು ಬಂದು ಬೇಬಿ ಸೈಜಿನ ಸ್ವೆಟರ್ ಇದೆಯೇ ಎಂದು ಕೇಳಿದರು. ನಾನು ಅವರ ಪಕ್ಕದಲ್ಲೇ ಇದ್ದೆ. ಹೌದು ಇದೆ. ನೀವು ಅವರನ್ನೇ ಕರೆದುಕೊಂಡು ಬಂದರೆ ಉತ್ತಮ, ನಾನು ಸ್ವಲ್ಪ ಮುಂಚೆ ನೋಡಿದೆ. ಎರಡನೇ ಮಹಡಿಯಲ್ಲಿದ್ದರು ಎಂದೇ. ಅವಳು ಬೇಬಿ ಪೂರ್ಣಿಮ ಎಂದು ತಿಳಿದು, ಅವರಲ್ಲ, ಮಕ್ಕಳ ಸೈಜಿನದು ಎಂದರು! ಎಲ್ಲರೂ ನಗುವುದಕ್ಕೆ ಶುರುಮಾಡಿದರು. ಅವನು ಪೆಚ್ಚಾಗಿಬಿಟ್ಟ.

ದಪ್ಪ ಹೆಂಗಸು ಅಂದಾಗ ಇನ್ನೊಂದು ಸ್ವಾರಸ್ಯದ ಸಂಗತಿ ಜ್ಞಾಪಕಕ್ಕೆ ಬಂತು. ಅಕೆ ಬಹಳ ದಪ್ಪದ ಹೆಂಗಸು, ಪಾಪ ಆತ ತೆಳು, ಅಷ್ಟೇ ಅಲ್ಲ. ಅವರಿಗೆ ಕತ್ತಿನಹತ್ತಿರ ಏನೋ ತೊಂದರೆಯಾಗಿ ಮಂಚದಮೇಲೆ ಮಲಗಲು ಆಗುತ್ತಿರಲಿಲ್ಲ. ಮಂಚದ ಪಕ್ಕದಲ್ಲಿ ಒಂದು ಚಾಪೆ ಹಾಸಿಕೊಂಡು, ತಲೆಗೆ ದಿಂಬು ಇಟ್ಟುಕೊಂಡು ಮಲಗುತ್ತಿದ್ದರು. ಒಂದು ದಿನ ಹೆಂಡತಿಗೆ ನಿದ್ದೆ ಬಂದಾಗ ಹೊರಳಿ ಅವರಮೇಲೆ ಬಿದ್ದುಬಿಟ್ಟಳು. ಆಕೆ ದಪ್ಪವಷ್ಟೇ ಅಲ್ಲ, ತೂಕವೂ ಜಾಸ್ತಿ. ಹಾಗಾಗಿ ಆತನ ಕಿಬ್ಬೊಟ್ಟೆಯ ಮೇಲಿನ ಒಂದು ಮೂಳೆ ಮುರಿದು, ಆತನನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು! ಈಗ ಸರಿಯಾಗಿದ್ದಾನೆ. ಮತ್ತೊಮ್ಮೆ ಆತನನ್ನು ಭೇಟಿಯಾಗಿದ್ದೆ.

ಶ್ರೀಕಂಠ ನಾನು ಐವತ್ತು ವರ್ಷಗಳಿಂದ ಸ್ನೇಹಿತರು. ವಾರಕ್ಕೊಂದುಸಲವಾದರೂ ಒಬ್ಬರಿಗೊಬ್ಬರು ಭೇಟಿಯಾಗದಿದ್ದರೆ ಮನಸ್ಸಿಗೆ ಏನೋ ಪಿರಿಪಿರಿ. ಅವನ

ಮನೆಯಲ್ಲಿ, ಅವನು, ಅವನ ಹೆಂಡತಿ ಶಾರದಮ್ಮ, ಇಬ್ಬರು ಮಕ್ಕಳು. ಮಕ್ಕಳು ಪ್ರೌಢಶಾಲೆಯಲ್ಲಿ ಓದುತ್ತಿದ್ದರು. ಶ್ರೀಕಂಠನಿಗೆ ನೆಂಟರಿಷ್ಟರ ಬಳಗ ಹೆಚ್ಚು. ಅವರೂಪಕ್ಕೆ ಬರುವ ಕೆಲವಾರು ಅತಿಥಿಗಳೂ ಇರುತ್ತಿದ್ದರು.

ಒಬ್ಬ ಅತಿಥಿ ಮಂಗಳೂರು ಕಡೆಯವರು ಬಂದಿದ್ದರಂತೆ. ಅದನ್ನು ನನಗೆ ಹೇಳಲು ಮಾರನೇ ದಿನವೆ ಓಡೋಡಿ ಬಂದ ನಮ್ಮ ಮನೆಗೆ. ಏಕೆ ಹೀಗೆ ಉಸಿರಾಡುತ್ತಾ ಬಂದ ಎಂದು ಯೋಚಿಸುವಷ್ಟರಲ್ಲೇ ನಗುವುದಕ್ಕೇ ಶುರು ಮಾಡಿದ. ಅದೇನು ಹೇಳೋ ಮಾರಾಯ ಆಮೇಲೆ ಇಬ್ಬರೂ ನಗಬಹುದು ಎಂದೆ. ಸ್ವಲ್ಪ ಸುಧಾರಿಸಿಕೊಂಡು ನಂತರ ವಿವರಿಸಿದ.

'ಮಂಗಳೂರಿನ ಅತಿಥಿ ಬಂದ ಕೂಡಲೆ, ಊಟಕ್ಕೆ ಏಳಿ ಅಂದೆ, ಅವರು ಆಯಿತು ಎಂದರು. ನಾನು ಅಲ್ಲಿಂದಲೆ ಅವರ ಊಟ ಆಗಿದೆಯಂತೆ ಕಣೇ ಎಂದು ಹೆಂಡತಿಗೆ ಕೂಗಿ ಹೇಳಿದೆ.. ಹೋಗಲಿ ಸ್ವಲ್ಪ ತಿಂಡಿಯಾದರೂ ತೆಗೆದುಕೊಳ್ಳಿ ಅಂದಾಗಲೂ, ಅವರು ಆಯಿತು ಎಂದೇ ಹೇಳಿದರು. ನಾನು ಅವರಿಗೆ ತಿಂಡಿಯೂ ಆಗಿದೆಯಂತೆಕಣೇ ಎಂದೆ. ಅವರು ಏನೋ ಎಡವಟ್ಟಾಗಿದೆ ಎಂದು ಅನಮಾನಪಟ್ಟು ಸ್ವಲ್ಪ ಕುಡಿಯಲಿಕ್ಕೆ ನೀರು ಕೊಡಿ ಎಂದು ಕೇಳಿದರು. ನಾನು ನೀರು ತಂದುಕೊಟ್ಟೆ. ನೀರು ಕುಡಿದು ಮಲಗಿದರು. ಮಾರನೆಯ ದಿನ ಬೆಳಿಗ್ಗೆ ಕಾಫಿ ಬಟ್ಟಲನ್ನು ಅವರ ಮುಂದಿಟ್ಟಾಗ ಏನೂ ಹೇಳದೆ ಕಾಫಿ ಕುಡಿದು ಹೊರಟುಹೋದರು!

17. ಸೈಕಲ್ ಚಕ್ರಕ್ಕೆ ಗಾಳಿ

ಚಿತ್ರ 1945–46ರಲ್ಲಿ ಆಫೀಸಿಗೆ ಹೋಗುವುದಕ್ಕೆ ಸೈಕಲ್ ಉಪಯೋಗಿಸುತ್ತಿದ್ದೆ. ಆಫೀಸಿನಿಂದ ಹೊರಡುವಾಗ, ಸೈಕಲ್ ಚಕ್ರಕ್ಕೆ ಬ್ಲೊ ಮಾಡಿಸುವುದಕ್ಕೆ ಒಬ್ಬ ಹುಡುಗ ಇದ್ದ. ಅವನ ಹೆಸರು ಗೋಪಾಲ. ಅವನಿಗೆ ಒಬ್ಬೊಬ್ಬರೂ ಒಂದಾಣೆ ಕೊಡುತ್ತಿದ್ದೆವು. ಅವನು ಚಕ್ರಕ್ಕೆ ಗಾಳಿ ತುಂಬುವಾಗ ಅವನ ಪಂಪು ಮೂರು ಅಡಿ ಉದ್ದವಿತ್ತು. ಅವನು ಒತ್ತಿ ಒತ್ತಿ ಕೆಲಸ ಮಾಡುತ್ತಿದ್ದಾಗ ಅವನು ಕುಣಿಯುವಂತೆ ಕಾಣುತ್ತಿತ್ತು! ನಾವು ಸುಮಾರು ಹತ್ತು ಹನ್ನೆರಡು ಜನ ಬ್ಲೊ ಹೊಡೆಸುವುದಕ್ಕೆ ಕಾಯುತ್ತಿದ್ದೆವು.

ನಮ್ಮ ಆಫೀಸಿನಲ್ಲಿದ್ದ ಡ್ರೈವರ್ ಚನ್ನಯ್ಯ ಅಲ್ಲಿಗೆ ಬಂದ. ಗೋಪಾಲ ಬ್ಲೊ ಮಾಡುತ್ತಿದ್ದುದನ್ನು ನೋಡಿ, ನನಗೆ ಈ ತರಹ ಬ್ಲೊ ಮಾಡುವುದಕ್ಕೆ ಬರುವುದಿಲ್ಲ ಅಂದ. ನಾನು ಅದೇನು ಅಷ್ಟು ಕಷ್ಟದ್ದಲ್ಲ ಚನ್ನಯ್ಯ. ನೀನು ನಿಮ್ಮ

ಮನೆಯಲ್ಲಿ ಯಾರೂ ಇಲ್ಲದಿರುವ ಸಮಯ ನೋಡಿಕೊಂಡು, ದಿವಸಾ ಅರ್ಧ ಗಂಟೆ ಗೋಪಾಲ ಕುಣಿಯುವ ಹಾಗೆ ಕುಣಿ. ಆಮೇಲೆ ನೋಡು ನಿನ್ನ ಕೈಗೆ ಪಂಪು ಕೊಟ್ಟರೆ ಸಾಕು, ಬ್ಲೊ ತಾನಾಗಿಯೇ ಆಗುತ್ತೆ ಎಂದೆ. ಗೋಪಾಲ ಮೊದಲುಗೊಂಡು ಎಲ್ಲರೂ ನಗಾಡುವುದಕ್ಕೆ ಶುರುಮಾಡಿದರು!



ಸುಬ್ಬರಾವ್, 'ನೋಡಿ ನೀವು ಮಾಡಿದ ಕೆಲಸ. ಗೋಪಾಲ ಇನ್ನು ಅರ್ಧಗಂಟೆ ಕೆಲಸಮಾಡುವುದಿಲ್ಲ' ಅಂದರು!

18. ಮಹಾತ್ಮರ ಮಾತಿಗಿರುವ ಪವರ್ ಎಷ್ಟು?

ದೇವರು ಓಡಿಹೋಗಿದ್ದಾನೆ ಎಂದು ಊರಿನಲ್ಲೆಲ್ಲ ಗುಲ್ಲೋಗುಲ್ಲು. ಈ ತರಹ ಸುದ್ದಿ ಬಂದಮೇಲೆ ಕೇಳಬೇಕೆ. ಇನ್ಯಾರು ಇರ್ತಾರೆ ಇಂತಹ ಅವಿವೇಕತನ ಮಾಡಲಿಕ್ಕೆ. ಇದಾರಲ್ಲ ರಮಾಬಾಯಿಯ ಸುಪುತ್ರರು. ಈ ಮಾತುಗಳನ್ನು ಕೇಳಿದಮೇಲೆ ರಮಾಬಾಯಿಗೆ ಸಾಯುವುದೊಂದೆ ಬಾಕಿ, ಹಾಗಾಗಿತ್ತು ಅವಳ ಮನಸ್ಸು. ದಾರಿಯಲ್ಲಿ ಓಡಾಡುವಹಾಗಿಲ್ಲ. ಎಲ್ಲರೂ ಅವಳ ಮುಖವನ್ನು ನೋಡಿ ಅಣಕಿಸುವವರೇ, ರಾತ್ರಿಯಲ್ಲ ಗೋಳಾಡಿದಳು.

ಮಾರನೆಯ ದಿನ ಎದ್ದು, ಹೇಗಾದರಾಗಲಿ ಇದನ್ನು ಒಂದುದಾರಿಗೆ ತರಲೇಬೇಕು ಅನ್ನುವ ಹಠ ಅವಳ ಮನಸ್ಸಿನಲ್ಲಿ ಎದ್ದುನಿಂತಿತು. ಆದರೆ ಅದನ್ನು ಕಾರ್ಯರೂಪಕ್ಕೆ ತರಬೇಕಾದರೆ ಮಾರ್ಗ? ಅವಳ ಕೊರಗನ್ನು ಅರಿತಿದ್ದ ಕೆಲವು ಹಿತಚಿಂತಕರು ರಮಾಬಾಯಿಯ ಮನೆಗೆ ಬಂದು ಸಮಾಧಾನ ಮಾಡಿದರು. ರಮಾಬಾಯಿ, ನೀವು ಸುಮ್ಮನೆ ಆತಂಕಪಡಬೇಡಿ, ದೇವರು ಖಂಡಿತಾ ಸಹಾಯ ಮಾಡುತ್ತಾನೆ ಅನ್ನುವ ನಂಬಿಕೆ ನಮಗಿದೆ. ನೀವು ಆ ಶಿವಬಾಲಯೋಗಿಗಳನ್ನು ಒಮ್ಮೆ ಭೇಟಿಮಾಡಿ ಎಂದರು.

ಅದು ಸೂಕ್ತ ಸಲಹೆ ಎಂದು ರಮಾಬಾಯಿಗೂ ತಿಳಿಯಿತು. ಮಾರನೆಯ ದಿನವೇ ಮುಂಚಿತವಾಗಿ ಎದ್ದು ಶಿವಬಾಲಯೋಗಿಗಳನ್ನು ಭೇಟಿಮಾಡಲು ಹೊರಟಳು. ಆಕೆಯ ಬರುವಿಕೆಯನ್ನು ಮೊದಲೇ ಅರಿತಿದ್ದ ಮಹರ್ಷಿಗಳು, ರಮಾಬಾಯಿಯನ್ನು ಅನುಕಂಪದಿಂದ ಆದರಿಸಿ, ಅವಳ ಹೇಳುವಿಕೆಯನ್ನೆಲ್ಲ

ಕೇಳಿ ಭರವಸೆಕೊಟ್ಟರು. ನೀವು ಚಿಂತಿಸಬೇಡಿ, ನಾಳೆಯೇ ನಿಮ್ಮ ಮಕ್ಕಳನ್ನು ವಿಚಾರಿಸುತ್ತೇನೆ ಎಂದರು.

ಮಾರನೆಯ ದಿನ ರಮಾಬಾಯಿಯ ಇಬ್ಬರ ಮಕ್ಕಳನ್ನೂ ಒಟ್ಟಿಗೇ ಕರೆಸಿದರು. ಮಕ್ಕಳೇ, ನೀವು ಏಕೆ ಗಾಬರಿಯಾದಿರಿ, ದೇವರು ತಪ್ಪಿಸಿಕೊಂಡು ಓಡಿಹೋಗಿಲ್ಲ, ಅವನು ದಯಾಮಯಿ. ಪ್ರತಿಯೊಬ್ಬರಲ್ಲೂ ದೇವರು ಇದ್ದಾನೆ. ತಪ್ಪಿತಸ್ಥರನ್ನು ಮಾತ್ರ ಶಿಕ್ಷಿಸುತ್ತಾನೆ, ನೀವು ಒಳ್ಳೆಯ ಮಾರ್ಗದಲ್ಲಿ ನಡೆಯಿರಿ. ನಿಮಗೆ ಏನೂ ತೊಂದರೆಯಾಗುವುದಿಲ್ಲ. ಎಂದು ಬುದ್ಧಿಹೇಳಿ ಕಳುಹಿಸಿದರು. ರಮಾಬಾಯಿಗೆ ಹೋದ ಜೀವ ಮರಳಿ ಬಂದಂತಾಯಿತು.

ಹೇಳಿದ ತಕ್ಷಣವೇ ಬದಲಾಗಲು ಸಾಧ್ಯವಿಲ್ಲ. ಮಂತ್ರವಾದಿ ಮಾವಿನ ಓಟೆಯನ್ನು ನೆಲದಲ್ಲಿ ನೆಟ್ಟು ಐದು ನಿಮಿಷಗಳಲ್ಲಿ ಅದು ಗಿಡವಾಗಿ ಹಣ್ಣೂ ಬಿಡುತ್ತೆ, ಅಂದರೆ ಅದು ಕ್ಷಣಿಕವಾದದ್ದು. ಕಾಲಕ್ರಮೇಣ ರಮಾಬಾಯಿಯ ಮಕ್ಕಳಲ್ಲಿ ಸದ್ಗುಣಗಳು ಕಂಡುಬರುತ್ತಿದ್ದವು. ಆ ಸೂಚನೆಗಳು ತೋರಿಬಂದಾಗ, ಶಿವಬಾಲಯೋಗಿಗಳನ್ನು ಭೇಟಿಮಾಡಿ ಅವರ ಆಶೀರ್ವಾದ ಪಡೆದುಬಂದಳು.

19. ಲೇಖನಕ್ರಮ ಹೇಗಿರಬೇಕು?

ಸಾಹಿತ್ಯ ಪ್ರಪಂಚಕ್ಕೆ ಹೊಸದಾಗಿ ಕಾಲಿಟ್ಟ ಒಬ್ಬ ತರುಣ ಒಂದು ಲೇಖನವನ್ನು ಬರೆದು ಒಬ್ಬ ಹಿರಿಯ ಸಾಹಿತಿಗಳಿಗೆ ತೋರಿಸಲು ಹೋದನಂತೆ. ಅವರು ಅದನ್ನು ನೋಡಿ ಲೇಖನಗಳು ಯಾವಾಗಲೂ ಬೋಧಪ್ರದವಾಗಿರಬೇಕುಕಣಪ್ಪ ಎಂದು ಅವನನ್ನು ಅಟ್ಟಿಬಿಟ್ಟರಂತೆ. ಹುಡುಗ ಪೆಚ್ಚಾಗಿ ಹೋದ. ಲೇಖನ ಹೇಗೆ ಬರೆಯಬೇಕು ಎಂಬ ಬಗ್ಗೆ ಯಾವ ಸಲಹೆಗಳನ್ನೂ ಕೊಡಲಿಲ್ಲವಲ್ಲ ಎಂದು ಯೋಚಿಸಿ. ಕೆಲವಾರು ತಿಂಗಳಮೇಲೆ ಇನ್ನೊಂದು ಲೇಖನವನ್ನು ಬರೆದು ಅವರಿಗೆ ತೋರಿಸಿದ. ಆಗಲೂ ಅವರು ಹೇಳಿದ್ದ ಮಾತನ್ನೇ ಪುನಃ ಹೇಳಿದರಂತೆ. ಆ ತರುಣ ಲೇಖಕ ಅವರ ಮನಸ್ಸಿನಲ್ಲಿ ಏನಿರಬಹುದು, ಲೇಖನ ಬೋಧಪ್ರದವಾಗಿರಬೇಕು ಅಂದರೆ ಎಂದು ದಿನಗಟ್ಟಲೆ ಅದೇ ಯೋಚನೆಯಾಯಿತು. ನೋಡೋಣ ಈ ಬಾರಿ ಎನು ಹೇಳುತ್ತಾರೆ. ಬೋಧಪ್ರದವಾದ ಲೇಖನವನ್ನು ಬರೆಯಲು ಶುರುಮಾಡಿದ.

ಒಂದೂರಿನಲ್ಲಿ ಒಬ್ಬ ರಾಜನಿದ್ದನು. ರಾಜ ಅಂದರೆ ಪ್ರಜೆಗಳನ್ನು ಆಳುವವನು. ಹಿಂದಿನ ಕಾಲದಲ್ಲಿ ಚಿಕ್ಕರಾಜನನ್ನು ಪಾಳೆಯಗಾರ ಎಂದು ಕರೆಯುತ್ತಿದ್ದರು. ರಾಜನ ಹೆಂಡತಿ ರಾಣಿ. ಸಾಮಾನ್ಯಜನಗಳ ಹೆಂಡತಿಯರನ್ನು ಹೆಂಡತಿ, ಪತ್ನಿ ಅಥವಾ ಧರ್ಮಪತ್ನಿ ಎನ್ನುತ್ತಾರೆ. ರಾಜನ ಹೆಂಡತಿಗೆ ಮಾತ್ರ ರಾಣಿ ಅಥವಾ ಮಹಾರಾಣಿ ಎಂದೇ ಹೇಳಬೇಕು.

ಮಹಾರಾಣಿಯು ಒಂದು ದಿನ ನದಿಗೆ ಸ್ನಾನಕ್ಕೆ ಹೋದಳು. ಹರಿಯವ ನೀರನ್ನು ನದಿ ಎಂದೂ, ನಿಂತಿರುವ ನೀರನ್ನು ಹಳ್ಳ, ಹೊಂಡ, ಕೆರೆ ಎಂದು ಕರೆಯುತ್ತಾರೆ. ರಾಣಿಯು ಆಭರಣಗಳನ್ನು ತೆಗೆದಿಟ್ಟು ಸ್ನಾನಕ್ಕೆ ಹೋದಳು. ಅಭರಣಗಳನ್ನು ಬೆಳ್ಳಿ, ಚಿನ್ನದಿಂದ ಮಾಡುತ್ತಾರೆ.

ಇದು ನಾವು ಮಕ್ಕಳಾಗಿದ್ದಾಗ. 'ಕಾಗೆ ಕೃಷ್ಣಸರ್ಪವನ್ನು ಕೊಂದ ಕಥೆ' ಓದಿದ ಜ್ಞಾಪಕ ಲೇಖನವನ್ನು ಮುಂದುವರಿಸುವ ಮುಂಚೆ ಆ ಸಾಹಿತಿಗಳಿಗೆ ತೋರಿಸಬೇಕೆಂಬ ಕುತೂಹಲ ಆ ತರುಣ ಲೇಖಕನಿಗೆ, ಅವರ ಮನೆಗೆ ಹೋದಾಗ ತಿಳಯಬಂತು, ಅವರು ಯಾರಿಗೂ ಹೇಳದೆ ಊರುಬಿಟ್ಟು ಹೋಗಿದ್ದಾರೆ ಅಂತ!

20. ಅಲ್ಲಾವುದ್ದೀನನ ಅದ್ಭುತ ದೀಪ

ನಾರಾಯಣ ಮನೆಗೆ ಓಡೋಡಿ ಬಂದ. ಬಾಗಿಲಲ್ಲೇ ನಿಂತಿದ್ದ ಹೆಂಡತಿ ಪಂಕಜಾಕ್ಷಿ ಕೇಳಿದಳು ಏನು ಸಮಾಚಾರ ಎಂದು. ನಡಿ ಒಳಕ್ಕೆ ನಿಧಾನವಾಗಿ ಹೇಳ್ತೀನಿ ಅಂದ. ಈ ದಿನ ನನಗೆ ಒಂದು ಅಲ್ಲಾವುದ್ದೀನನ ಅದ್ಭುತ ದೀಪ ಸಿಕ್ಕಿತು. ನಿಜಕ್ಕೂ ಇದು ಸಂತೋಷದ ವಿಷಯ ಅಂದ್ರೆ. ನೀವು ಅವನನ್ನು ಏನು ಕೇಳಿದಿರಿ.

ನಿನ್ನ ಮೆದುಳಿನ ಶಕ್ತಿಯನ್ನು ಹತ್ತರಷ್ಟು ಹೆಚ್ಚಿಸು ಎಂದು. ಅಯ್ಯೋ ನನ್ನ ಮುದ್ದುರಾಜಾ, ಆಗಲಿ ಅಂದನೇ. ಇಲ್ಲ ಜೋರಾಗಿ ನಕ್ಕುಬಿಟ್ಟ. ಸೊನ್ನೆಯನ್ನು ಎಷ್ಟರಿಂದ ಗುಣಿಸಿದರೂ ಅದು ಸೊನ್ನೆಯೇ ಎಂದು ಹೇಳಿದ!

ಚುರುಕು ಹುಡುಗ – ರಾಮಕೃಷ್ಣನ ಉಪಾಧ್ಯಾಯರು ಅವನ ತಾಯಿಗೆ ಒಂದು ದಿನ ಚೀಟಿಯನ್ನು ಕಳುಹಿಸಿದ್ದರು. ನಿಮ್ಮ ಮಗ ಬಹಳ ಚುರುಕಾಗಿದ್ದಾನೆ. ಬುದ್ಧಿವಂತ. ಆದರೆ ಹೆಚ್ಚು ಸಮಯವನ್ನು ಹುಡುಗಿಯರ ಬಗ್ಗೆ ಯೋಚಿಸುವುದಕ್ಕೆ ಕಳೆಯುತ್ತಾನೆ.

ಮಾರನೆಯದಿನ, ರಾಮಕೃಷ್ಣನ ತಾಯಿ ಅದಕ್ಕೆ ಉತ್ತರವಾಗಿ ಬರೆದಳು. ಅದನ್ನು ಸರಿಪಡಿಸಲು ಏನಾದರೂ ಗೊತ್ತಾದರೆ ನನಗೂ ತಿಳಿಸಿ. ಅವನ ತಂದೆಯ ಬಗ್ಗೆ ಅದೇ ಸಮಸ್ಯೆ ಇದೆ ಎಂದು!

21. ಮಾತಿನ ಮಲ್ಲಿ

ಸೀತಾರಾಮುವಿನ ಸ್ನೇಹಿತರೆಲ್ಲರಿಗೂ ಮದುವೆಯಾಗಿತ್ತು. ಎಲ್ಲರೂ ಅವನನ್ನು ಪೀಡಿಸುತ್ತಿದ್ದರು. ನೀನು ಹೀಗೇ ಇದ್ದರೆ ವಯಸ್ಸಾದಮೇಲೆ ಹೆಣ್ಣು ಸಿಗುವುದು ಕಷ್ಟವಾಗುತ್ತೆ ಎಂದು ಹೇಳುತ್ತಲೇ ಇದ್ದರು. ಕೆಲವಾರು ತಿಂಗಳು ಕಳೆದನಂತರ,

ನಾನು ಮದುವೆಮಾಡಿಕೊಂಡೆ ಎಂದು ಹೇಳಿದ. ಎಲ್ಲರಿಗೂ ಆಶ್ಚರ್ಯ. ಏನೋ ಒಬ್ಬರಿಗೂ ತಿಳಿಸಲೇ ಇಲ್ಲ ಎಂದರು. ಹುಡುಗಿ ಹೇಗಿದ್ದಾಳೆ, ಒಂದು ದಿನ ನಾವು. ನಿಮ್ಮ ಮನೆಗೆ ಬರುತ್ತೇವೆ, ಎಂದು ಹೇಳಿ ಹೊರಟುಹೋದರು.

ಹುಡುಗಿಯ ಹೆಸರು ಲಲಿತೆ. ಅದನ್ನು ಲಿಲ್ಲಿ ಎಂದು ಬದಲಾಯಿಸಿಕೊಂಡಿದ್ದಳು. ಸೀತಾರಾಮುವಿನ ಮನಸ್ಸಿನಲ್ಲಿ ಒಂದೇ ಒಂದು ಕೊರತೆ ಎದ್ದು ಕಾಣುತ್ತಿತ್ತು. ಹುಡುಗಿ ಲಕ್ಷಣವಾಗಿದ್ದಾಳೆ. ಕೆಲಸಕಾರ್ಯಗಳಲ್ಲಂತೂ ಎತ್ತಿದ ಕೈ. ಎಲ್ಲವೂ ಅಚ್ಚುಕಟ್ಟು. ಅವನ ಕೆಲಸಕ್ಕೂ ಸಹಾಯಮಾಡುತ್ತಾಳೆ. ಅವಳಲ್ಲಿದ್ದ ದೋಷ ಏನೆಂದರೆ, ಅವಳಿಗೆ ಮಾತು ಬರುತ್ತಿರಲಿಲ್ಲ. ಅದು ಗೊತ್ತಿದ್ದರೂ ಮದುವೆಯಾಗಿದ್ದ ಸೀತಾರಾಮು. ಯಾವುದಾದರೂ ಕಾಯಿಲೆಯ ದೆಸೆಯಿಂದಾಗಿದ್ದರೆ, ವೈದ್ಯರ ಸಲಹೆ ಪಡೆಯಬಹುದು. ಆದರೆ ಇದು ಹುಟ್ಟಿನಿಂದ ಬಂದಿದೆ. ದೇವರೇ ಸಹಾಯ ಮಾಡಬೇಕು!

ಸೀತಾರಾಮುವೂ ದೈವಭಕ್ತ. ಏನಾದರಾಗಲಿ ಎಂದು ದೇವರನ್ನು ಪ್ರಾರ್ಥಿಸಿದ. ದೇವರು ಅವನ ದೈವಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾದ. ಕಾರಣವನ್ನು ತಿಳಿದಬಳಿಕ ಹೇಳಿದನಂತೆ. ನೋಡು ಒಂದೆರಡು ದಿವಸ ಯೋಚನೆ ಮಾಡಿ ತಿಳಿಸು ಎಂದು. ಪುನಃ ಬಂದಾಗ, ಸೀತಾರಾಮುವಿನ ಮನಸ್ಸು ಖಚಿತವಾಗಿತ್ತು. ಅವಳಿಗೆ ಮಾತನಾಡುವುದಕ್ಕೆ ಬಂದರೆ ಸಾಕು ಎಂದ. ತಥಾಸ್ತು ಎಂದು ಹೇಳಿ ದೇವರು ಅದೃಶ್ಯನಾದ.

ಸೀತಾರಾಮುವಿನ ಸಂತೋಷಕ್ಕೆ ಪಾರವೇ ಇಲ್ಲ. ನಾಲ್ಕಾರು ತಿಂಗಳು ಕಳೆಯಿತು. ಲಿಲ್ಲಿ ಮಾತನಾಡುವುದಕ್ಕೆ ಶುರುಮಾಡಿದಮೇಲೆ. ಅವನಿಗೆ ತಲೆ ಚಿಟ್ಟುಹಿಡಿಯುವಂತಾಯಿತು. ಅಯ್ಯೋ ದೇವರ ಬುದ್ಧಿವಾದವನ್ನು ಕೇಳಿದ್ದರೆ ಎಷ್ಟು ಚೆನ್ನಾಗಿತ್ತು ಎಂತಹ ಕೆಲಸಮಾಡಿಕೊಂಡುಬಿಟ್ಟೆ ಎಂದು ಪರಿತಪಿಸಿದ. ಅವಳು, ನಿನ್ನ ದೇವರು ಎಲ್ಲಿದ್ದಾನೆ ತೋರಿಸು, ನಾನೇ ಅವನೊಡನೆ ಮಾತನಾಡುತ್ತೇನೆ ಎಂದಳು.

ದೇವರು ಅವಳು ಹೇಳಿದುದನ್ನು ಕೇಳಿಸಿಕೊಂಡು, ಏಕ್‌ದಂ ಪರಾರಿಯಾದನಂತೆ!

22. ಸಿಗರೇಟ್ ವ್ಯಾಮೋಹ

ನಾನು ಕಾಫೀಬೋರ್ಡಿನಲ್ಲಿ ಕೆಲಸಮಾಡುತ್ತಿದ್ದಾಗ ನಮ್ಮ ಆಫೀಸರ್ ಒಬ್ಬರು ವಿಪರೀತ ಸಿಗರೇಟ್ ಸೇದುತ್ತಿದ್ದರು. ಅವರಿಂದ ಇನ್ನೊಬ್ಬ ಸೇದುವವನಿಗೆ

ಉಪದೇಶ. ತಮಾಷೆಗಾಗಿ ಅವರು ಹೆಂಡತಿಗೆ ಹೇಳುತ್ತಿದ್ದರಂತೆ, ನಾನು ನಿನ್ನನ್ನು ಬೇಕಾದರೆ ಬಿಡಬಲ್ಲೆ, ಆದರೆ ಸಿಗರೇಟ್ ಸೇದುವ ಚಟವನ್ನು ಬಿಡಲಾರೆ ಎಂದು!

ಅವರು ಬೆಂಗಳೂರು ಆಫೀಸಿನಲ್ಲಿದ್ದಾಗ ಒಂದು ತಮಾಷೆಯಾಯಿತು. ಆಫೀಸರ್ ಕೊಠಡಿಗೆಲ್ಲ ಅರ್ಧ ಬಾಗಿಲು ಇತ್ತು. ಒಂದು ಸಲ ನನ್ನ ಸಹೋದ್ಯೋಗಿಯೊಬ್ಬನಿಗೆ ಹೇಳಿಕಳುಹಿಸಿದರು. ಅವನು ಸ್ಟೆನೊಗ್ರಾಫರ್. ಎರಡು ಬಾರಿ ಕರೆಸಿದಾಗಲೂ ಅವನು ಬಂದು ವಾಪಸ್ ಹೋದ. ಅವರು ರೇಗಿಕೊಂಡು ಅವನನ್ನು ಪುನಃ ಕರೆಸಿ ಕೇಳಿದರು. ಅವನು ನಾನು ಎರಡುಸಲ ನಿಮ್ಮ ರೂಮಿಗೆ ಬಂದೆ. ನೀವು ಊಟಮಾಡುತ್ತಿದ್ದಿರಿ ಅಂದಾಗ, ಅವರಿಗೆ ಆಶ್ಚರ್ಯ. ಅವನು, ನೀವು ಬಾಯಾಡಿಸುತ್ತಿದ್ದುದನ್ನು ನೋಡಿದೆ ಎಂದು ಹೇಳಿದ. ಅವರು ಡೆಂಚರ್ ಹೊರಗಡೆ ತೆಗೆದು ತೋರಿಸಿದರಂತೆ!

ಚಕ್ಕಮಗಳೂರಿನ ಆಫೀಸಿಗೆ ಒಂದು ತಿಂಗಳಮಟ್ಟಿಗೆ ಬಂದಿದ್ದರು. ಅಲ್ಲಿ ವಂಕಟಸುಬ್ಬಯ್ಯ ಎಂಬುವವನು ಅಟೆಂಡರ್ ಆಗಿ ಕೆಲಸಮಾಡುತ್ತಿದ್ದ. ಅಲ್ಲಿದ್ದ ಆಫೀಸ್, ವಾಸದಮನೆ ಎರಡೂ ಒಂದೇ ಕಟ್ಟಡದಲ್ಲಿದ್ದುವು. ಅವರು ಸ್ನಾನ ಮುಗಿಸಿಕೊಂಡು, ಹೆಗಲಮೇಲೆ ಒಂದು ಟವಲ್ ಹಾಕಿ ಬಂದು ಕುರ್ಚಿಯಲ್ಲಿ ಕುಳಿತರು. ಟೇಬಲ್ ಮೇಲೆ ಒಂದು ರುಪಾಯಿಯನ್ನಿಟ್ಟು ಅವನಿಗೆ ಸಿಗರೇಟ್ ಪ್ಯಾಕ್ ತೆಗೆದುಕೊಂಡು ಬಾ ಎಂದರು. ಅವನು ಹಣವನ್ನು ತೆಗೆದುಕೊಂಡು ಹೊರಡುವುದರಲ್ಲಿದ್ದ. ಯಾವ ಬ್ರಾಂಡ್ ಗೊತ್ತೇನೋ ಅಂದಾಗ ಅವನು ಗೊತ್ತು ಸಾರ್, ಗೋಲ್ಡ್ ಫ್ಲ್ಯಾಕ್ ಅಂದ. ಅವರು, ನಿಮ್ಮ ಅಪ್ಪ ಕೊಡ್ತಾನೆಯೇ ದುಡ್ಡು. ಬರ್ಕ್‌ಲೇ, ಬರ್ಕ್‌ಲೇ ಕಣೋ ಎಂದು ಕೂಗಿದರು!

ವೆಂಕಟಸುಬ್ಬಯ್ಯ ಗಟ್ಟಿಯಾಗಿ ಮಾತನಾಡುತ್ತಿರಲಿಲ್ಲ. ಆಫೀಸರ್, ಅವನಿಗೆ ಇನ್ನೊಂದುಬಾರಿ ಗಟ್ಟಿಯಾಗಿ ಮಾತನಾಡದಿದ್ದರೆ, ಗುದ್ದಿಬಿಡ್ತೀನಿ ಎಂದರು!

23. ಒಂಟಿ ಕುಟುಂಬ–ಜಂಟಿ ಕುಟುಂಬ

ಸಾಮಾನ್ಯವಾಗಿ ಹಿಂದೆಲ್ಲ ಅವಿಭಕ್ತ ಕುಟುಂಬಗಳೇ ಹೆಚ್ಚು. ಸಾವಿರಾರು ಎಕರೆ ಜಮೀನು ಇದ್ದವರೂ ಕೂಡಾ ಒಗ್ಗಟ್ಟಾಗಿ ಸರ್ಕಾರೀ ಇಲಾಖೆಗಳಂತೆ ಕೆಲಸಗಳನ್ನು ಹಂಚಿಕೊಂಡು ಕೆಲಸ ಮಾಡುತ್ತಿದ್ದರು. ಒಂದು ಸಂಸಾರದಲ್ಲಿ ಒಂಬತ್ತು ಜನ ಅಣ್ಣತಮ್ಮಂದಿರು, ಎಲ್ಲರೂ ಮದುವೆಯಾಗಿ ಮಕ್ಕಳೊಂದಿಗೆ ಹಾಯಾಗಿದ್ದರು. ಅಷ್ಟೇಕೆ. ನಮ್ಮ ಮಾವನವರದೂ ಅವಿಭಕ್ತ ಕುಟುಂಬವೇ. ಮೂವರು ಅಣ್ಣತಮ್ಮಂದಿರಲ್ಲಿ ಇಬ್ಬರು ಶಾನುಭೋಗರು, ಒಬ್ಬರು ಪ್ರೈಮರಿ

ಶಾಲೆಯ ಉಪಾಧ್ಯಾಯರು. ಅವರಿಗೂ ತೋಟತುಡಿಕೆ, ಜಮೀನುಗಳಿದ್ದುವು. ಯಾವ ಕುಂದುಕೊರತೆಯೂ ಕಾಣುತ್ತಿರಲಿಲ್ಲ. ಮನೆಯ ಹೆಂಗಸರಲ್ಲೂ ಹೊಂದಾಣಿಕೆ ಇತ್ತು.

ಅವರ ಮುಂದಿನ ಪೀಳಿಗೆಯಲ್ಲಿ, ಅಂದರೆ ಮಕ್ಕಳಕಾಲಕ್ಕೆ ಒಳಗೊಳಗೇ ಗುಸಗುಸ. ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುತ್ತಿರಲಿಲ್ಲ. ಅದರ ಸೋಂಕು ಮನೆಯ ಹೆಂಗಸರಲ್ಲೂ ಕಂಡುಬರುತ್ತಿತ್ತು. ಹಾಗಾಗಿ ತಿಕ್ಕಾಟ ಶುರುವಾಯಿತು. ಹೊಡೆದಾಟದ ಮಟ್ಟಕ್ಕೆ ಹೋದದ್ದನ್ನೂ ನೋಡಿದೆವು. ಆಸ್ತಿಪಾಸ್ತಿ ಇದ್ದರಂತೂ ಕೇಳಲೇಬೇಕಿಲ್ಲ ತಂದೆ ಮಕ್ಕಳಲ್ಲಿ ದ್ವೇಷ, ನೀವು ಹಳೆಯಕಾಲದವರು, ನಿಮಗೇನು ಗೊತ್ತಾಗುತ್ತೆ ಅನ್ನುವ ದುರಹಂಕಾರ ಮಕ್ಕಳಲ್ಲಿ, ಅಣ್ಣತಮ್ಮಂದಿರಲ್ಲಿ ಕಚ್ಚಾಟ. ಒಂದೇ ಮನೆಯಲ್ಲಿರುವ ಅಕ್ಕತಂಗಿಯರಲ್ಲೇ ಜಗಳ, ಹೀಗಾದಲ್ಲಿ ಯಾರನ್ನುತಾನೇ ಸರಿಪಡಿಸಲು ಸಾಧ್ಯ?

ಇತ್ತೀಚಿನ ಸಂಸಾರಗಳಲ್ಲಿ ಕಾಣಬರುತ್ತಿರುವ ಅಭಾಸಗಳನ್ನು ಕಡೆಯವರೆಗೂ ನೋಡಲು ನಮಗೆ ಅವಕಾಶವಿಲ್ಲ. ಅದೇ ನಮ್ಮ ಸೌಭಾಗ್ಯ! ಇದನ್ನು ಸರಿಪಡಿಸಲು ಯಾವ ಸಲಕರಣೆಯೂ ಬೇಕಿಲ್ಲ! ಮನುಷ್ಯನ ವಿವೇಚನಾಶಕ್ತಿ ಪರಿವರ್ತನೆಗೆ ನಾಂದಿಯಾಗಬೇಕು.

24. ಕ್ರಿಸ್‌ಮಸ್ ಹಬ್ಬಕ್ಕೆ ಬಹುಮಾನಗಳು

ಅಮೆರಿಕಾದಲ್ಲಿ ಕ್ರಿಸ್‌ಮಸ್ ಹಬ್ಬದ ಸಮಯದಲ್ಲಿ ಒಂದೊಂದು ಸಂಸಾರದವರೂ ಸ್ನೇಹಿತರಿಗೆ ಮತ್ತು ಬಂಧುಬಾಂಧವರಿಗೆ ಬಹುಮಾನಗಳನ್ನು ಕೊಡುತ್ತಾರೆ. ಮಕ್ಕಳಿಗೆ ಅವರವರ ತರಗತಿಗಳಿಗೆ ತಕ್ಕಂತೆ ಪುಸ್ತಕಗಳನ್ನು ಆರಿಸುತ್ತಾರೆ. ತರಕಾರಿ ಮಾರ್ಕೆಟ್ಟಿನಲ್ಲಿರುವಂತೆ ಪುಸ್ತಕದ ಅಂಗಡಿಯವರೂ ನೂಕುವ ಗಾಡಿಗಳನ್ನು ಇಟ್ಟಿರುತ್ತಾರೆ ಪುಸ್ತಕಗಳನ್ನಿಡಲು. ಒಂದು ವಾರದಮುಂಚೆ ಎಲ್ಲ ಪುಸ್ತಕದ ಅಂಗಡಿಗಳಲ್ಲೂ ರಾಶಿರಾಶಿ ಪುಸ್ತಕಗಳನ್ನು ನೋಡಬಹುದು.

ಬೇರೇ ತರಹದ ಬಹುಮಾನವನ್ನು ಕೊಟ್ಟಾಗ. ನಾವುಗಳು ಮಾಡುವಹಾಗೆ, ಅವರ ಹೆಸರನ್ನು ಬರೆಯುವುದಿಲ್ಲ. ಬಹುಮಾನದ ಜೊತೆಯಲ್ಲಿ ಅಂಗಡಿಯವರು ಕೊಟ್ಟಿರುವ ರಸೀತಿಯನ್ನು ಲಗತ್ತಿಸಿರುತ್ತಾರೆ. ಅಕಸ್ಮಾತ್ ನಿಮಗೆ ಒಂದೇ ತರಹದ ನಾಲ್ಕಾರು ಬಹುಮಾನಗಳು ಬಂದಿದ್ದರೆ ಅವುಗಳನ್ನು ಅಂಗಡಿಗೆ ರಸೀತಿಸಮೇತ ವಾಪಸ್‌ಕೊಟ್ಟರೆ ಸ್ವಲ್ಪ ಹಣವನ್ನು ಪಡೆಯಬಹುಡು. ಅಲ್ಲಿಯೂ ಜನಗಳು ಸಾಲಿನಲ್ಲಿ ನಿಂತಿರುತ್ತಾರೆ.

ಕ್ರಿಸ್‌ಮಸ್ ಹಬ್ಬ ಮುಗಿದನಂತರ. ಕೆಲವು ಪದಾರ್ಥಗಳನ್ನು ರಿಯಾಯಿತಿಕೊಟ್ಟು ಮಾರುತ್ತಾರೆ. ಜನಗಳು ಅವನ್ನು ಕೊಂಡು ಮುಂದಿನವರ್ಷದ ಹಬ್ಬಕ್ಕೆ ಮೀಸಲಾಗಿಡುತ್ತಾರೆ!

25. ವಿಧವಿಧವಾದ ಪಾತ್ರೆಗಳ ಬಳಕೆ

ಹಿಂದಿನ ದಿನಗಳಲ್ಲಿ ಮಣ್ಣಿನ ಮಡಕೆಗಳನ್ನು, ಅಡಿಗೆಮಾಡುವುದಕ್ಕೆ, ದವಸಧಾನ್ಯಗಳನ್ನು ಶೇಖರಿಸಿಡುವುದಕ್ಕೆ ಬಳಸುತ್ತಿದ್ದೆವು. ಹಾಲು, ಬೆಣ್ಣೆ, ತುಪ್ಪ ಮುಂತಾದುವುಗಳನ್ನು ಇಡುವುದಕ್ಕೆ. ಉಪ್ಪಿನಕಾಯಿ ಇಡುವುದಕ್ಕೆ ಬೇರೆ ತರಹದ ಮಣ್ಣಿನ ಜಾಡಿ.


ನಂತರ ಸ್ವಲ್ಪ ಬದಲಾವಣೆಯಾಗಿ ಲೋಹದ ಪಾತ್ರೆಗಳು ಬಳಕೆಗೆ ಬಂದುವು. ಅಲ್ಯೂಮಿನಮ್. ಹಿತ್ತಾಳೆ ಮತ್ತು ಕಂಚು, ಸ್ಟೀಲ್, ಗಾಜು, ಮತ್ತು ಪ್ಲಾಸ್ಟಿಕ್ ಇವುಗಳನ್ನು ಬಳಸುವಾಗ ಕೈಗೆ ಸ್ವಲ್ಪವಾದರೂ ವ್ಯಾಯಾಮ ಸಿಗುತ್ತಿತ್ತು. ಡಿಶ್‌ವಾಶರ್ ತಲೆಹಾಕಿ ಅದೂ ಮಾಯವಾಯಿತು!

ಜೊತೆಜೊತೆಗೆ ಗಾಜು ಮತ್ತು ಪ್ಲಾಸ್ಟಿಕ್. ಗಾಜಿನಪಾತ್ರೆಗಳನ್ನು ಉಪಯೋಗಿಸುವಾಗ ಬಹಳ ಹುಶಾರಿಯಿಂದಿರಬೇಕು. ಈಗಲಂತೂ ನೂರಾರು ತರಹ ಪ್ಲಾಸ್ಟಿಕ್ ಸಾಮಾನುಗಳು ಮಾರ್ಕೆಟ್ಟಿಗೆ ಬಂದಿವೆ.







26. ನಿಮಗಿದು ಗೊತ್ತೆ?

ಅಮೆರಿಕಾದ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಒಂದು ಸ್ಪರ್ಧೆಯನ್ನು ಏರ್ಪಡಿಸಿದ್ದರು. ಚಾರ್ಲಿ ಚಾಪ್‌ಲಿನ್‌ನ ಹೆಸರನ್ನು ನೀವು ಕೇಳಿರಬಹುದು. ಅವನೊಬ್ಬ ಹೆಸರಾಂತ ಹಾಸ್ಯನಟ. ಎಲ್ಲ ವರ್ತಮಾನಪತ್ರಿಕೆಗಳಲ್ಲಿ ಮತ್ತು ಟಿವಿ ಮೂಲಕ ವಿಷಯ ಪ್ರಕಟವಾಗಿತ್ತು. ಯಾರು ಚಾರ್ಲಿ ಚಾಪ್‌ಲಿನ್ ತರಹ ಡ್ರೆಸ್ ಹಾಕಿಕೊಳ್ಳುತ್ತಾರೊ ಅವರಿಗೆ ಬಹುಮಾನ ಕೊಡಲಾಗುವುದೆಂದು!



ಮುಖ್ಯವಾದ ಸ್ಥಳಗಳಲ್ಲೆಲ್ಲ ಅವನ ದೊಡ್ಡ ಆಕಾರದ ಭಾವಚಿತ್ರವನ್ನು ನಿಲ್ಲಿಸಿದ್ದರು. ಅದರಲ್ಲಿ ಯಾವ ದಿನಾಂಕ, ಎಲ್ಲಿ ಏರ್ಪಾಡಾಗಿದೆ ಎನ್ನುವುದನ್ನು ಸೂಚಿಸಿತ್ತು. ಚಾರ್ಲಿ ಚಾಪ್‌ಲಿನ್‌ನ ಮನೆಯ ಹತ್ತಿರವೇ ಆರೇಳು ಅಡಿ ಎತ್ತರದ ಭಾವಚಿತ್ರವನ್ನು ಇಟ್ಟಿದ್ದರು. ಪ್ರತಿನಿತ್ಯವೂ ಅವನು ಬೆಳಿಗ್ಗೆ ವಾಯುವಿಹಾರಕ್ಕೆ ಹೋಗುತ್ತಿದ್ದ. ಮನೆಯಿಂದ ಹೊರಗೆ ಬಂದಕೂಡಲೆ ಅವನ ಭಾವಚಿತ್ರವನ್ನು ಆಶ್ಚರ್ಯದಿಂದ ನೋಡಿದ. ಹತ್ತಿರಕ್ಕೆ ಹೋದಾಗ ಅದರಲ್ಲಿ ಏನು ಬರೆದಿದ್ದಾರೆಂದು ತಿಳಿಯಿತು.

ಅವರು ಏನು ಮಾಡುತ್ತಾರೆಂದು ನೋಡಬೇಕೆಂದು ಯೋಚಿಸಿದ. ಅಲ್ಲಿಗೆ ಆದಿನ ಹೋಗಿ ನೋಡುತ್ತಾ ನಿಂತುಕೊಂಡ. 40–50 ಜನ ಅವನಂತೆಯೇ ಬಟ್ಟೆ ಹಾಕಿಕೊಂಡು, ಮೆರವಣಿಗೆಯ ತರಹ ಒಬ್ಬೊಬ್ಬರಾಗಿ ವೇದಿಕೆಯಮೇಲೆ ಬರುತ್ತಿದ್ದರು. ಎಲ್ಲರೂ ಅವನಂತೆಯೇ ಕಾಣುತ್ತಿದ್ದರು!

ಅದಾದ ಕೆಲವು ನಿಮಿಷಗಳಮೇಲೆ ಬಹುಮಾನಿತರ ಹೆಸರುಗಳನ್ನು ಘೋಷಿಸಿದರು. ಚಾರ್ಲಿ ಚಾಪ್‌ಲಿನ್‌ಗೆ ಮೂರನೇ ಬಹುಮಾನ ಬಂದಿತ್ತಂತೆ!!

27. ಅತ್ಮೀಯತೆ, ಅನ್ಯೋನ್ಯತೆ, ಆಪ್ತತೆ

ವರ್ಷಗಳೇ ಕಳೆದು ಹೋದುವು ಅತ್ಮೀಯತೆ, ಪರಸ್ಪರ ಅನ್ಯೋನ್ಯತೆ, ಬಂಧುಬಾಂಧವ್ಯ ಪದಗಳು ಮರೆತುಹೋದಂತೆ ನನ್ನ ಮನಸ್ಸಿಗೆ ಭಾಸವಾಗುತ್ತಿದೆ. ಇವುಗಳನ್ನು ಅವಿಭಕ್ತ ಕುಟುಂಬಗಳಲ್ಲಿ ನೋಡಿದ್ದ ನೆನಪು. ನಾಲ್ಕಾರು ಅಂತಹ ಸಂಸಾರಗಳನ್ನೂ ನೋಡಿದ್ದೆ.

ಇತ್ತೀಚಿನ ಕೆಲವು ಸಂಸಾರಗಳಲ್ಲಿ ಮಕ್ಕಳು ಅಪ್ಪನನ್ನು ಅಪ್ಪ ಎಂದು ಕರೆಯುವುದು ಅವಮಾನ ಎಂದು ತಿಳಿಯುತ್ತಾರೆ. ಅಣ್ಣತಮ್ಮಂದಿರಲ್ಲಿ ಅಕ್ಕತಂಗಿಯರಲ್ಲಿ ಒಬ್ಬರಿಗೊಬ್ಬರು ಸಂಪರ್ಕವಿರುವುದಿಲ್ಲ. ಅವರು ಪತ್ರ ವ್ಯವಹಾರವನ್ನೂ ಇಟ್ಟುಕೊಂಡಿರುವುದಿಲ್ಲ. ಮದುವೆ ಮುಂತಾದ ಸಮಾರಂಭಗಳಲ್ಲಿ ಆಗಾಗ್ಗೆ ಭೇಟಿಯಾಗುತ್ತಾರೆ. ನಿಮ್ಮ ತಮ್ಮ ಎಲ್ಲಿದ್ದಾನೆ ಈಗ ಎಂದು ಕೇಳಿದರೆ, 'ಓ ಎಲ್ಲಾ ಅಷ್ಟಕ್ಕಷ್ಟೆ, ಈಚೆಗೆ ಅವನೊಡನೆ ಸಂಪರ್ಕವೇ ಇಲ್ಲ ಎನ್ನುತ್ತಾರೆ. ದೊಡ್ಡವನಾದ ಅಣ್ಣನೇ ಹಾಗೆ ಹೇಳುವಾಗ ಅವನಲ್ಲೂ ಏನೋ ದೋಷವಿದೆ ಅನ್ನುವುದು ಅವನ ಮನಸ್ಸಿಗೆ

ಹೆಂಡತಿಯು ಕೂಡಾ ಗಂಡನನ್ನು ಪುಸಲಾಯಿಸಿ. ನಿಮ್ಮ ತಮ್ಮನ ಜೊತೆ ವ್ಯವಹಾರ ಬೇಡ, ಅವನು ಹೇಗೆಬೇಕಾದರೂ ಇರಲಿ ಎಂದು ಅವಳ ಹಿತೋಪದೇಶ! ಅಪ್ಪ ಮಾಡಿಟ್ಟ ಆಸ್ತಿಯಲ್ಲಿ ಹಂಚಿಕೆಯಾಗಬೇಕಾದಾಗ ಅಣ್ಣತಮ್ಮಂದಿರಲ್ಲಿ ದೊಡ್ಡ ಜಗಳವೇ ಆಗುತ್ತೆ.

ಹುಡುಗಿಯರು ಮದುವೆಯಾಗಿ ಗಂಡನ ಮನೆಗೆ ಬಂದ ನಂತರ ಬಹುಬೇಗ ಬದಲಾಯಿಸಿ ಬಿಡುತ್ತಾರೆ. ಪ್ರತಿಯೊಂದು ವಿಷಯದಲ್ಲೂ ಗಂಡನಿಗೆ ಒತ್ತಾಯ ಮಾಡಿ. ಅವನನ್ನು ಅವಳ ಕೈಕೊಂಬೆಯಾಗಿ ಮಾಡಿಕೊಳ್ಳುತ್ತಾಳೆ. ಅವಳು ಹೇಳಿದ್ದಕ್ಕೆಲ್ಲ ಅವನು 'ಹೌದಪ್ಪ' ಆಗುತ್ತಾನೆ.

ಅತ್ತೆಮಾವನನ್ನು ನೋಡಿಕೊಳ್ಳುವುದು ಅವಳಿಗೆ ಆಗದ ಕೆಲಸ. ನೀವು ಬೇರೆ ಊರಿಗೆ ವರ್ಗಮಾಡಿಸಿಕೊಂಡುಬಿಡಿ ಅಂದ್ರೆ, ಆಗ ತಾಪತ್ರಯವೇ ಇರುವುದಿಲ್ಲ ಎಂದು ಅವನಿಗೆ ಸಲಹೆ. ಇಂತಹ ಸಂಸಾರಗಳನ್ನೂ ನೋಡಿದೆ. ಪರಿಸ್ಥಿತಿ ಈ ಮಟ್ಟಕ್ಕೆ ಬಂದಾಗ, ಆತ್ಮೀಯತೆ, ಪರಸ್ಪರ ಅನ್ಯೋನ್ಯತೆ, ಬಂಧುಬಾಂಧವ್ಯ ಪದಗಳಿಗೆ ಸ್ಥಾನವೆಲ್ಲಿದೆ?

ಒಂದು ಚಲನಚಿತ್ರದಲ್ಲಿ ಮಕ್ಕಳು, ಸೊಸೆಯರು ಹಿರಿಯರನ್ನು ಎಷ್ಟು ನಿಕೃಷ್ಟವಾಗಿ ಕಾಣುತ್ತಾರೆ ಎನ್ನುವುದನ್ನು ಎತ್ತಿ ತೋರಿಸಿದ್ದಾರೆ. ಒಂದು ಜನಾಂಗದ ಕೆಲವು ಹೆಂಗಸರು ಅವರ ಗಂಡಂದಿರಿಗೆ ಆ ಚಲನಚಿತ್ರವನ್ನು ನೋಡುವುದಕ್ಕೇ ಬಿಡಲಿಲ್ಲವಂತೆ!

28. ಕಾಯೊಬ್ಬಟ್ಟು ತೊಂದರೆಗೆ ಪರಿಹಾರ

ನನ್ನ ತಂದೆಯವರು ಹೇಳಿದ ಸಂಗತಿ. ಸಖರಾಯಪಟ್ಟಣ ಎನ್ನುವ ಊರು ಕಡೂರಿಗೆ (ಕರ್ನಾಟಕ) ಹನ್ನೊಂದು ಮೈಲಿ ದೂರದಲ್ಲಿದೆ. ಅದು ಇತ್ತೀಚಿಗೆ ಜನಗಳ ವ್ಯವಹಾರ ಭಾಷೆಯಲ್ಲಿ ಸಕ್ರೇಪಟ್ಣವಾಗಿದೆ. ಅಲ್ಲಿ ಶಾಮಾಜೋಯಿಸರೆಂಬುವವರು ವಾಸವಾಗಿದ್ದರು. ಅವರು ವೇದಪಂಡಿತರು. ದೈವಭಕ್ತರು. ಮನೆಯಲ್ಲಿ ಅವರು ಮತ್ತು ಅವರ ಹೆಂಡತಿ ಭಾಗೀರಥಮ್ಮ ಇಬ್ಬರೇ. ಅವರಿಗೆ ಸಂತಾನಭಾಗ್ಯ ಇರಲಿಲ್ಲ. ನಾಲ್ಕಾರು ವಿದ್ಯಾರ್ಥಿಗಳು ವೇದಾಭ್ಯಾಸ ಮಾಡುವುದಕ್ಕಾಗಿ ಜೋಯಿಸರ ಮನೆಯಲ್ಲೇ ಇದ್ದರು. ಜೋಯಿಸರಿಗೆ ಮಕ್ಕಳಿಲ್ಲ ಅನ್ನುವ ಕೊರತೆ ತಪ್ಪಿಹೋಗಿತ್ತು. ಅವರೆಲ್ಲ ಮಕ್ಕಳೇ ಎಂದು ತಿಳಿದಿದ್ದರು.

ಊರಿನ ಜನ ಏನಾದರೂ ಕುಂದುಕೊರತೆಗಳಿದ್ದರೆ, ಜೋಯಿಸರ ಹತ್ತಿರ ಬಂದು ಹೇಳಿಕೊಳ್ಳುತ್ತಿದ್ದರು. ಅವರು ಕೊಡುವ ಸಲಹೆಯಂತೆ ಕೆಲಸಗಳು ನಡೆದುಹೋಗುತ್ತಿದ್ದುವು. ಹೀಗಾಗಿ ಅವರು ಎಲ್ಲರಿಗೂ ಅಚ್ಚುಮೆಚ್ಚಾಗಿದ್ದರು. ಜನಗಳಂತೂ ಜೋಯಿಸರು ದೇವತಾಪುರುಷರೆಂದೇ ನಂಬಿದ್ದರು.

ಮನೆಯಲ್ಲಿದ್ದ ಶಿಷ್ಯರು, ಗುರುಗಳೇ ಕಾಯೊಬ್ಬಟ್ಟು ತಿನ್ನಬೇಕು ಅನ್ನುವ ಆಸೆ ಎಂದರೆ, ಎಲ್ಲಾ ತಿಂಡಿಪೋತರೇ ಎಂದು ಹೇಳಿದರೂ, ಅವರ ಆಸೆಯನ್ನು ತಳ್ಳಿಹಾಕುತ್ತಿರಲಿಲ್ಲ. ಅಷ್ಟರಲ್ಲಿ ಯಾರಾದರೂ ಊರಿನ ಜನ ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಲು ಬಂದರೆ, ನೀವು ಕಾಯೊಬ್ಬಟ್ಟನ್ನು ಮಾಡಿ ಒಂದು ಹೊಸ ಬಿದಿರಿನ ಮೊರದಲ್ಲಿಟ್ಟು, ತೇರಿನಮನೆಯ ಬಾಗಿಲಹತ್ತಿರ ಇಟ್ಟು ಹೋಗಿ, ನಿಮ್ಮ ತೊಂದರೆ ಪರಿಹಾರವಾಗುತ್ತೆ ಎಂದು ಹೇಳಿಕಳಿಸುತ್ತಿದ್ದರು. ಜನ

ಹಾಗೆಯೇ ಮಾಡಿದಾಗ, ಶಿಷ್ಯರು ಅದನ್ನು ಮನೆಗೆ ತರುತ್ತಿದ್ದರು! ಜೋಯಿಸರು ಕೊಟ್ಟ ಸಲಹೆಯಂತೆ ಜನಗಳಿಗೆ ಅನುಕೂಲವಾಗಿರುತ್ತಿತ್ತು!

29. 1942ರಲ್ಲಿ ಆದ ಕಾಂಗ್ರೆಸ್ ಚಳುವಳಿ

ಆಗ ನಾನಿನ್ನೂ S.S.L.C ಮೂರನೇ ವರ್ಷ ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿದ್ದೆ. ಎಲ್ಲ ವಿದ್ಯಾರ್ಥಿಗಳಲ್ಲೂ ತುಂಬಿತುಳುಕಾಡುತ್ತಿತ್ತು ಕಾಂಗ್ರೆಸ್ ಚಳುವಳಿಯ ಪ್ರಭಾವ. ಮಹಾತ್ಮಾಗಾಂಧಿಯವರ ಆದೇಶದಂತೆ ಪ್ರತಿದಿನವೂ ರಸ್ತೆಗಳ ಮೇಲೆ ಮೆರವಣಿಗೆ, ಬ್ರಿಟಿಷರೇ ತೊಲಗಿ' ಎಂಬ ಘೋಷಣೆಯೊಂದಿಗೆ, ಹಾಗಾಗಿ ಆ ವರ್ಷ ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲ.

ಸಣ್ಣಪುಟ್ಟ ರಾಜಕೀಯ ಪುಢಾರಿಗಳು ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ, ಮೆರವಣಿಗೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆಲ್ಲ, ಅವರವರ ಮನೆಯ ಮುಂದೆ ಮೆರವಣಿಗೆ ಬಂದಾಗ ಎಲ್ಲರಿಗೂ ಹಣ್ಣು ಬಿಸ್ಕೆಟ್ ಹಂಚುತ್ತಿದ್ದರು. ಸಂಜೆ ಆರುಗಂಟೆಗೆ ಆಜಾದ್ ಮೈದಾನದಲ್ಲಿ ಬೃಹತ್ ಮಹಾಸಭೆ. ಪುಢಾರಿಗಳಿಂದ ಆವೇಶ ಭರಿತ ಭಾಷಣಗಳು.

1943ರಲ್ಲಿ S.S.L.C ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮುಂದಕ್ಕೆ ಬೆಂಗಳೂರಿಗೆ ಪ್ರಯಾಣ. 1947ರಲ್ಲಿ ಪುನಃ ಕಾಂಗ್ರೆಸ್ ಚಳುವಳಿ ಮುಗಿಲೆತ್ತರ ಬೆಳೆದಿತ್ತು. ರಾತ್ರೋರಾತ್ರಿ ಘೋಷಣಾಪ್ರತಿಗಳನ್ನು ರಸ್ತೆಯ ಪಕ್ಕದಲ್ಲಿದ್ದ ವಿದ್ಯುಚ್ಛಕ್ತಿಯ ಕಂಬಗಳ ಮೇಲೆ ಅಂಟಿಸಿ ಬರುತ್ತಿದ್ದೆವು. ಸ್ವಾತಂತ್ರ್ಯ ಸಮರ ಒಂದು ಘಟ್ಟಕ್ಕೆ ಬಂದಿತು.

ಅಲ್ಲಿಂದ ಮುಂದೆ ಏನೇನು ಬದಲಾವಣೆಗಳಾಗುತ್ತಿವೆ ನೀವೇ ನೋಡುತ್ತಿದ್ದೀರಿ. ಒಂದು ರಾಜಕೀಯ ಪಕ್ಷ ಮುಂದು ಬಂದರೆ, ಅದಕ್ಕೆ ಇದಿರಾಗಿ ಇನ್ನೊಂದು ಪಕ್ಷ. ಜೊತೆಜೊತೆಗೆ ಜಾತೀಯ ಮತಗಳ ಗುಂಪುಗಳಲ್ಲಿ ಹೋರಾಟ. ರಾಜಕೀಯ ಪುಢಾರಿಗಳು ಒಂದೇ ವೇದಿಕೆಯಮೇಲೆ ಹೇಗೆ ಬದಲಾಯಿಸುತ್ತಾರೆ ಎಂಬುದನ್ನು ಒಂದು ಸೂತ್ರದ ಗೊಂಬೆಯಾಟದಲ್ಲಿ ನೋಡಿದ ನೆನಪು.

ಒಂದು ಹಳ್ಳಿಯಲ್ಲಿ ದೊಡ್ಡ ಸಾಲುಮರವೊಂದು ರಸ್ತೆಯಮೇಲೆ ಅಡ್ಡಡ್ಡಲಾಗಿ ಬಿದ್ದುಬಿಟ್ಟಿತು. ವಾಹನ ಸಂಚಾರವೇ ನಿಂತುಹೋಯಿತು. ಆಗ ಒಬ್ಬ ಪುಢಾರಿ ಹುಟ್ಟಿಕೊಂಡ. ಜನಗಳನ್ನೆಲ್ಲ ಸೇರಿಸಿ, ವೇದಿಕೆಯಮೇಲೆ ನಿಂತು ಭಾಷಣ ಬಿಗಿಯುತ್ತಿದ್ದ. "ನೋಡಿ ಇದರಿಂದ ಎಷ್ಟು ತೊಂದರೆಯಾಗಿದೆ ನಮ್ಮ ಹಳ್ಳಿಯವರಿಗೆ. ನಾನು ನಿಮ್ಮ ಪ್ರತಿನಿಧಿಯಾಗಿ ಹೋಗಿ, ಸಂಬಂಧಪಟ್ಟ ಅಮಲ್ದಾರರಿಗೆ ಅಥವಾ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಮರವನ್ನು ಪಕ್ಕಕ್ಕೆ ಜರುಗಿಸಲು. ಏರ್ಪಾಡುಮಾಡುತ್ತೇನೆ.

ಇಲ್ಲದಿದ್ದಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ ದೂರನ್ನು ಕೊಡುತ್ತೇನೆ. ಅದೂ ಆಗದಿದ್ದಲ್ಲಿ ಮುಖ್ಯಮಂತ್ರಿ ಇಂದಿರಾ ಗಾಂಧಿಯವರನ್ನು ನೋಡಿ ನಮ್ಮ ಕಷ್ಟವನ್ನು ಹೇಳುವವರೆಗೂ ಬಿಡುವುದಿಲ್ಲ. ಇದನ್ನು ಮಾಡಲೇಬೇಕು ಎಂದು ಹೇಳುತ್ತಿದ್ದ.. ಅಲ್ಲಿ ಜನಗಳನ್ನು ಪ್ರತಿಬಿಂಬಿಸುತ್ತಿದ್ದ ಪುಟ್ಟ ಸೂತ್ರದ ಗೊಂಬೆಗಳು ಹೇಗೆ ಹೌದು ಹೌದು ಎಂಬಂತೆ ತಲೆಯಾಡಿಸುತ್ತಿದ್ದುವು.

ನಂತರ ಕೆಲವು ಜನಕ್ಕೆ ಒಂದು ಯೋಚನೆ. ನಮ್ಮ ಹಳ್ಳಿಯಲ್ಲಿ ಒಂದು ಮರ ಬಿದ್ದರೆ ಅವರಿಗೆಲ್ಲ ಹೇಳಬೇಕೇ, ಮರವನ್ನು ಪಕ್ಕಕ್ಕೆ ಜರುಗಿಸಿದರೆ ಸಾಕು ಎಂದು 10–12 ಜನ ಎದ್ದುಹೋಗಿ ತಳ್ಳುವುದಕ್ಕೆ ಶುರುಮಾಡಿದರು. ಆಗಲಿಲ್ಲ. ಅದನ್ನು ನೋಡಿ ಇನ್ನು ಕೆಲವರು ಬಂದು ಸೇರಿದರು. ಸ್ವಲ್ಪ ಮಿಸುಕುವುದಕ್ಕಾಯಿತು. ಆಗ ಇನ್ನೂ ಕೆಲವರು ಬಂದುಸೇರಿದರು. ಅದು ದೊಡ್ಡ ಮರ. ಆಗ ಪಕ್ಕಕ್ಕೆ ಜರುಗಿಸಲು ಸುಲಭವಾಯಿತು. ಜನಗಳು ಒಬ್ಬೊಬ್ಬರಾಗಿ ಮನೆಗೆ ಹೊರಟರು.

ಆ ಪುಢಾರಿ ಆ ಕಡೆ ನೋಡಿದ. ಅದೇ ವೇದಿಕೆಯಮೇಲೆ, "ನೋಡಿ ಇದರಿಂದಲೇ ತಿಳಿದುಕೊಳ್ಳಬಹುದು, ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳಬಹುದು. ಇನ್ನೊಬ್ಬರ ಸಹಾಯ ಬೇಕಿಲ್ಲ. ಇದನ್ನೇ ನಾನು ದೆಹಲಿಗೆ ಹೋಗಿ ಇಂದಿರಾ ಗಾಂಧಿಯವರನ್ನು ಭೇಟಿಮಾಡಿ ತಿಳಿಸುತ್ತೇನೆ ಎಂದು ಭಾಷಣ ಮಾಡುತ್ತಿರುತ್ತಾನೆ!

ಸೂತ್ರ ಬೊಂಬೆಯಾಟಕ್ಕೆ ಹಿನ್ನೆಲೆ ಸಾಹಿತಿ ಜಿ.ಪಿ.ರಾಜರತ್ನಮ್ ಅವರು. ನಿರ್ವಹಿಸಿದವರು ನಮ್ಮ ಕಾಫೀಬೋರ್ಡಿನಲ್ಲಿ ಸಹೋದ್ಯೋಗಿಯಾಗಿದ್ದ ದಿವಂಗತ ನರಹರಿಶಾಸ್ತ್ರಿ ಗೊಂಬೆಯಾಟದ ಸೂತ್ರಧಾರ.

30. ಹೆಂಡತಿ ಹೇಳಿದಂತೆ ಕೇಳಬೇಕು

ಯಾವಾಗಲೂ ಅಷ್ಟೆ. ಆ ಕಾನ್‌ಸ್ಟೇಬಲ್ ಸಂಕಪ್ಪ ಇದಾನಲ್ಲ. ನಮ್ಮ ಮುಂದೆ ಅವನ ಜಬರ್ದಸ್ತಿ. ಕೇಳಿಲ್ಲವೆ ಗಾದೆ, ಸಾವಿರ ಕುದುರೆ ಸರದಾರ ಮನೆ ಹೆಂಡತಿಗೆ ಗುಲಾಮ ಅಂತ. ಅದೋ ನೋಡು ಜ್ಞಾಪಿಸ್ಕಂಡಂಗೆ ಅವನೇ ಬರ್ತವ್ನೆ. ಏನ್ ಸಂಕಪ್ಪ ಜೋರಾ ಕೆಲಸ. ಐ ಬೀಡೋ ಮಾರಾಯ. ಕೆಲಸ ಮುಗಿಸ್ಕಂಡ್ ಮನೇಗೆ ಉಸ್ಸಪ್ಪ ಅಂತ ಬಂದ್ರೆ, ನನ್ನ ಹೆಂಡ್ತಿ ಏನನ್ನೇಕು, ಅಲ್ಲಿ ಎಲ್ಡು ಸೀರೆ ಮಡಗಿವ್ನಿ, ಕಸಗಿ ಒಣಗಾಗ್ಬಿಡು ಅನ್ನೋದಾ. ನನ್ನ ಏನು ಅಂತ ತಿಳ್ಕೊಂಬಿಟ್ಟವ್ಳೆ ಅವಳು.

ಆಮೇಲೆ. ಹೋಗ್ಲಿ ಪಾಪ ಅಂತ, ಕಸಗಾಗ್ದೇ ಅನ್ನು! ಅದು ಹೋಗಲಿ. ಇವತ್ತು ಟೇಶನ್‌ಗೆ ಹೋದಾಗ ಆ ದಫೇದಾರ್ ಸಾಹೇಬ, ಓಟ್ಲಿಂದ ಒಂದು ಕಾಫೀ

ತಗಂಬಾರೋ ಅಂತಾನೆ. ನಾನು ಡೂಟೀ ಮೇಲಿದೀನಿ. ನಾನೇನಿಲ್ಲ ಕ್ವಾಪಾಬಂದ್ರೆ, ಹುಲಿಮರಿ. ನನ್ನ ಏನೂ ಅಂತ ತಿಳ್ಕಂಬಿಟ್ಟವ್ನೆ ಆ ದಫೇದಾರ..

ಆಮೇಲೆ. ಹೋಗ್ಲಿ ಪಾಪ ಅಂತ ಕಾಫೀ ತಂದ್ಕೊಟ್ಟೆ ಅನ್ನು!

ನಾನೇನಿಲ್ಲಪ್ಪ ಅಂಗೆ, ನನ್ನ ಹೆಂಡ್ತಿ ನಾನು ಹೇಳಿದಂತೆ ಕೇಳ್ಬೇಕು, ಹಂಗ ಮಡಗಿವ್ನಿ ಅವಳನ್ನ. ಇವತ್ತು ಬಾ ಮನೆತಾವ, ನಿಂಗೇ ಗೊತ್ತಾಗ್ತದೆ. ಅಂದ ಅವನ ಸ್ನೇಹಿತ ಶಿವಣ್ಣ. ಸಂಕಪ್ಪ ಮನೇ ಒಳಕ್ಕೆ ಕಾಲಿಡ್ತಿದ್ದ. ಶಿವಣ್ಣನ ಮಾತು ಜೋರಾಗಿ ಕೇಳ್ತಿತ್ತು.

ಏನ್ ಮಕಮಕ ನೋಡ್ತಾ ನಿಂತ್ಯಲ್ಲ, ಆ ಮುಸುರೇಪಾತ್ರೇನೆಲ್ಲ ಹೊರಗಿಡು ಅಂದ. ಅವನ ಹೆಂಡ್ತಿ ತೆಪ್ಪಗೆ ಒರಗಡೆ ಇಟ್ಟು, ಗುಂಜು ಹುಣಸೇಹಣ್ಣು ಮಡಗಲ್ಲಿ ಅಂದ. ಅದನ್ನೂ ನಾನೇ ಏಳ್ಬೇಕಾ ಅಂತ ಗದರಿಸ್ದ. ಅದನ್ನೂ ಮಾಡಿದಳು. ನೋಡ್ಕಾ ಎಂಗೆ ಮಡಗಿವ್ನಿ ಅವಳನ್ನ. ಇಲ್ದಿದ್ರೆ ನಮ್ಮ ತಲೇಮೇಲೆ ಕುಂತಿಬಿಡ್ತವ್ರೆ ಈ ಎಂಗಸರು. ನಮ್ಮ ಜಬರ್ದಸ್ತಿ ಬಿಡಬಾರ್ದು ನೋಡು. ಸಂಕಪ್ಪ ನೋಡ್ತಾನೆ ಇದ್ದ ಮುಸಿಮುಸಿ ನಗ್ತ. ಆಮೇಲೆ. ಅಮೇಲೇನು. ಪಾತ್ರೇನೆಲ್ಲ ತೊಳೆದಿಟ್ಟೆ ಅನ್ನು!

31. ನನ್ನ ಕಣ್ಣಿಗೆ ಟಿವಿ ಕಾರ್ಯಕ್ರಮಗಳು

ಮಹಾಭಾರತ, ರಾಮಾಯಣ, ಮುಕ್ತ, ಮಾಯಾಮೃಗ ಇವೆಲ್ಲವನ್ನು ಅನೇಕಬಾರಿ ನೋಡಿದ್ದೇನೆ. ಮೊದಲ ಎರಡು ನಾಟಕಗಳನ್ನು ಪುಸ್ತಕರೂಪವಾಗಿ ಓದಿದ್ದೇನೆ. ಆದರೆ ಅವೆಲ್ಲ ನಿಜವೇ ಅಥವಾ ಕಟ್ಟಿಕೊಂಡ ಪುರಾಣವೇ ಎಂದು ಅನುಮಾನ ಬರುತ್ತದೆ. ಗಾಂಧಾರಿಗೆ ನೂರು ಮಕ್ಕಳು, ದ್ರೌಪದಿಗೆ ಐದು ಜನ ಗಂಡಂದಿರು ಅನ್ನುವುದು ಮುಖ್ಯವಲ್ಲ. ಅದರಲ್ಲಿ ಪ್ರತಿಯೊಬ್ಬರೂ ಮಾಡಿರುವ ಪಾತ್ರ ನನ್ನ ಕಣ್ಣಿಗೆ ಕಟ್ಟಿದಂತಿದೆ. ಆ ಭೀಷ್ಮ, ಕೃಷ್ಣ, ವಿದುರ ಅವರುಗಳನ್ನು ನೋಡಿದಾಗ ಅವರೇ ನಿಜವಾದವರು ಎನ್ನುವ ಭ್ರಾಂತಿ ಎಲ್ಲರ ಮನಸ್ಸಿನಲ್ಲೂ ಮೂಡುತ್ತೆ.

ನಾನು ಚಿಕ್ಕಮಗಳೂರಿನಲ್ಲಿದ್ದಾಗ ಮಂಗಳೂರಿನಿಂದ ಒಂದು ಸಾಂಸ್ಕೃತಿಕ ಗುಂಪು ಬಂದಿತ್ತು. ಅದರಲ್ಲಿ ಪಾತ್ರ ವಹಿಸಿದ್ದವರೆಲ್ಲ ಕಾಲೇಜ್ ಪ್ರೊಫೆಸರ್, ಬ್ಯಾಂಕ್ ಮ್ಯಾನೇಜರ್ ಮುಂತಾದ ದೊಡ್ಡ ಪದವಿಯಲ್ಲಿದ್ದವರು. ಮಹಾಭಾರತದಲ್ಲಿನ ಕೆಲವು ದೃಶ್ಯಗಳನ್ನು ವೇಶಭೂಷಣಗಳಿಲ್ಲದೇ ಸಾಮಾನ್ಯವಾಗಿ ಹಾಕಿಕೊಳ್ಳುವ ಉಡುಪುಗಳನ್ನು ಧರಿಸಿ ಸಂಭಾಷಣೆ ಮಾಡಿದರು. ಆದರೂ ಅವರ ಮಾತುಗಳನ್ನು ಕೇಳಿದಾಗ ನಿಜವಾದ ಭೀಷ್ಮ, ಕೃಷ್ಣರೇ ಇರುವಂತೆ ತೋರುತ್ತಿತ್ತು. ಇದು ಪೌರಾಣಿಕ ಕಥೆ ಎನಿಸುತ್ತದೆ.

ಆದರೆ ಲೌಕಿಕವಾಗಿ ನೋಡುವ ಮುಕ್ತ, ಮಾಯಾಮೃಗ ನಾಟಕಗಳಲ್ಲಿ ಬರುವ ಪಾತ್ರಗಳಲ್ಲಿ ಭಾಗವಹಿಸಿದವರು ನಮ್ಮ ಜೊತೆಯಲ್ಲೇ ಇರುವವರು. ಅವರ ಪ್ರಭಾವಗಳನ್ನು ಬಳಸಿಕೊಂಡು ದೃಶ್ಯರೂಪವಾಗಿ ತಯಾರು ಮಾಡಿರುವ ಪ್ರಶಸ್ತಿ ಶ್ರೀಮಾನ್ ಟಿ.ಎನ್. ಸೀತಾರಾಮ್‌ರವರಿಗೆ ಸೇರಬೇಕಾದುದು. ಅದರಲ್ಲಿ ಬರುವ ಎಲ್ಲ ಪಾತ್ರಧಾರಿಗಳೂ ವಿಶೇಷ ವ್ಯಕ್ತಿಗಳು. ಅಂಥವರು ನನ್ನ ಜೊತೆಗಾರರು ಅನ್ನುವುದು ನನಗೊಂದು ಹೆಮ್ಮೆ.

32. ವಿವಾಹ ಪದ್ಧತಿಗಳು ಮಾರ್ಪಾಡಾಗುತ್ತಿವೆ

ಮನುಷ್ಯನ ಮನಸ್ಸು ಹೇಗೆ ಓಡುತ್ತದೆ ಹಾಗೆಲ್ಲಾ ಪದ್ಧತಿಗಳೂ ಬದಲಾವಣೆಗಳಾಗುತ್ತವೆ. ಆ ಕಾಲಕ್ಕೆ ಮದುವೆ ಕರೆಯೋಲೆಗಳಮೇಲೆ ಅವರವರ ಕುಲದೇವರ ಫೋಟೋ ಮೇಲ್ಭಾಗದಲ್ಲಿ. ಅದರ ಕೆಳಗೆ ವೆಂಕಟೇಶ್ವರ ಪ್ರಸನ್ನ, ಅಥವಾ ಕಾಲಭೈರವ ಪ್ರಸನ್ನ ಪ್ರಾರಂಭ ಮಾಡಿ, ನಂತರ ಮದುವೆಯಾಗುವ ಹುಡುಗ ಅಥವಾ ಹುಡುಗಿಯ ತಂದೆ ತಾಯಿಗಳ ಹೆಸರು, ಹುಡುಗ ಅಥವಾ ಹುಡುಗಿಯ ಹೆಸರು, ಮದುವೆಯ ದಿನಾಂಕ, ಸ್ಥಳ, ಮುಹೂರ್ತ ಕಾಲ ನಂತರ ಅತಿಥಿಗಳು ಬಂದು ವಧುವನ್ನು ಆಶೀರ್ವದಿಸಬೇಕೆಂದು ಕೇಳುತ್ತಾರೆ.

ಇದು ಮಾರ್ಪಾಡಾಗಿ ಹುಡುಗ–ಹುಡುಗಿ ಇಬ್ಬರೂ ಕೈ ಹಿಡಿದುಕೊಂಡು ನಿಂತಿರುವ ಫೋಟೋ, ಅವರೇ ಅತಿಥಿಗಳಿಗ ಆಮಂತ್ರಣ ಕೊಟ್ಟಂತೆ! ಆ ತರಹ ಎರಡು ಮೂರು ಕರೆಯೋಲೆಗಳು ಬಂದಿವೆ ನನಗೆ. ರಿಸೆಪ್‌ಶನ್ ದಿವಸ ಅತಿಥಿಗಳಾಗಿ ಬಂದ ಗಂಡ ಹೆಂಡತಿಯರು ಕೂಡಾ ನರ್ತನ ಮಾಡುತ್ತಾರೆ. ಅದು ಒಂದು ದೊಡ್ಡ ಸಂಭ್ರಮ.

ಹಿಂದಿನ ಪದ್ಧತಿಗಳಲ್ಲಿ, ಮದುವೆ ಕಾರ್ಯಕ್ರಮವಾಗಿ ಗಂಡು ಹೆಣ್ಣಿನ ಮಧ್ಯೆ ನಡೆಸುವ ಉರುಟಣೆ, ಚೆಂಡಾಟ ಇವುಗಳು ಇಬ್ಬರಿಗೂ ಸಲಿಗೆ ಬರಲೆಂದು. ಎಲ್ಲವೂ ಪೌರೋಹಿತರು ಹೇಳಿಕೊಡುವ ಎನ್ನರಸಿ, ಚೆಲುವರಿಸಿ ಅಥವಾ ಎನ್ನರಸ, ಚೆಲುವರಸ ಪದಗಳನ್ನು ಅವರ ಬಾಯಿಂದ ಹೇಳಿಸುತ್ತಿದ್ದರು. ಆದರೆ ಈಗ, ಮದುವಗೆ ಮುಂಚೆಯೇ ಆ ಸಲಿಗೆ ಬಂದುಬಿಟ್ಟಿರುವುದರಿಂದ ಆ ಕಾರ್ಯಕ್ರಮ ಅನಗತ್ಯವಂದು ತೋರುತ್ತೆ.

ಮದುವೆಗೆ ಮುಂಚೆ ಊರೆಲ್ಲಾ ಸುತ್ತಾಡುವ, ಸಿನಿಮಾ, ನಾಟಕ ನೋಡುವ ವಧೂವರರಿಗೆ ಅಂತರ್‌ಪಟ ಸರಿಸಿ ಜೀರಿಗೆ ಬೆಲ್ಲ ಹಾಕಿಸುವ ಕಾರ್ಯಕ್ರಮ ಸ್ವಾರಸ್ಯಕರವಾಗಿರುತ್ತೆ. ಒಬ್ಬರು ಎತ್ತರ ಇನ್ನೊಬ್ಬರು ಕುಳ್ಳು ಇದ್ದಾಗ ಯಾರ ಜೀರಿಗೆ

ಬೆಲ್ಲ ಮೊದಲು ಹಾಕುತ್ತಾರೆ. ಎಂಬುದು ಕುತೂಹಲದ ಸಂಗತಿ ಒಮ್ಮೆಮ್ಮೆ ಎತ್ತರದ ಗಂಡು ತಾನೆ ತಲೆ ಬಾಗುತ್ತಾನೆ.

ಈಚೆಗೆ ಒಂದು ಪಂಜಾಬಿ ಮದುವೆಗೆ ಹೋಗಿದ್ದೆ. ಮದುವೆ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿಯೇ ಒಂದು ಸಂಸ್ಥೆ ಇದೆ. ಅದನ್ನು ಇವೆಂಟ್ಸ್ ಮ್ಯಾನೇಜ್‌ಮೆಂಟ್ ಎಂದು ಕರೆಯುತ್ತಾರೆ. ನಮ್ಮಲ್ಲಿ ಪೌರೋಹಿತರು ಇರುವಂತೆ, ಇವೆಂಟ್ಸ್ ಮ್ಯಾನೇಜರ್ ನಡೆಸಿ ಕೊಡುತ್ತಾನೆ.

ಆ ಮದುವೆಯಲ್ಲಿ ಎರಡು ಕುರ್ಚಿಯ ಮೇಲೆ ಗಂಡು ಒಂದು ದಿಕ್ಕಿಗೆ, ಹೆಣ್ಣು ಇನ್ನೊಂದು ದಿಕ್ಕಿಗೆ ಮುಖ ಮಾಡಿ ಕುಳಿತುಕೊಂಡರು. ಮ್ಯಾನೇಜರ್ ಇಬ್ಬರಿಗೂ ಪ್ರಶ್ನೆಗಳನ್ನು ಕೇಳುತ್ತಿದ್ದರು. ಎಲ್ಲವೂ ಸಂಬಂಧ ಅಥವಾ ಅಸಂಬದ್ಧ ಪ್ರಶ್ನೆಗಳೆ ಆಗಿದ್ದವು. 'ನೀವು ಯಾವಾಗ ಒಬ್ಬರಿಗೊಬ್ಬರು ಸಂಪರ್ಕಿಸಿದ್ದು, ಯಾರು ಮೊದಲು ಪ್ರೀತಿಸಿದ್ದು, ಎಲ್ಲಿ ಪ್ರಾರಂಭವಾಯಿತು. ಅದಾದನಂತರ ಯಾವಾಗ ಮದುವೆ ಖಚಿತವಾಯಿತು ಎಂದೆಲ್ಲಾ ಧ್ವನಿವರ್ಧಕದಲ್ಲಿ ಕೂಗಿ ಹೇಳುತ್ತಿದ್ದ! ಅವರು ತಿಳಿಸುವ ಉತ್ತರಗಳು ಅಷ್ಟೇ ಅಸಂಬದ್ಧವಾಗಿದ್ದವು.

ಇವೆಲ್ಲದರಲ್ಲು ತಂದೆ ತಾಯಿಗಳ ಹೆಸರುಗಳು ಬರುವುದೇ ಇಲ್ಲ.

33. ಕನಸಿನಲ್ಲಿ ಕಂಡ ಕಲೆಗಾರನ ಕಿಬ್ಬೆಟ್ಟ.

ಅಮೆರಿಕಾದ ನ್ಯೂಯಾರ್ಕಿನಲ್ಲಿ ಒಬ್ಬ ಚಿತ್ರಕಲೆಗಾರ ಇದ್ದನಂತೆ. ಅವನ ಹೆಸರು ಬಿ.ಎ. ಸಪ್ರಾ ಎಂದು. ಅವನು ಕೈಬೆರಳುಗಳಲ್ಲಿ ಕುಂಚವನ್ನು ಹಿಡಿದರೆ ಸಾಕು ಒಂದಲ್ಲ ಒಂದು ಚಿತ್ರ ಮೂಡಿಬರುತ್ತಿತ್ತು. ಅವನ ಕಲಾಕುಶಲತೆಗೆ ಎಲ್ಲರೂ ಬೆರಗಾಗಿದ್ದರು.



ಅಂಗಡಿಗೆ ಹೋಗಿ ಅವನು ಯಾವುದಾದರೂ ಪದಾರ್ಥವನ್ನು ಕೊಂಡುಕೊಂಡರೆ, ಅಂಗಡಿಯ ಮಾಲೀಕರು ಅವನಿಂದ ಹಣವನ್ನು ತೆಗೆದುಕೊಳ್ಳುತ್ತಿರಲಿಲ್ಲವಂತೆ. ಅದಕ್ಕೆ ಬದಲು ಒಂದು ಚಿತ್ರವನ್ನು ಬರೆದುಕೊಡಿ ಎಂದು ಕೇಳುತ್ತಿದ್ದರಂತೆ. ಅವನು ಬರೆದ ಕಿಬ್ಬೆಟ್ಟದ ಚಿತ್ರ ಪ್ರತಿಯೊಬ್ಬರಿಗೂ

ಹಿಡಿಸಿತ್ತು. ಹಾಗಾಗಿ ಎಲ್ಲರೂ ಅದೇ ಚಿತ್ರವನ್ನು ಬರೆಸಿಕೊಳ್ಳುತ್ತಿದ್ದರು. ಅಂದಿನಿಂದ ಅವನು ಕಿಬ್ಬೆಟ್ಟದ ಸಪ್ರಾ ಎಂದೇ ಪ್ರಸಿದ್ಧನಾಗಿದ್ದ.

ಬೇರೆ ಯಾರಾದರೂ ಚಿತ್ರ ಬರೆಸಿಕೊಳ್ಳಬೇಕೆಂದರೆ, ಅವರು ನಿಮ್ಮ ಅಂಗಡಿಗೆ ಸಪ್ರಾ ಬಂದರೆ ನಮಗೂ ಸ್ವಲ್ಪ ತಿಳಿಸಿ ಅನ್ನುವುದು ಲೋಕಾರೂಢಿಯ ಮಾತಾಗಿತ್ತು. ಎಲ್ಲರೂ ಅವನಿಂದ ಕಿಬ್ಬೆಟ್ಟದ ಚಿತ್ರ ಬರೆಸಿಕೊಂಡು ಅಂಗಡಿಯ ಗೋಡೆಯಮೇಲೆ ತಗುಲಿಹಾಕಿರುತ್ತಿದ್ದರಂತೆ! ನೋಡಿ ಹೇಗಿದ ಕಿಬ್ಬೆಟ್ಟಿನ!

34. ಸಂಗೀತ ಕಚೇರಿ ವ್ಯವಸ್ಥಾಪಕ ನಾನಲ್ಲ



ಬೆಂಗಳೂರಿನ ಕಲಾ ಕೋವಿದರ ಕ್ಷೇತ್ರದಲ್ಲಿ ಸಂಗೀತ ವಿದ್ವಾನ್ ರಮಾನಂದರ ಸಂಗೀತ ಏರ್ಪಾಟು ಆಗಿತ್ತು ಅವರು ತಮ್ಮ ಸ್ವಂತ ಸಂಗೀತ ಶಾಲೆಯನ್ನು ನಡೆಸುತ್ತಿದ್ದಾರೆ ಎಂದು ವದಂತಿ. ಸಂಗೀತ ಪ್ರಾರಂಭವಾದ ಸ್ವಲ್ಪ ಸಮಯದಲ್ಲೇ ಕೇಳಲು ಬಂದಿದ್ದ ಅನೇಕರ ಮುಖದ ಮೇಲೆ ನಿರಾಶಾಭಾವ ಎದ್ದು ಕಾಣುತ್ತಿತ್ತು. ಸದಾನಂದರೂ ಕುಳಿತಿದ್ದರು ಅವರ ವಯಸ್ಸು ಸುಮಾರು 70 ಇರಬಹುದು. ಸಂಗೀತ ಪ್ರಾರಂಭವಾದ ಸ್ವಲ್ಪ ಹೊತ್ತಿನ ನಂತರ ಸದಾನಂದರು ಎದ್ದುನಿಂತು ತಮ್ಮ ಊರುಗೋಲನ್ನು ಹಿಡಿದು ಕೋಲನ್ನು ನೆಲದ ಮೇಲೆ ಕುಟ್ಟುತ್ತ ಅತ್ತಂದಿತ್ತ ಓಡಾಡುತ್ತಿದ್ದರು ಎಲ್ಲರೂ ಅವರ ಕಡೆ ನೋಡಿದರು ಸಂಗೀತ ವಿದ್ವಾನ್ ಶ್ರೀ ರಮಾನಂದರನ್ನು ನೋಡಿದರು. ಹೀಗೇಕೆ ಓಡಾಡುತ್ತಿದ್ದಾರೆಂದು ಒಬ್ಬರು ಅವರನ್ನು ಕೇಳಿದರು. ಅದಕ್ಕೆ ಅವರು ಯಾರು ಈ ಸಂಗೀತ ಕಚೇರಿಯನ್ನು ಏರ್ಪಡಿಸಿದವರು ಅವರು ಸಿಕ್ಕರೆ ಈ ಕೋಲಿನಿಂದ ನಾಲ್ಕು ಬಾರಿಸಿ ಮನೆಗೆ ಹೋಗಬೇಕೆಂದಿದ್ದೇನೆ ಎಂದರು. ಅದಕ್ಕೆ ಅವರು ನಾನಲ್ಲ ವ್ಯವಸ್ಥಾಪಕ. ವ್ಯವಸ್ಥಾಪಕರು ಯಾರು ಎಂಬುದು ನನಗೆ ತಿಳಿದಿಲ್ಲ ಎಂದರು.

35. ರೇಷ್ಮೆ ವ್ಯಾಪಾರಿ ಸಿದ್ದೋಜಿಯ ತಂತ್ರ

ಸಿದ್ದೋಜಿ ಮೈಸೂರಿನಲ್ಲಿ ರೇಷ್ಮೆ ವ್ಯಾಪಾರ ನಡೆಸುತ್ತಿದ್ದ. ಅವನ ಅಂಗಡಿಯಲ್ಲಿ ಮಾರಾಟಕ್ಕಿಟ್ಟಿದ್ದ ರೇಷ್ಮೆ ಸೀರೆಗಳು ಬಹಳ ಮೇಲ್ಮಟ್ಟದ್ದು ಎಂದು ಎಲ್ಲರೂ ಹೇಳುತ್ತಿದ್ದರು. ಆದರೆ ಅವನು ಮಾಡುತ್ತಿದ್ದ ಕುತಂತ್ರ ಯಾರಿಗೂ ಗೊತ್ತಿರಲಿಲ್ಲ.

ಅವನು ಉತ್ತರ ಭಾರತದ ಬರೋಡದಿಂದ ಕಚ್ಚಾ ರೇಷ್ಮೆ ದಾರವನ್ನು ಯಾರಿಗೂ ತಿಳಿಯದಂತೆ ಪ್ರತಿವಾರವೂ ಕಾಲಿಗೆ ಸುತ್ತಿಕೊಂಡು ರೈಲಿನಲ್ಲಿ ತರುತ್ತಿದ್ದನಂತೆ. ದಾರಕ್ಕೆ ಬೇರೆ ಬೇರೆ ತರಹದ ಸಾಮಾನುಗಳನ್ನು ಬೆರೆಸಿ ಉತ್ತಮ ಮಟ್ಟದ ರೇಷ್ಮೆಯಂತೆ ಮಾಡಿ ಸೀರೆಗಳನ್ನು ತಯಾರಿಸುತ್ತಿದ್ದ. ಸರ್ಕಾರಿ ಅಧಿಕಾರಿಗಳಿಗೆ ಅನುಮಾನ ಬಂದು ಅವನನ್ನು ಹಿಡಿಯಬೇಕೆಂದು ಆದೇಶ ನೀಡಿದರು. ಸರ್ಕಾರದ ಗುಪ್ತಚಾರರು ಒಂದು ದಿನ ಅವನು ರೈಲಿನಲ್ಲಿ ಬರುತ್ತಿದ್ದಾಗ ಕಾದು ನಿಂತಿದ್ದರು. ಆದರೆ ಸಿದ್ದೋಜಿಗೆ ಅವರ ಪ್ರಯತ್ನ ಹೇಗೋ ಗೊತ್ತಾಗಿತ್ತು. ಅವನು ಮೈಸೂರು ತಲುಪುವುದಕ್ಕೆ ಮುಂಚೆಯೇ ಹಿಂದಿನ ಸ್ಟೇಷನ್ನಿನಲ್ಲಿ ಕಾಲಿಗೆ ಸುತ್ತಿದ್ದ ರೇಷ್ಮೆದಾರವನ್ನೆಲ್ಲ ಬಿಚ್ಚಿ ಚೀಲಕ್ಕೆ ಸೇರಿಸಿದ. ಕಾಲಿಗೆ ಕೆಟ್ಟ ವಾಸನೆಯ ಮುಲಾಮನ್ನು ಪಟ್ಟಾಗಿ ಬಳಿದುಕೊಂಡು ಬಟ್ಟೆಯನ್ನು ಸುತ್ತಿದ. ಮೈಸೂರು ಸ್ಟೇಷನ್ನಿನಲ್ಲಿ ಇಳಿಯುತ್ತಿದ್ದ ಹಾಗೆ ಸರ್ಕಾರಿ ಗುಪ್ತಚಾರರು ಅವನನ್ನು ಹಿಡಿದರು. ಅವರು ಅವನ ಕಾಲನ್ನು ಮುಟ್ಟುತ್ತಿದ್ದ ಕೂಡಲೇ ನೋವು ಎಂದು ಕಿರುಚಿದ. ಅವರು ಕೇಳಲಿಲ್ಲ ಒಂದರ ಮೇಲೊಂದು ಸುತ್ತಿದ್ದ ಬಟ್ಟೆಯನ್ನು ಬಿಚ್ಚಿದರೆ ಆ ಮುಲಾಮಿನ ವಾಸನೆ ಅವರಿಗೆ ತಡೆದುಕೊಳ್ಳಲು ಅಸಾಧ್ಯವಾಯಿತು. ಸಿದ್ದೋಜಿಗೆ ತೊಂದರೆ ಕೊಟ್ಟಿದ್ದಕ್ಕೆ ಕ್ಷಮಾಪಣೆ ಕೇಳಿ ಹೊರಟು ಹೋದರು. ಅವನ ರೇಷ್ಮೆ ಸೀರೆ ವ್ಯಾಪಾರ ಯಥಾ ಪ್ರಕಾರ ಮುಂದುವರೆಯಿತು.

36. ಕದ್ದ ಕಳ್ಳ ಬೆಚ್ಚಾದ

ಬೆಂಗಳೂರು ಜಯನಗರ ಬಡಾವಣೆಯಲ್ಲಿ 18ನೇ ಮೈನ್ ರಸ್ತೆಯ ಹತ್ತಿರ ಇರುವ ಗಣೇಶ ದೇವಾಲಯಕ್ಕೆ ಬಹಳ ಜನ ಹೋಗುತ್ತಾರೆ. ಸುತ್ತಮುತ್ತ ಹಸಿರು ಮರಗಳು ಇರುವುದರಿಂದ ಯಾವಾಗಲೂ ಸ್ವಲ್ಪ ಕತ್ತಲಾಗಿರುತ್ತದೆ. ರಸ್ತೆಯ ಮೇಲೆ ಒಬ್ಬೊಬ್ಬರೇ ಹೆಂಗಸರು ಬರುವುದನ್ನು ಕಾದು ನೋಡುತ್ತಿದ್ದ ಒಬ್ಬ ಕಳ್ಳ ಒಂದು ದಿನ ಒಬ್ಬಾಕೆ ಅಲ್ಲಿ ಬರುತ್ತಿದ್ದಾಗ ಹಿಂದಿನಿಂದ ಹೋಗಿ ಆಕೆಯ ಚಿನ್ನದ ಸರವನ್ನು ಎಳೆದುಕೊಂಡು ಓಡಿಹೋದ. ಮನೆಗೆ ಹೋದ ನಂತರ ಗೊತ್ತಾಯಿತು ಅದು ನಕಲಿ ಸರವೆಂದು. ಅವನಿಗೆ ಬಹಳ ಸಿಟ್ಟು ಬಂತು. ಮಾರನೇ ದಿನ ಅವಳು ಬರುವುದನ್ನೇ ಕಾಯುತ್ತಿದ್ದ. ಸ್ವಲ್ಪ ಹತ್ತಿರ ಬಂದಾಗ ಆ ಚೈನನ್ನು ಅವಳ ಮುಖದ ಮೇಲೆ ಎಸೆದು ನಿನಗೆ ನಾಚಿಕೆಯಾಗುವುದಿಲ್ಲವೇ ನಕಲಿಸರವನ್ನು ಹಾಕಿಕೊಳ್ಳುವುದಕ್ಕೆ ಎಂದು ಹೇಳಿ ಓಡಿ ಹೋದನಂತೆ!

37. ಪರೀಕ್ಷಾ ಫಲಿತಾಂಶ ಏನಾಯ್ತು

ಸುಬ್ಬಣ್ಣನಿಗೆ ಕಾಮರ್ಸ್ ಎಂದರೆ ಮೊದಲಿನಿಂದಲೂ ಅಷ್ಟಕಷ್ಟೇ. ಪರೀಕ್ಷೆಯಲ್ಲಿ ಮೂರು ಬಾರಿ ನಾಪಾಸ್ ಆಗಿದ್ದ. ಶುದ್ಧ ಅವಮಾನ. ಜೊತೆಗೆ ತಂದೆ ತಾಯಿಗಳಿಂದ ದೂಷಣೆ. ಪಾಸ್ ಮಾಡಿ ಕೆಲಸಕ್ಕೆ ಸೇರಿ ಸಂಪಾದನೆ ಮಾಡುತ್ತೀಯಾ ಎಂದು ಏನೇನೊ ಆಸೆ ಇಟ್ಟುಕೊಂಡಿದ್ದೆವು. ಒಟ್ಟಿನಲ್ಲಿ ನಮ್ಮ ಹಣೆಬರಹ. ಅವರಿಗೆ ಅವರದ್ದೇ ಪೇಚಾಟ. ಸುಬ್ಬಣ್ಣ ತಾನೇ ಏನು ಮಾಡುವುದಕ್ಕೆ ಸಾಧ್ಯ. ಚರಿತ್ರೆ ಭೂಗೋಳ ನೂರಕ್ಕೆ 70 75. ಕಾಮರ್ಸ್‌ನಲ್ಲಿ ಮಾತ್ರ 30ಕ್ಕೆ ಮುಂದು ಹೋಗಲಿಲ್ಲ. ನಾಲ್ಕನೇ ಸಲವೂ ಪಾಸಾಗದಿದ್ದರೇ? ಏನಾದರೂ ಆಗಲಿ ಈ ಬಾರಿ ತೇರ್ಗಡೆಯಾಗಲೇಬೇಕೆಂದು ಮನಸ್ಸಿನಲ್ಲಿ ನಿರ್ಧಾರ ಮಾಡಿಕೊಂಡ. ಪರೀಕ್ಷೆಯ ದಿನ ಗೊತ್ತಾದ ಸಮಯಕ್ಕೆ ಶಾಲೆಗೆ ಪ್ರವೇಶಿಸಿದ. ಇನ್ನೊಬ್ಬ ಹುಡುಗಿ ಆಗಲೇ ಸರಸರ ಪ್ರಶ್ನೆಪತ್ರಿಕೆ ಪಡೆದು ಉತ್ತರ ಬರೆಯುತ್ತಿದ್ದಳು. ಸುಬ್ಬಣ್ಣ ಅವಳ ಪಕ್ಕದ ಸೀಟಿನಲ್ಲಿ ಕುಳಿತುಕೊಂಡು ಅವಳ ಕಡೆ ಕಣ್ಣನ್ನೆ ಮಾಡಿ ಅವಳು ಬರೆದು ಮುಗಿಸಿದ್ದ ಉತ್ತರದ ಪುಟಗಳನ್ನು ಅವನಿಗೆ ಕಾಣುವಂತೆ ಇಡು ಎಂದು ಸೂಚಿಸಿದ. ಅದು ಅವಳಿಗೆ ಬಹಳ ಮುಜುಗರವಾಯಿತು. ಯತ್ನವಿಲ್ಲದೆ ಅವಳು ಬರೆದಿದ್ದ ಹಾಳೆಗಳನ್ನು ಪಕ್ಕದಲ್ಲಿಟ್ಟು ಮುಂದುವರೆಸಿದಳು. ಅದರಂತೆ ಎಲ್ಲವನ್ನೂ ಬರೆದು ಪರೀಕ್ಷರಿಗೆ ಕೊಟ್ಟು ಹೊರಗಡೆ ಬಂದು ಆ ಹುಡುಗಿ ಬರುವುದನ್ನೇ ಕಾಯುತ್ತಿದ್ದ. ಅವಳು ಬಂದ ಕೂಡಲೇ ನಿಮಗೆ ವಂದನೆ ಹೇಳಬೇಕೆಂದು ಕಾಯುತ್ತಿದ್ದೆ. ನನಗೆ ಕಾಮರ್ಸ್ ಎಂದರೆ ತಲೆನೋವು ಮೂರು ಸಲ ನಾಪಾಸಾಗಿದೆ. ಈ ಬಾರಿ ನಾನು ತೇರ್ಗಡೆಯಾದರೆ ಅದು ನಿಮ್ಮ ಸಹಾಯದಿಂದ ಅದಕ್ಕಾಗಿ ನಿಮಗೆ ವಂದನೆಗಳು ಎಂದ ಸುಬ್ಬಣ್ಣ, ಅವಳು ಮಿಸ್ಟರ್ ನಾನು ಬರೆದಿದ್ದು ಕಾಮರ್ಸ್ ಪೇಪರಲ್ಲ ಬ್ಯಾಂಕಿಂಗ್ ಪೇಪರ್ ಎಂದು ಹೇಳಿ ನಗುತ್ತಾ ಹೊರಟು ಹೋದಳು. ಸುಬ್ಬಣ್ಣ ಕಣ್‌ಕಣ್ ಬಿಡುತ್ತ ಅಲ್ಲಿಯೇ ನಿಂತುಕೊಂಡ. ಪರೀಕ್ಷೆಯ ಫಲಿತಾಂಶ ಏನಾಗಿರಬಹುದು!

38. ಸಮನ್ವಯ ಸಮತಾಭಾವ ಯಾವ ಮಟ್ಟದಲ್ಲಿ ?

ಇದು ಸುಮಾರು 80 ವರ್ಷಗಳ ಹಿಂದೆ ನಡೆದ ಸಂಗತಿ ಇದು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸೀತಾರಾಮುವಿಗೆ ಕೆಲಸ ದೊರೆಯಿತು. ಕೆಲವಾರು ವರ್ಷಗಳ ನಂತರ ಅವನ ವೃತ್ತಿ ವೇತನದಲ್ಲಿ ಬಡ್ತಿಯೂ ಸಿಕ್ಕಿತು. ಕಾಲೇಜು ಪ್ರಿನ್ಸಿಪಾಲರು ಅವನ ಕೆಲಸವನ್ನು ಮೆಚ್ಚಿದರು. ಅದಾದ ಎರಡು ವರ್ಷಗಳ ನಂತರ

ಸೀತಾರಾಮುವಿನ ಬುದ್ಧಿಯೂ ಚುರುಕಾಯಿತು. ವಿದ್ಯಾರ್ಥಿಗಳಿಂದ ವಸೂಲಿ ಮಾಡುವ ಕೆಲಸಕ್ಕೆ ರಶೀತಿಗೆ ಕೊಡುವಾಗ 200 ರೂಪಾಯಿಗೆ ರಶೀದಿ ಅವನಿಗೆ ಕೊಟ್ಟು ಕಾಲೇಜಿನಲ್ಲಿ ಇಟ್ಟುಕೊಳ್ಳುವ ರಶೀದಿ ಭಾಗದಲ್ಲಿ 150 ರೂಪಾಯಿ ಎಂದು ನಮೂದಿಸಿ ಅದರಂತೆ ಹಣವನ್ನು ಬ್ಯಾಂಕಿಗೆ ಜಮಾ ಮಾಡುತ್ತಿದ್ದ. ಬಾಕಿ ರೂ. 50 ರೂಪಾಯಿ ಅವನ ಜೇಬಿಗೆ. ನೂರಾರು ವಿದ್ಯಾರ್ಥಿಗಳಿಂದ ಸಾವಿರಾರು ರೂಪಾಯಿ ಜೇಬಿಗೆ ಸೇರುತ್ತಿತ್ತು. ವರ್ಷದ ಕಡೆಯಲ್ಲಿ ವಿದ್ಯಾರ್ಥಿಗಳಿಗೆ ರೂ. 50 ಬಾಕಿ ಇದೆ ಕೂಡಲೇ ಹಣ ಕೊಡಬೇಕೆಂದು ನೋಟಿಸ್ ಹೋದಾಗ ಅವರು ಮೊದಲೇ 200 ರೂ ಕೊಟ್ಟಿದ್ದಾರೆ ಎಂದು ಅವರಲ್ಲಿದ್ದ ರಶೀದಿಯನ್ನು ತೋರಿಸಿದಾಗ ಸೀತಾರಾಮನ ಚುರುಕು ಬುದ್ಧಿ ಬಯಲಾಯಿತು. ಕಾಲೇಜು ಪ್ರಿನ್ಸಿಪಾಲರು ಅವನನ್ನು ಕೆಲಸದಿಂದ ತೆಗೆದು ಹಾಕಬೇಕೆಂದು ತೀರ್ಮಾನ ಮಾಡಿದರು. ಸೀತಾರಾಮು ಅವರ ಕಾಲಿಗೆ ಬಿದ್ದು ನಾನು ಬ್ರಾಹ್ಮಣ ದಯವಿಟ್ಟು ತಪ್ಪು ಮನ್ನಿಸಿ, ಕೆಲಸದಿಂದ ತೆಗೆಯಬೇಡಿ ಹಣವನ್ನು ಆರೇಳು ಕಂತುಗಳಲ್ಲಿ ವಾಪಸ್ ಕೊಡುತ್ತೇನೆ ಎಂದು ಬೇಡಿಕೊಂಡನಂತೆ.

ಜನಸಾಮಾನ್ಯರಲ್ಲಿ ಬ್ರಾಹ್ಮಣನೇ ಹಾಗೆ ಮಾಡಿರುವಾಗ ನಾವೇನು ಕಡಿಮೆ ಎಂದು ಒಬ್ಬೊಬ್ಬರಿಗೂ ಪೈಪೋಟಿ. ಒಬ್ಬ ಸಾವಿರಾರು ರೂಪಾಯಿಗೆ ಮೋಸ ಮಾಡಿದ್ದರೆ ಇನ್ನೊಬ್ಬ ಲಕ್ಷಾಂತರ, ಮತ್ತೊಬ್ಬ ಕೋಟಿ ಅದರಲ್ಲಿ ಬೇದಭಾವ ಬೇಡ. ಗಾಂಧೀಜಿಯವರೇ ಹೇಳಿದ್ದರಲ್ಲವೇ ಎಲ್ಲ ಜಾತಿ ಮತಗಳಲ್ಲೂ ಸಮನ್ವಯತೆ ಇರಬೇಕು ಎಂದು ಅದನ್ನು ಅಕ್ಷರಸಹ ಪಾಲಿಸಿಕೊಂಡು ಬಂದಿದ್ದಾರೆ ಈಗಿನ ಜನ ಎಂಬುದನ್ನು ಕಣ್ಣಾರೆ ನೋಡುತ್ತಿದ್ದೇವೆ. ಚಿತ್ರ

39. ಪದಾರ್ಥ ಒಂದೇ ಹೆಸರು ಬೇರೆ



ಆ ಹಳ್ಳಿಗೆ ಬ್ರಾಹ್ಮಣರ ಕೇರಿ ಇತ್ತು. ಹೆಸರು ದೊಡ್ಡದಾದರೂ ಇದ್ದದ್ದು ನಾಲ್ಕು ಮನೆಗಳು. ಹಳ್ಳಿಯು ಶಾನುಭೋಗರ ಮನೆ ಬಿಟ್ಟರೆ ಉಳಿದ ಮೂರು ಮನೆಗಳು ಅವರ ದೂರದ ನೆಂಟರದ್ದು. ಶಾನುಭೋಗರ ಮನೆಯಲ್ಲಿ ಎರಡು ಹಸು ಒಂದು ಎಮ್ಮೆ. ಮನೆ ಪೂರ್ತಿ ಸಿಗುವ ಹಾಲು ಸಾಕಾಗುತ್ತಿತ್ತು. ಅಲ್ಲದೆ ಆಗಿಂದಾಗ್ಗೆ ಸರ್ಕಾರಿ ಅಧಿಕಾರಿಗಳು ಬರುತ್ತಿದ್ದರು. ವರ್ಷದಲ್ಲಿ ಒಂದೋ ಎರಡು ಸಮಾರಂಭಗಳಿದ್ದಾಗ ಸುತ್ತಮುತ್ತಲ ಹಳ್ಳಿಗಳಿಂದ ಹಾಲನ್ನು ತರಿಸುತ್ತಿದ್ದರು.

ಒಂದು ಸಲ ಮನೆಯಲ್ಲಿ ಮೊಮ್ಮಗುವಿನ ನಾಮಕರಣ ಏರ್ಪಡಿಸಿದರು. ಸುಮಾರು 30 ಜನ ನೆಂಟರಿಷ್ಟರು ನೆರೆದಿದ್ದರು. ಅವರುಗಳು ಉಳಿದುಕೊಳ್ಳುವುದಕ್ಕೆ ತಾಪತ್ರಯವಿರಲಿಲ್ಲ. ಅಲ್ಲಿದ್ದ ಇನ್ನೂ ಮೂರು ಮನೆಗಳಲ್ಲಿ ಹೆಂಗಸರು ಮಕ್ಕಳು ಇರುತ್ತಿದ್ದರು. ಊರಿನ ದೇವಸ್ಥಾನದ ಜಗುಲಿ ಗಂಡಸರಿಗೆ ಸಾಕಾಗುತ್ತಿತ್ತು. ಆಗ ಸಕತ್ ಬೇಸಿಗೆಕಾಲ. ಸುತ್ತಮುತ್ತಲಿಂದ ಸಂಗ್ರಹಿಸಿದ್ದ 10 ಸೇರು ಹಾಲು ಒಡೆದು ಹೋಯಿತು. ಹಣ ಕೊಡುವುದಾದರೂ ದೊರಕುವುದು ಕಷ್ಟ. ಬಂದಿದ್ದ ನೆಂಟರ ಕಡೆ ಹೆಂಗಸರು ಕಾಫಿಗೆ ಎಮ್ಮೆ ಹಾಲೇ ಬೇಕು, ಮಕ್ಕಳಿಗೆ ಹಸುವಿನ ಹಾಲೇ ಬೇಕು ಎಂದರೆ ಹೇಗೆ ಸಾಧ್ಯ. ಶಾನುಭೋಗರು ಕಕ್ಕ ಬಿಕ್ಕಿಯಾದರೂ. ಅವರ ಹತ್ತಿರದ ಸಂಬಂಧಿ ಒಬ್ಬರು ಅವರಿಗೆ ಸಮಾಧಾನ ಮಾಡಿ ಯೋಚನೆ ಮಾಡಬೇಡಿ ಹೇಗಾದರೂ ನಿಭಾಯಿಸೋಣ ಎಂದು ಹೇಳಿ ರಾತ್ರಿ ಹಾಲಿನ ಪುಡಿಯಿಂದ ಹಾಲನ್ನು ತಯಾರಿಸಿದರು. ಅವರ ಮನೆಯಲ್ಲಿ ಎರಡು ಕೊಳದಪ್ಪಲೆ ಇತ್ತು. ಒಂದು ಕಲಾಯಿ ಮಾಡಿದ್ದು ತಾಮ್ರದ್ದು. ಇನ್ನೊಂದು ಹಿತ್ತಾಳೆಯದು. ಒಂದರಲ್ಲಿ ಸ್ವಲ್ಪ ನೀರಾಗಿರುವ ಹಾಲು ಹಿತ್ತಾಳೆ ಕೊಳೆದಪ್ಪಲೆ ಗಟ್ಟಿಯಾಗಿರುವ ಹಾಲು ಅದು ಎಮ್ಮೆ ಹಾಲು ಕಾಫಿಗೆ ಮಾತ್ರ. ಬಂದ ಹೆಂಗಸರಿಗೆಲ್ಲ ಎಚ್ಚರಿಕೆ ಕೊಡುತ್ತಿದ್ದರು. ಒಂದಕ್ಕೊಂದು ಬೆರಸಬೇಡಿ ಅದಕ್ಕಾಗಿಯೇ ಎಮ್ಮೆ ಹಾಲಿನ ಕೊಳದಪ್ಪಲೆಯ ಮೇಲೆ ಮೂರು ನಾಮ ಬಳಿದಿದ್ದೇನೆ ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಎಲ್ಲರೂ ಸಮಾಧಾನವಾಗಿ ತೆಗೆದುಕೊಂಡು ಹೋದರು. ನಾಮಕರಣ ಕಾರ್ಯಕ್ರಮ ಮುಗಿದು ಬಂದಿದ್ದ ನೆಂಟರೆಲ್ಲ ಹೊರಟು ಹೋದ ನಂತರ ಹತ್ತಿರದ ಸಂಬಂಧಿಯನ್ನು ಕೊಂಡಾಡಿದರು. ಸದ್ಯ ನನ್ನ ಮಾನ ಉಳಿಸಿದಿರಿ ಎಂದರು. ಸಮಾರಂಭವೆಲ್ಲ ಹಾಲಿನ ಪುಡಿ ಹಾಲಿನಿಂದಲೇ ಮುಕ್ತಾಯವಾಯಿತು!

40. ನೋಟಿನ ಕಂತೆ ಹೊರಕ್ಕೆ ಬಂತು

ಇದು ಅನೇಕ ವರ್ಷಗಳ ಹಿಂದೆ ನಡೆದ ಒಂದು ಪ್ರಸಂಗ. 1952–53 ರಲ್ಲಿ ನಾನು ಚಿಕ್ಕಮಗಳೂರು (ಕರ್ನಾಟಕ) ಕಾಫಿಬೋರ್ಡ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿಗೆ 8 ಮೈಲಿ ದೂರದಲ್ಲಿ ಜೋಳದಹಾಳು ಎಂಬ ಹಳ್ಳಿ ಇದೆ. ಅಲ್ಲಿ ಒಬ್ಬ ಸಣ್ಣ ಪ್ರಮಾಣದ ಕಾಫಿ ಬೆಳೆಗಾರರು ಇದ್ದರು. ಒಂದು ಸಣ್ಣ ಕಾಫಿ ಬೀಜ ಹುರಿಯುವ ಯಂತ್ರದ ತರಹ ಸಲಕರಣೆಯನ್ನು ಗುಟ್ಟಾಗಿ ತೆಗೆದುಕೊಂಡು ಒಬ್ಬ ಖಿದೀಮ ಆ ಕಾಫಿ ಬೆಳೆಗಾರರನ್ನು ಭೇಟಿ ಮಾಡಿದನಂತೆ. ಅವರಿಗೆ ಆ ಯಂತ್ರವನ್ನು ತೋರಿಸಿ ಇದರಿಂದ ನೀವು ಎಷ್ಟು ಬೇಕಾದರೂ ಐವತ್ತು ರೂಪಾಯಿ ನೋಟುಗಳನ್ನು ತಯಾರಿಸಬಹುದು. ನಾನು ಇದನ್ನು ಬೇರೆ ಯಾರಿಗೂ ಮಾರುವಂತಿಲ್ಲ. ನನಗೆ ತುರ್ತಾಗಿ ಹತ್ತು ಸಾವಿರ ರೂಪಾಯಿ ಬೇಕು ಕೊಡಿ. ನಿಮಗೆ ಅನುಮಾನ ಬಂದರೆ

ರೂ. 50 ನೋಟನ್ನು ಹಚ್ಚು ಹಾಕಿ ತೋರಿಸುತ್ತೇನೆ ಎಂದು ಅವರಿಗೆ ನಂಬಿಕೆ ಹುಟ್ಟಿಸಿದ. ನಂತರ ಎರಡು ಮೂರು ನೋಟುಗಳನ್ನು ಅಚ್ಚು ಹಾಕಿ ನೀವು ಇದರಂತೆ ಮಾಡಿ ಎಂದು ಹೇಳಿ ಅವರ ಕೈಯಿಂದಲೂ ಮಾಡಿಸಿದನಂತೆ. ಕಾಫಿ ಬೆಳೆಗಾರರಿಗೆ ನಂಬಿಕೆ ಬಂತು. ನೋಟಿನ ಆಕಾರದ 500 ಹಾಳೆಗಳನ್ನು ಕೊಟ್ಟು 10,000 ಅದರಿಂದ ತೆಗೆದುಕೊಂಡು ಹೊರಟು ಹೋದನಂತೆ. ನಂತರ ಅವನು ಅಲ್ಲಿಂದ ತೆರಳಿದ ಮೇಲೆ ಕಾಫಿ ಬೆಳೆಗಾರರು ಯಂತ್ರದ ಹಿಡಿಯನ್ನು ತಿರುಗಿಸಿದರೆ ಪುನಃ ಎರಡು ನೋಟುಗಳು ಮಾತ್ರ ಹೊರಕ್ಕೆ ಬಂತು. ಅವರು ಯಂತ್ರವನ್ನು ಚೀಲದಲ್ಲಿಟ್ಟುಕೊಂಡು ಚಿಕ್ಕಮಗಳೂರು ಬಸ್ ನಿಲ್ದಾಣಕ್ಕೆ ಬಂದು ಆತನನ್ನು ಗುರುತಿಸಿ ಕೇಳಿದರಂತೆ. ಆತ ಯಾರೋ ಬೇರೆಯವನು ಎಂಬಂತೆ ನಟಿಸಿ ಏನು ನಿಮ್ಮ ಹತ್ತಿರ ನೋಟ್ ತಯಾರಿಸುವ ಯಂತ್ರ ಇದೆ ಎಂದು ಕೇಳಿದಾಗ ಅವರು ಭಯಪಟ್ಟು ಹೊರಟು ಹೋದರಂತೆ.

41. ಮೊಟ್ಟೆ ಇಟ್ಟ ಕೋಳಿ ಮಾಯ

ನಾನು ಆರು ವರ್ಷ 1959–65 ಚಿಕ್ಕಮಗಳೂರಿನ (ಕರ್ನಾಟಕ) ಹತ್ತಿರ ಇರುವ ಕಾಫಿ ರಿಸರ್ಚ್ ಇನ್ಸಿಟ್ಯೂಟ್‌ನಲ್ಲಿ ಕೆಲಸ ಮಾಡಿದೆ. ಅದು ಸುಮಾರು 300 ಎಕರೆ ಪ್ರದೇಶ. ಬೇರೆ ಖಾಸಗಿ ಜನಕ್ಕೆ ಪ್ರವೇಶವಿಲ್ಲ. ಕಾಫಿ ಗಿಡಗಳಿಗೆ ಸಂಬಂಧಪಟ್ಟ ಪ್ರಯೋಗ ಶಾಲೆಗಳು, ಐದಾರು ಆಫೀಸ್‌ಗಳು, ನೌಕರರು, ಕೂಲಿ ಆಳುಗಳು ಅವರಿಗೆಲ್ಲ ಉಚಿತ ವಾಸದ ಮನೆಗಳು. ಸಂಸಾರಸ್ಥರಿಗೆ ಪೂರಾ ಮನೆ. ಉಳಿದವರಿಗೆ ಮೂರು ನಾಲ್ಕು ಜನ ಒಟ್ಟಿಗೆ ಇರುವಂತೆ. ಸುತ್ತಲೂ ಕಾಫಿ ತೋಟ ಪ್ರಯೋಗ ನಡೆಸುವುದಕ್ಕೆ. ಅಲ್ಲಿದ್ದ ಮನೆಗಳಿಗೆ ಕಿಟಕಿ ಬಹಳ ದೊಡ್ಡದು. ಮಧ್ಯೆ ಕಂಬಿ ಇರಲಿಲ್ಲ. ಬಾಗಿಲು ಮುಚ್ಚುವ ಪ್ರಮೇಯವೂ ಇಲ್ಲ.

ನಮ್ಮ ಸಹೋದ್ಯೋಗಿ ಬಾಕರ್‌ಆಲಿ ಎನ್ನುವವರ ಮನೆಯಲ್ಲಿ ನಾಲ್ಕು ಕೋಳಿಗಳನ್ನು ಸಾಕಿದ್ದರು. ಅದರ ಪೈಕಿ ಒಂದು ಕೋಳಿ ಇನ್ನೊಬ್ಬರ ನಾಗೇಶ್ ರಾವ್ ಅವರ ಮನೆಗೆ ಕಿಟಕಿ ಒಳಗಿಂದ ಒಳಕ್ಕೆ ಹೋಗಿ ಮಂಚದ ಮೇಲೆ ಎರಡು ಮೊಟ್ಟೆಗಳನ್ನು ಇಡುತ್ತಿತ್ತು. ಅದನ್ನು ನೋಡಿದವರು ತೆಗೆದುಕೊಂಡು ಹೋಗುತ್ತಿದ್ದರು. ಅದು ಸುಮಾರು ತಿಂಗಳುಗಳ ಕಾಲದಿಂದಲೂ ನಡೆಯುತ್ತಿತ್ತು. ಇದು ಬಾಕರ್‌ಆಲಿಗೆ ಗೊತ್ತಿರಲಿಲ್ಲ. ಅವನಿಗೆ ತಿಳಿದ ಕೂಡಲೇ ಆ ಕೋಳಿಯನ್ನು ಅವರ ಮನೆಗೆ ಊಟಕ್ಕೆ ಉಪಯೋಗಿಸಿಕೊಂಡ. ಮಾರನೆಯ ದಿನ ನೋಡುತ್ತಾರೆ ಮೊಟ್ಟೆ ಉಪಯೋಗಿಸುತ್ತಿದ್ದವರೆಲ್ಲ ಪೆಚ್ಚಾದರು!

ಕಥೆ



42. ಜೀವನಕ್ಕೆ ಬೇಕಾದ ಒಂದು ವಿದ್ಯೆ ಸಾಕು

ನಮ್ಮ ಸ್ನೇಹಿತರ ಮನೆಗೆ ಹೋದಾಗ ಅಲ್ಲಿ ಮಗುವೊಂದು ಮಕ್ಕಳ ಕಥೆ ಪುಸ್ತಕ ನೋಡುತ್ತಿತ್ತು. ಆಗ ನನಗೆ ಶಾಲಾದಿನಗಳಲ್ಲಿ ಓದಿದ ನೀತಿ ಚಿಂತಾಮಣಿ ನೆನಾಪಾಯಿತು.

ಒಂದೂರಿನಲ್ಲಿ ಒಬ್ಬ ಅಂಬಿಗ ವಾಸಿಸುತ್ತಿದ್ದ. ಅಂಬಿಗ ಅಂದರೆ ದೋಣಿ ನಡೆಸುವವನು. ಅವನಿಗೆ ಮಕ್ಕಳಿರಲಿಲ್ಲ. ಆ ಹಳ್ಳಿಯಲ್ಲಿದ್ದ ಮಕ್ಕಳೆಲ್ಲ ನನ್ನ ಮಕ್ಕಳೇ ಎಂದು ತಿಳಿದು ಸಂಪಾದಿಸಿದ ಹಣದಲ್ಲಿ ಒಂದು ಪಾಲನ್ನು ಅವರಿಗೆ ಖರ್ಚುಮಾಡುತ್ತಿದ್ದ. ತೃಪ್ತಜೀವನ. ಹೆಂಡತಿಯೂ ಅದೇ ಸ್ವಭಾವದವಳು. ಹಾಗಾಗಿ ಅವರಿಗೆ ಯಾವ ಕೊರತೆಯೂ ಇರಲಿಲ್ಲ.

ಒಂದು ದಿನ ಯಾತ್ರಿಕರಿಗಾಗಿ ಕಾಯುತ್ತಿದ್ದಾಗ ಮೂರು ಜನ ಪಂಡಿತರು ಬಂದು. ನಾವು ಆಚೆ ದಡಕ್ಕೆ ಹೋಗಬೇಕು ಎಂದರು. ಕುಳಿತುಕೊಳ್ಳಿ ಸ್ವಾಮಿ ಎಂದು ಹೇಳಿ, ಅಂಬಿಗ ದೋಣಿಯನ್ನು ಮುಂದಕ್ಕೆ ಬಿಟ್ಟ. ಸ್ವಲ್ಪ ದೂರ ಪ್ರಯಾಣ ಮಾಡಿದ ಮೇಲೆ, ದೋಣಿ ನದಿಯ ಅರ್ಧಭಾಗಕ್ಕೆ ಬಂದಿತ್ತು.

ಒಬ್ಬ ಪಂಡಿತಮಹಾಶಯರು. ನಿನಗೆ ವ್ಯಾಕರಣ ಶಾಸ್ತ್ರ ಗೊತ್ತೇನಯ್ಯ ಎಂದು ಅಂಬಿಗನನ್ನು ಕೇಳಿದರು. ಅವನು ಇಲ್ಲವೆಂದು ಹೇಳಿದ. ಇನ್ನೊಬ್ಬ ಪಂಡಿತರು, ನಿನಗೆ ಛಂದಸ್ಸು ಗೊತ್ತೋ ಎಂದಾಗ ಅದಕ್ಕೂ ಅವನು ಇಲ್ಲವೆಂದೇ ಹೇಳಿದ. ಮೂರನೆಯ ಪಂಡಿತರು ಹೋಗಲಿ ನಿನಗೆ ಅರ್ಥಶಾಸ್ತ್ರವಾದರೂ ಗೊತ್ತೇ ಎಂದರು. ಅವೆಲ್ಲ ನನಗೆ ಹ್ಯಾಗ ತಿಳೀಬೇಕು ಸ್ವಾಮಿ, ದೋಣಿ ನಡೆಸುವುದನ್ನು ಬಿಟ್ಟು ಇನ್ನೇನೂ ತಿಳಿಯದು ಎಂದು ಉತ್ತರಕೊಟ್ಟ. ಮನುಷ್ಯನಾಗಿ ಹುಟ್ಟಿದಮೇಲೆ ಏನು ಪ್ರಯೋಜನ ಎಂದು ಮೂರು ಪಂಡಿತರೂ ಒಟ್ಟಾಗಿ ಹೇಳಿದರು.

ಅಷ್ಟು ಹೊತ್ತಿಗೆ ಪ್ರಚಂಡವಾರುತ ಬಿರುಗಾಳಿ ಬಂದು ದೋಣಿ ಮುಳುಗಿಹೋಗುವಂತಾಯಿತು. ಅಂಬಿಗ, ನಿಮಗೆ ಈಜುವುದಕ್ಕೆ ಬರುತ್ತದೆಯೇ ಎಂದು ವಿಚಾರಿಸಿದ. ಅವರು ಇಲ್ಲವೆಂದರು. ಬಿರುಗಾಳಿ ಬಹಳ ಜೋರಾಗಿದೆ. ದೋಣಿ ಮುಳುಗಿಹೋಗುತ್ತೆ ಎಂದ. ಹೇಳಿದ ಸ್ವಲ್ಪ ಹೊತ್ತಿನಲ್ಲಿ ದೋಣಿ ಮುಳುಗಿತು ಪಂಡಿತರೊಂದಿಗೆ. ಅಂಬಿಗ ಈಜಿಕೊಂಡು ದಡ ಸೇರಿದ!

ಕಥೆ ಹಳೆಯದಾದರೂ ಅದರ ನೀತಿ ಇಂದಿಗೂ ನನಗೆ ನವನವೀನ ಎನ್ನಿಸಿದೆ.

43. ವರಮಹಾಲಕ್ಷ್ಮಿ ವ್ರತದ ಕಥೆ

ಚಿತ್ರಗುಪ್ತರು ಒಂದುದಿನ ಬ್ರಹ್ಮದೇವರಿಗೆ ಹೇಳಿದರಂತೆ. ಮದುವೆಯಾದ ಹೆಂಗಸರು ವರಮಹಾಲಕ್ಷ್ಮಿಯ ವ್ರತವನ್ನು ಆಚರಿಸಿದರೆ, ಅವರಿಗೆ ಮುಂದಿನ ಏಳು ಜನ್ಮಕ್ಕೂ ಒಬ್ಬನೇ ಪತಿಯಾಗಿರುತ್ತಾನಂತೆ. ಈ ಪದ್ಧತಿಯನ್ನು ನಿಲ್ಲಿಸಬೇಕು. ಬ್ರಹ್ಮದೇವರು ಏನು ಕಾರಣ ಎಂದು ಕೇಳಿದರು.


ಚಿತ್ರಗುಪ್ತರು ಹೇಳಿದರು. ಇದನ್ನು ಜಾರಿಗೆ ತರಲು ಬಹಳ ಕಷ್ಟಕ್ಕೆ ಬಂದಿದೆ. ಹೆಂಗಸು ಅವನೇ ಗಂಡನಾಗಬೇಕೆಂದು ಕೇಳುತ್ತಾಳೆ. ಆದರೆ ಆ ಗಂಡಸು ಬೇರೇ ಜನ್ಮಗಳಲ್ಲಿ ಹೊಸ ಹೆಂಡತಿ ಬೇಕೆಂದು ಬಯಸುತ್ತಾನೆ. ಇಬ್ಬರನ್ನೂ ಸಮಜಾಯಿಸಲು ಆಗುತ್ತಿಲ್ಲ. ಬ್ರಹ್ಮದೇವರು ಹೇಳಿದರು. ಇದನ್ನು ನಿಲ್ಲಿಸಲು ಸಾಧ್ಯವಿಲ್ಲ. ಇದು ಅನೂಚಾನವಾಗಿ ಬಂದಿರುವ ಪದ್ದತಿ.

ಆ ಸಮಯಕ್ಕೆ ಸರಿಯಾಗಿ ನಾರದಮಹರ್ಷಿಗಳು ಬಂದು ಹೀಗೆ ಸೂಚಿಸಿದರು. ಭೂಲೋಕದಲ್ಲಿ ಚಾಣಕ್ಕ ಎಂಬುವವನು ಇದ್ದಾನೆ. ಅವನನ್ನು ಕೇಳಿದರೆ ಯೋಗ್ಯವಾದ ಸಲಹೆ ಸಿಗಬಹುದು ಎಂದು. ಅವರ ಆದೇಶದಂತೆ, ಚಾಣಕ್ಯನನ್ನು ಭೇಟಿಮಾಡಿದರು. ಅವನು ಸಮಸ್ಯೆಯನ್ನು ಒಂದೇ ನಿಮಿಷದಲ್ಲಿ ಬಗೆಹರಿಸಿದನಂತೆ. 'ನೀವು ಹೇಳಿ ಆ ಹೆಂಗಸರಿಗೆ. ಮುಂದಿನ ಏಳು ಜನ್ಮಗಳಲ್ಲೂ ಅದೇ ಗಂಡನು ಬೇಕೆಂದರೆ, ಅವರಿಗೆ ಅದೇ ಅತ್ತೆ ಮುಂದಿನ ಜನ್ಮಗಳಲ್ಲೂ ಇರುತ್ತಾಳೆ ಎಂದು.

ಎಲ್ಲ ಹೆಂಗಸರೂ ಖಂಡಿತಾ ಸಾಧ್ಯವಿಲ್ಲ ಎಂದು ಒಟ್ಟಿಗೆ ಕಿರುಚಿದರು. ಸಮಸ್ಯೆ ಬಗೆಹರಿಯಿತು.

44. ವಾರಪತ್ರಿಕೆಯಲ್ಲಿನ ಸ್ಪರ್ಧೆ

ನಿವೃತ್ತ ಗೋವಿಂದರಾಯರಿಗೆ ಒಂದೇ ಒಂದು ಚಟ. ವಾರಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸ್ಪರ್ಧೆಗಳನ್ನು ಜೋಡಾವಣೆ ಮಾಡುವುದು. ಅದರಲ್ಲೇ ತಲ್ಲೀನರಾಗಿರುತ್ತಾರೆ ಯಾವಾಗಲೂ, ರಾಯರ ಸ್ನೇಹಿತರು ಲಾಯರ್ ಕೃಷ್ಣಸ್ವಾಮಿ ಬೆಳಗಿನ ವಾಯುವಿಹಾರ ಮುಗಿಸಿಕೊಂಡು ರಾಯರ ಮನೆಗೆ ಬಂದರು. ಏನಪ್ಪ, ಆಗಲೇ ವಾರಪತ್ರಿಕೆಗಳನ್ನು ಹರಡಿಕೊಂಡು ಕುಳಿತಿದ್ದೀಯ ಎಂದರು.



ಬಾರಯ್ಯ ಬಾ ಎಂದು ಕೃಷ್ಣಸ್ವಾಮಿಯವರನ್ನು ಅಭಿನಂದಿಸಿ, ಹೆಂಡತಿಗೆ ಕೂಗಿ ಹೇಳಿದರು. ಲೇ, ಲಾಯರ್ ಕೃಷ್ಣಸ್ವಾಮಿ ಬಂದಿದಾನೆ. ಕಾಫೀ ತಗಂಬಾ. ಲೋಕಾಭಿರಾಮವಾಗಿ ಮಾತನಾಡುತ್ತಾ ಒಂದು ವಾರಪತ್ರಿಕೆಯನ್ನು ಅವರ ಮುಂದಿಟ್ಟರು. ಏನು ಸ್ವಾರಸ್ಯ ಇದರಲ್ಲಿ ಅಂದಾಗ ರಾಯರು. ನೋಡು ಈ ಪ್ರಪಂಚದ ಭೂಪಟ ಎಲ್ಲಾ ಚೆಲ್ಲಾಪಿಲ್ಲಿಯಾಗಿದೆ. ಇದನ್ನು ಸರಿಯಾಗಿ ಜೋಡಿಸಬೇಕು. ಒಂದು ಗಂಟೆಯಿಂದ ಪ್ರಯತ್ನಮಾಡ್ತಾ ಇದೀನಿ, ಆಗ್ತಾ ಇಲ್ಲ ಎಂದರು. ಈ ಚಿತ್ರದಲ್ಲಿ ಇಂಡಿಯ ಎಲ್ಲೋ ಇದೆ, ರಷ್ಯ ಎಲ್ಲೋ ಇದೆ, ಚೈನಾ ಎಲ್ಲಿದೆ ಹುಡುಕಬೇಕು.

ಲಾಯರು, ನಿನಗೆ ಬೇರೆ ಏನೂ ಕೆಲಸ ಇಲ್ಲಾ ಅಂತ ಕಾಣುತ್ತೆ. ಈ ಚಿತ್ರ ಹೇಗಿದ್ದರೇನು ನಿಜವಾದ ಪ್ರಪಂಚವನ್ನು ಬದಲಾಯಿಸುವುದಕ್ಕೆ ಆಗುತ್ಯೆ ಎಂದು ತೆಗಳಿಬಿಟ್ಟರು. ಆ ವೇಳೆಗೆ ರಾಯರ ಮಗ ಶ್ಯಾಮ ಬಂದ. ಅವರು ಮಾಡುತ್ತಿರುವುದನ್ನು ನೋಡಿ, ನಾನು ಅದನ್ನು ಐದೇ ನಿಮಿಷದಲ್ಲಿ ಸರಿಮಾಡುತ್ತೇನೆ ಎಂದ. ರಾಯರಿಗೆ ಇನ್ನಿಲ್ಲದ ಕೋಪ. ಏನು ನಾನು ಒಂದು ಗಂಟೆಯಿಂದ ಒದ್ದಾಡ್ತಾ ಇದೀನಿ, ನೀನು ಐದು ನಿಮಿಷದಲ್ಲಿ ಮಾಡ್ತೀಯ.

ಶ್ಯಾಮ, ಇಲ್ಲಿ ಕೊಡಿ ಎಂದು ತೆಗೆದುಕೊಂಡು ಜೋಡಿಸುವುದಕ್ಕೆ ಶುರುಮಾಡಿದ. ಆ ಭೂಪಟದ ಹಿಂಭಾಗದಲ್ಲಿ ಮನುಷ್ಯನ ಆಕಾರದಲ್ಲಿ ಒಂದು ಚಿತ್ರವಿತ್ತು. ಅದರಲ್ಲಿ, ಕೈ ಎಲ್ಲಿರಬೇಕು. ಕಾಲು ಎಲ್ಲಿರಬೇಕು, ತಲೆ ಎಲ್ಲಿ ಅವೆಲ್ಲವೂ ಅವನಿಗೆ ಗೊತ್ತು. ಅದರಂತೆ ಆ ಚೂರುಗಳನ್ನು ಜೋಡಿಸಿದಾಗ ಅದರ ಹಿಂದಿದ್ದ ಪ್ರಪಂಚದ ಭೂಪಟ ಸರಿಹೋಗಿತ್ತು!

ಶ್ಯಾಮ ಹೇಳಿದ, ಒಬ್ಬ ಮನುಷ್ಯನನ್ನು ಸರಿಪಡಿಸಿದರೆ ಪ್ರಪಂಚ ತಾನೇತಾನಾಗಿ ಸರಿಹೋಗುತ್ತೆ ಎಂದ! ರಾಯರ ಅಹಂಗೆ ಬೆಳಕು ಚೆಲ್ಲಿದ್ದ. ಇನ್ನಾದರೂ ಮನುಷ್ಯತ್ವ ಬದಲಾವಣೆಗೆ ಪ್ರಯತ್ನಿಸೋಣ.

45. ಹುಟ್ಟುಹಬ್ಬದ ಬಹುಮಾನ

ಸುಭಾಷ್ ಗೌರವಾನ್ವಿತ ವ್ಯಕ್ತಿ. ಊರಿನಲ್ಲಿ ಎಲ್ಲರಿಗೂ ಬೇಕಾದವರಾಗಿದ್ದರು. ಮರ್ಸಿಡೀಸ್ ಕಾರ್ ಕಂಪೆನಿಯ ಅಧ್ಯಕ್ಷರು.

ಅವರ ಹೆಂಡತಿ ಪ್ರೇಮಿಯ ಹುಟ್ಟುಹಬ್ಬದ ದಿನ, ಅವಳಿಗೆ ಒಂದು ವಜ್ರದ ಕತ್ತಿನಸರವನ್ನು ಬಹುಮಾನವಾಗಿ ಕೊಟ್ಟರು. ಆಕೆ, 'ನೀವು ಒಂದು ಮರ್ಸಿಡೀಸ್ ಕಾರನ್ನು ಕೊಡಬಹುದೆಂದು ಯೋಚಿಸಿದ್ದೆ' ಎಂದಾಗ. ಅವರು ಬಹುಶಃ ಕೊಡಬಹುದಾಗಿತ್ತು, ಆದರೆ ಅದರಲ್ಲಿ ನಕಲೀ ಕಾರು ಸಿಗುವುದಿಲ್ಲ' ಎಂದರಂತೆ!

46. ಆಶ್ಚರ್ಯ ಬಹುಮಾನ ಅಂಬಾಲಿಗೆ

ಅಮರ್, ಅಂಬಾಲಿ ಅನ್ಯೋನ್ಯ ದಂಪತಿಗಳು. ಯಾವ ಸಮಾರಂಭಕ್ಕೆ ಹೋದಾಗಲೂ ಇಬ್ಬರೂ ಜೊತೆಯಲ್ಲಿ. ಅಂಬಾಲಿಗೆ ಸ್ನೇಹಿತರ ಬಳಗವೂ ಹೆಚ್ಚು. ಅವಳ ಹುಟ್ಟುಹಬ್ಬಕ್ಕೆ ಎಲ್ಲರನ್ನೂ ಕರೆಯಬೇಕೆಂದು ಪಟ್ಟಿ ಹಾಕಿದ್ದಳು.

ಅಮರ್ ಅವಳಿಗೆ ಏನಾದರೊಂದು ಆಶ್ಚರ್ಯಕರವಾದ ವಿಶೇಷ ಬಹುಮಾನ ಕೊಡಬೇಕೆಂದು ಯೋಚಿಸಿದ್ದ. ರಸ್ತೆಯಮೇಲೆ ಹೋಗುತ್ತಿದ್ದಾಗ, ಒಂದು ಮನೆಯ ಮುಂದುಗಡೆ ಗಿಣಿಯ ಪಂಜರ ಕಾಣಿಸಿತು. ಹಸಿರುಬಣ್ಣದ ಗಿಣಿ, ಕೆಂಪು ಕೊಕ್ಕು, ಬಹಳ ಮುದ್ದಾಗಿತ್ತು. ಅದನ್ನು ನೋಡುತ್ತಿದ್ದಾಗ ಆ ಗಿಣಿ ಮಾತನಾಡತೊಡಗಿತು. ಒಳಕ್ಕೆ ಬನ್ನಿ. ಕುಳಿತುಕೊಳ್ಳಿ' ಎಂದಾಗ, ಅಮರ್‌ನಿಗೆ ಪರಮಾಶ್ಚರ್ಯ. ಏನಾದರಾಗಲಿ ಆ ಗಿಣಿಯನ್ನು ಕೊಂಡುಕೊಂಡು ಅಂಬಾಲಿಗೆ ಆ ದಿನ ಕೊಡಬೇಕೆಂದು ಮನಸ್ಸುಮಾಡಿದ. ಗಿಣಿಯ ಮಾಲಿಕರನ್ನು ಭೇಟಿಮಾಡಿದಾಗ, ಆಕೆ ಅದನ್ನು ಮಾರುವುದಕ್ಕೆ ಇಷ್ಟವಿಲ್ಲ ಎಂದು ನಿರಾಕರಿಸಿದಳು. ಕಾರಣ, ಆ ಗಿಣಿ ಅವಳೊಂದಿಗೆ ಇಪ್ಪತ್ತು ವರ್ಷಗಳಿಂದಲೂ ಇದೆ ಎಂದು. ಅಮರ್ ಅದಕ್ಕೆ ಎಷ್ಟೇ ಬೆಲೆಯಾದರೂ ಕೊಡುವುದಕ್ಕೆ ಸಿದ್ಧನಾಗಿದ್ದ. ಅವನ ಒತ್ತಾಯಕ್ಕೆ ದುಬಾರಿ ಬೆಲೆಗೆ ಆಗಲಿ ಎಂದಳು.

ಆ ಗಿಣಿಯನ್ನು ಪಂಜರಸಮೇತ ತೆಗೆದುಕೊಂಡು, ಪಕ್ಕದ ಅಂಗಡಿಯಲ್ಲಿ ಒಂದು ರೇಷ್ಮೆಯ ಬಟ್ಟೆಯನ್ನು ಕೊಂಡುಕೊಂಡು ಪಂಜರಕ್ಕೆ ಮುಚ್ಚಿ ಮನೆಗೆ ತೆಗೆದುಕೊಂಡುಹೋದ.

ಹುಟ್ಟುಹಬ್ಬದ ದಿನ ಅಂಬಾಲಿಯ ಸ್ನೇಹಿತರೆಲ್ಲ ಬಂದಿದ್ದರು. ಅಮರ್ ಕರವಸ್ತ್ರವನ್ನು ತೆಗೆದಕೂಡಲೆ, ಗಿಣಿ ಎಲ್ಲರನ್ನೂ ನೋಡಿ, ಇವೆಲ್ಲಾ ನಾನು ನೋಡಿರುವ ಮುಖಗಳೇ ಎಂದಿತಂತೆ.



ಗಿಣಿಯು ಹಿಂದಿದ್ದ ಮನೆಯು ಮಾಲಿಕರು, ವೇಶ್ಯಾವಾಟಿಕೆಯನ್ನು ನಡೆಸುತ್ತಿದ್ದವರು!

47. ಘನತೆಯ ರೇಟು ತಿಳಿಯಲಿಲ್ಲ

ಈ ಘಟನೆ ನಡೆದು 44 ವರ್ಷಗಳು ಮುಗಿದಿವೆ. ಆದರೂ ಆ ದಿನದ ನಮ್ಮ ಮನಸ್ಸಿನ ಆತಂಕ, ಗಡಿಬಿಡಿ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ನಮ್ಮ ಮಾವನವರ ಹಿರಿಯರಾದ ಅಶ್ವತ್ಥಯ್ಯನವರ ಹೆಂಡತಿ, ಅಂದರೆ ನನ್ನ ದೊಡ್ಡ ಅತ್ತೆ ಪಾರ್ವತಮ್ಮನವರನ್ನು ಆಸ್ಪತ್ರೆಗೆ ಸೇರಿಸಬೇಕಾಗಿತ್ತು. ನಾವು ಏಳೆಂಟು ಜನ ಮೈಸೂರಿಗೆ ಹೋಗಿದ್ದೆವು.

ಆ ದಿನ ಅವರನ್ನು ಆಸ್ಪತ್ರೆಗೆ ಸೇರಿಸಿದ್ದಾಯಿತು. ಅಂದು ಭಾನುವಾರ. ಅವರು ದಾಖಲಾದನಂತರ ಶಸ್ತ್ರಚಿಕಿತ್ಸೆಗಾಗಿ ಅಪರೇಷನ್ ಥಿಯೇಟರ್ಗೆ ಕೊಂಡೊಯ್ಯುವಾಗಲೇ ಸ್ಟೆಚರ್ಮೇಲೆ ಅವರ ಪ್ರಾಣಹೋಯಿತು. ಅವರ ಹೆಸರು ದಾಖಲೆ ಪುಸ್ತಕದಲ್ಲಿ ಬಂದಿರುವುದರಿಂದ, ಮರಣಾನಂತರ ನಡೆಸಬೇಕಾದ ಶಸ್ತ್ರಚಿಕಿತ್ಸೆ ಮಾಡಿದಹೊರತು, ಶವವನ್ನು ಕೊಡುವುದಕ್ಕಾಗುವುದಿಲ್ಲ, ಅಂದು ಭಾನುವಾರವಾದ್ದರಿಂದ ಆ ದಿನ ಶಸ್ತ್ರಚಿಕಿತ್ಸೆಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು. ಆದರೆ ನಾವೆಲ್ಲರೂ ಮೈಸೂರಿನಲ್ಲಿ ಇರುವುದಕ್ಕೆ ಅನಾನುಕೂಲವಾಗಿತ್ತು. ನಮ್ಮ ಸಮಸ್ಯೆಯನ್ನು ಹೇಳಿ ಎಷ್ಟು ಗೋಗರೆದರೂ ಅವರು ಒಪ್ಪಲಿಲ್ಲ.

ಅವರ ಕಾರ್ಯದರ್ಶಿಯೊಬ್ಬರು ಡಾಕ್ಟರಿಗೆ ಮುವ್ವತ್ತು ರುಪಾಯಿ ಕೊಡಿ, ಈ ದಿನವೇ ಕಾಗದಕ್ಕೆ ಸಹಿಹಾಕಿ, ಶವವನ್ನು ನಿಮಗೆ ಕೊಡುತ್ತಾರೆ ಎಂದು ಸಲಹೆಮಾಡಿದರು. ಅದರಂತೆ ನಾವು ಮುವ್ವತ್ತು ರುಪಾಯಿಯನ್ನು ಅವರ ಮೇಜಿನಮೇಲೆ ಇಟ್ಟಾಗ, ಅವರು ಅದನ್ನು ತಳ್ಳಿ, ನನ್ನ ಘನತೆಗೆ ಅವಮಾನ ಆ ಹಣವನ್ನು ಮುಟ್ಟುವುದಕ್ಕೆ ಎಂದು ಕೂಗಾಡಿದರು. ಇಂತಹ ನಿಯತ್ತಿನ ಅಧಿಕಾರಿಗೆ ನಾವು ಹಣವನ್ನು ಕೊಡಬಾರದಾಗಿತ್ತು ಎಂದು ಪೇಚಾಡಿಕೊಂಡೆವು.

ಅವರ ಘನತೆಯನ್ನು ಉಳಿಸುವುದಕ್ಕಾಗಿ ಇನ್ನು ಇಪ್ಪತ್ತು ರುಪಾಯಿಕೊಟ್ಟಮೇಲೆ, ಅವರು ಐದೇ ನಿಮಿಷದಲ್ಲಿ ಕಾಗದಕ್ಕೆ ಸಹಿಹಾಕಿ ಶವವನ್ನು ನಮಗೆ ಕೊಡಲು ಅಪ್ಪಣೆಮಾಡಿದರು. ಈಗಲಾದರೂ ಗೊತ್ತಾಯಿತೆ ನಿಮಗೆ ಘನತೆಯ ರೇಟು!

ಆ ದಿನವೇ ದಹನಕಾರ್ಯ ನಡೆಸಿ, ಬೆಂಗಳೂರಿಗೆ ಹಿಂತಿರುಗಿದೆವು.

48. ಹೊಸ ಮಾದರಿ ಎಂಜಿನ್?

ಹಲವಾರು ವರ್ಷಗಳ ಹಿಂದೆ ಬೆಂಗಳೂರು ನರಸಿಂಹರಾಜಾ ರಸ್ತೆಯಲ್ಲಿ ಅಬ್ದುಲ್ ಹುಸೇನ್ ಎಂಬ ಆಟೋ ಮೆಕಾನಿಕ್ ಅಂಗಡಿಯನ್ನಿಟ್ಟುಕೊಂಡಿದ್ದ. ಗುಜರಿಯಲ್ಲಿ ಸಿಗುವ ಕೆಟ್ಟುಹೋದ ಕೆಲವು ಯಂತ್ರಗಳು ಅವನ


ಅಂಗಡಿಯಲ್ಲಿದ್ದುವು. ಯಾವಯಾವುದೋ ಬಿಡಿ ಭಾಗಗಳನ್ನು ಸೇರಿಸಿ ಒಂದು ಎಂಜಿನ್ ತಯಾರಿಸಿದ.

ಅದು ಸರಿಯಾಗಿ ಕೆಲಸಮಾಡುತ್ತದೆಯೇ ಎಂದು ಪರೀಕ್ಷಿಸಲು ರಸ್ತೆಯ ಅಂಚಿನಲ್ಲಿಟ್ಟು ಅದುಮಿದಾಗ ಅದು ಇದ್ದಕ್ಕಿದ್ದಂತೆ ದೂರಕ್ಕೆ ಓಡಿತು. ಅದನ್ನು ಹಿಡಿದುಕೊಳ್ಳುವಷ್ಟರಲ್ಲಿ ಯಾರದೋ ಮನೆಯ ಕಾಂಪೌಂಡಿಗೆ ಗುದ್ದಿ ಅಲ್ಲೇ ನಿಂತಿತು. ಆ ಮನೆಯ ಮಾಲಿಕರು ಕೋರ್ಟಿನಲ್ಲಿ ಕೇಸ್ ಹಾಕಿ ಅಬ್ದುಲ್ ಹುಸೇನಿಗೆ ಒಂದು ವರ್ಷ ಜೈಲುಶಿಕ್ಷೆಯಾಯಿತು. ಆ ಮಧ್ಯೆ ಅವನು ಬೇರೆ ವಕೀಲರನ್ನಿಟ್ಟು, ಎಂಜಿನ್ ಹಾಗೆ ಆಗುತ್ತೆಂದು ಅವನಿಗೂ ಗೊತ್ತಿರಲಿಲ್ಲವೆಂದು ವಾದಮಾಡಿಸಿದ. ಅದು ಸಾಧ್ಯವಾಗದೇ ಹೋದಾಗ ಮೇಲಿನ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ.

ಅಲ್ಲಿಯ ನ್ಯಾಯಾಧೀಶರು, ಕೆಳಗಿನ ನ್ಯಾಯಾಲಯ ಅವನಿಗೆ ಶಿಕ್ಷೆ ವಿಧಿಸಿರುವುದು ಸರಿಯಲ್ಲ. ಅವನು ಒಂದು ಹೊಸ ಮಾದರಿಯ ಯಂತ್ರವನ್ನು ಕಂಡುಹಿಡಿದಿದ್ದಾನೆ, ಅದಕ್ಕಾಗಿ ಅವನನ್ನು ಪ್ರಶಂಸೆ ಮಾಡುವುದರ ಬದಲು ಜೈಲುಶಿಕ್ಷೆ ವಿಧಿಸಿದ್ದಾರೆ ಎಂದು ತೀರ್ಮಾನಿಸಿ ಅವನನ್ನು ಬಿಡುಗಡೆಮಾಡಿದರಂತೆ. ಅಷ್ಟರಲ್ಲಿ ಅವನು ವರ್ಷದಲ್ಲಿ ಹತ್ತು ತಿಂಗಳು ಶಿಕ್ಷೆ ಅನುಭವಿಸಿದ್ದನಂತೆ!

49. ಊದುಗಡ್ಡಿಯ ಬಳಕೆಗೆ ಸರ್ಕಾರದ ಮನ್ನಣೆ!

ಬುಕ್ಕಾಂಬುಧಿ ವೆಂಕಟೇಶಯ್ಯನವರು ಮಾಡಿದ ತಂತ್ರ. ಊದುಗಡ್ಡಿಯ ಕೊಳವೆಗೆ ಇನ್ನೊಂದು ಕೊಳವೆಯನ್ನು ಸೇರಿಸಿ ಕ್ಯಾಲ್ಕುಲೇಟರ್ ತಯಾರಿಸಿದರು. ಅದರಮೇಲೆ ಬರೆದಿರುವ ಅಂಕೆಗಳನ್ನು ನೋಡಿ ಕೊಳವೆಯನ್ನು ತಿರುಗಿಸಿದಾಗ ಅದರ ಗುಣಾಕಾರ (2X4, 3X5) ಮುಂದಿನ ಸಾಲಿನಲ್ಲಿ 8. 15 ಕಾಣುತ್ತೆ. ಅದನ್ನು ಉಪಯೋಗಿಸಿ ಚಿಕ್ಕಮಕ್ಕಳಿಗೆ ಪಾಠ ಮಾಡುವುದಕ್ಕೆ ಬಹಳಮಟ್ಟಿಗೆ ಉಪಯೋಗವಾಯಿತು. ಆಗಿನ್ನೂ ಕ್ಯಾಲ್ಕುಲೇಟರ್, ಕಂಪ್ಯೂಟರ್ ತಲೆಹಾಕಿರಲಿಲ್ಲ. 1984ರಲ್ಲಿ ಅವರು ಮಾಡಿದ ಪ್ರಯೋಗ ದೂರದರ್ಶನದಲ್ಲಿ ಪ್ರಸಾರವಾಯಿತು.



ಅದನ್ನು ಮನ್ನಣೆಮಾಡಿ ಅಂದಿನ ಕರ್ನಾಟಕ ಸರ್ಕಾರ ಅವರಿಗೆ 250 ರುಪಾಯಿ ಮಾಸಾಶನ ಕೊಡುವಂತೆ ಅಪ್ಪಣೆಮಾಡಿದರು.

ಅವರು ಕಲಿತ ವಿದ್ಯೆಯನ್ನು ಇನ್ನೊಬ್ಬರಿಗೂ ಕಲಿಸಬೇಕೆಂಬ ಮನೋಭಾವವನ್ನು ಯಾರಾದರೂ ಮೆಚ್ಚಬೇಕಾದದ್ದೆ. ಅಷ್ಟೇಕೆ, ನಾನಿನ್ನೂ ಪ್ರೈಮರಿ ನಾಲ್ಕನೇ ತರಗತಿಯಲ್ಲಿದ್ದಾಗಲೆ ಮಾಧ್ಯಮಿಕಶಾಲೆಯ ಲೆಖ್ಯವನ್ನೆಲ್ಲ ಅರೆದುಹುಯ್ದಿದ್ದರು! ಇಂದಿಗೂ ನಾನು ಅವರನ್ನು ಒಮ್ಮೆಯಾದರೂ ನೆನಪಿಸಿಕೊಳ್ಳುತ್ತೇನೆ.

50. ಹಾಲಿನ ಥಾಲಿಯಲ್ಲಿ ಬೆಕ್ಕು!

ಬುಕ್ಕಾಂಬುಧಿ ನಮ್ಮ ಮಾವನವರ ಮನೆಯಲ್ಲಿ ಆದದ್ದು. ರಾತ್ರಿ ಹನ್ನೆರಡು ಗಂಟೆ ದಾಟಿದೆ. ಎಲ್ಲರೂ ನಿದ್ರೆಯಲ್ಲಿದ್ದಾರೆ. ಅಂತಹ ನಡುರಾತ್ರೆಯಲ್ಲಿ ಅಡುಗೇಮನೆಯಿಂದ ಶಬ್ದ ಬರುತ್ತಿದೆ. ಪಾತ್ರೆಗಳ ಶಬ್ದ ದಢದಢ ಕಲ್ಲಿಗೆ ತಗುಲಿ ಆಗುತ್ತಿರುವ ಶಬ್ದ. ಹೆಂಗಸರು, ಮಕ್ಕಳು ಎಲ್ಲರಿಗೂ ಎಚ್ಚರವಾಗಿ ಗಾಬರಿಯಿಂದ ಗಡಗಡ ನಡುಗುತ್ತ ಕೂತರು. ಯಾರಿಗೂ ಗಟ್ಟಿಯಾಗಿ ಮಾತನಾಡುವುದಕ್ಕೆ ತ್ರಾಣವಿಲ್ಲ.



ನಮ್ಮ ದೊಡ್ಡಮಾವನವರು (ಅಶ್ವತ್ಥಯ್ಯ) ಮತ್ತು ಮಾವ ರಂಗಯ್ಯ ದೊಣ್ಣೆ ಹಿಡಿದು ನಿಂತಿದ್ದಾರೆ ಅಡುಗೇಮನೆ ಬಾಗಿಲಿನಲ್ಲಿ. ಪಿಸಪಿಸ ಮಾತನಾಡುತ್ತ. ಒಳಗಿರುವವರು ಕಳ್ಳರೇ ಆಗಿದ್ದರೆ, ಹೀಗೇಕೆ ಸದ್ದುಮಾಡುತ್ತಾರೆ. ಹೇಗಾದರಾಗಲಿ ನಾವು ನಮ್ಮ ಹುಷಾರಿಯಲ್ಲಿರಬೇಕು. ರಂಗಯ್ಯ ತಕ್ಷಣ ನುಗ್ಗಬೇಡ. ಮೆತ್ತಗೆ ಬಾಗಿಲು ತೆಗಿ ಎಂದರು. ಬಾಗಿಲು ತೆಗೆದು ನೋಡುತ್ತಾರೆ. ಬೆಕ್ಕು ಥಾಲಿಯಲ್ಲಿರುವ ಹಾಲನ್ನು ಕುಡಿಯುವುದಕ್ಕೆ ಹೋಗಿ ಅದರ ತಲೆ ಥಾಲಿಯಲ್ಲಿ ಸೇರಿಬಿಟ್ಟಿದೆ. ತಲೆಯನ್ನು ಕೊಡವಿದಾಗೆಲ್ಲ, ಥಾಲಿ ಒರಳುಕಲ್ಲಿಗೆ ಬಡಿದು ಲಟಲಟ ಆಗುತ್ತಿರುವ ಶಬ್ದ! ಮಾವಂದಿರಿಬ್ಬರೂ ಪಕಪಕ ನಗುವುದಕ್ಕೆ ಶುರುಮಾಡಿದರು. ಎಲ್ಲರಿಗೂ ಹೋದ ಜೀವ ಮರಳಿಬಂದಂತಾಯತು.

ನಂತರ ಒಬ್ಬರು ಬೆಕ್ಕಿಗೆ ಒಂದು ಬಟ್ಟೆಯನ್ನು ಹೊದಿಸಿ ಬಲವಾಗಿ ಹಿಡಿದುಕೊಂಡರು. ಇನ್ನೊಬ್ಬರು ಥಾಲಿಯನ್ನು ಕೈಯ್ಯಲ್ಲಿ ಹಿಡಿದು, ಇಬ್ಬರೂ ಒಂದೊಂದೇ ಹೆಜ್ಜೆಹಾಕುತ್ತ ಮೆರವಣಿಗೆಯಲ್ಲಿ ಹೋಗುವಂತೆ ಮನೆಯ ಹೊರಗಡೆ

ಬಂದು, ನಿಧಾನವಾಗಿ ಥಾಲಿಯನ್ನು ಎಳೆದರು. ತಲೆ ಮೇಲಕ್ಕೆ ಬಂದದ್ದೇ ತಡ, ಬೆಕ್ಕು ಭಂಗನೆ ನೆಗೆದು ಒಂದೇ ಉಸರಿನಲ್ಲಿ ಓಡಿಹೋಯಿತು!

51. ಚೈನಾ ದೇಶದವನ ಚಮತ್ಕಾರ!

ಊರುಗಳನ್ನು ನೋಡುವ ಸಲುವಾಗಿ ಚೈನಾದೇಶದವನು ಬೆಂಗಳೂರಿಗೆ ಬಂದಿದ್ದ. ಹತ್ತು ಹನ್ನೆರಡು ದಿವಸಗಳ ಪ್ರಯಾಣಕ್ಕಾಗಿ ಒಂದು ಬಸ್ಸನ್ನು ಗೊತ್ತುಮಾಡಿದ್ದೆವು. ಬೇಲೂರು, ಹಳೆಯಬೀಡು, ಶೃಂಗೇರಿ, ಮೈಸೂರು, ಶ್ರೀರಂಗಪಟ್ಟಣ ಎಲ್ಲವನ್ನೂ ಸುತ್ತಿದೆವು. ಬೇಲೂರಿನಲ್ಲಿ ಬಸ್ ಎರಡು ಗಂಟೆಗಳ ಕಾಲ ನಿಂತಿತ್ತು ದೇವಾಲಯವನ್ನು ನೋಡುವುದಕ್ಕೆ. ಅಲ್ಲಿ ಒಬ್ಬ ವ್ಯಾಪಾರಿ ಕಬ್ಬಿನ ತುಂಡುಗಳನ್ನು ಮಾರುತ್ತಿದ್ದ. ಎಲ್ಲರೂ ಕೊಂಡುಕೊಂಡು ಅಲ್ಲಲ್ಲೇ ಸಿಪ್ಪೆಯನ್ನು ಎಸೆದರು.



ಚೈನಾದವನೂ ಒಂದೂವರೆ ಮೊಳ ಉದ್ದದ ಕಬ್ಬಿನತುಂಡನ್ನು ಕೊಂಡುಕೊಂಡ ಎಂಟಾಣೆಯನ್ನು ಕೊಟ್ಟು, ಸಿಪ್ಪೆಯನ್ನು ನಿಧಾನವಾಗಿ ಉದ್ದಕ್ಕೂ ಸೀಳಿದ. ಅದನ್ನು ಚಾಪೆಯಂತೆ ಹೆಣೆದು ಒಂದು ಹೂವಿನಬುಟ್ಟಿಯಂತೆ ಮಾಡಿದ. ನಂತರ ಕಬ್ಬನ್ನು ಹೋಳುಗಳಂತೆ ಕತ್ತರಿಸಿ, ರಸವನ್ನೆಲ್ಲ ಹೀರಿ, ಅದನ್ನು ಒಂದೊಂದಾಗಿ ದಾರದಿಂದ ಕಟ್ಟಿ ಹಾರವನ್ನು ಮಾಡಿದ. ಕೆಂಪು ಹಸಿರು ಬಣ್ಣದ ಪುಡಿಯನ್ನು ಅದರ ಮೇಲೆ ಚುಮುಕಿಸಿದ ಮೇಲೆ ಅದು ಹೂವಿನ ಆಕಾರದಲ್ಲಿ ಕಾಣುತ್ತಿತ್ತು. ಆ ಹಾರವನ್ನು ಬುಟ್ಟಿಯಲ್ಲಿಟ್ಟು ಒಂದು ರುಪಾಯಿಗೆ ಮಾರಿದ!.

52. ಬುಕ್ಕಾಂಬುಧಿಯಲ್ಲಿ ಜಮಾಬಂದಿ

ಜಮಾಬಂದಿ ಎಂದರೆ, ಜಿಲ್ಲಾಧಿಕಾರಿಗಳು, ಮಾಮಲೆದಾರರು ಮತ್ತು ಶಾನುಭೋಗರೂ ಒಟ್ಟಿಗೆ ಸೇರಿ ಹಳ್ಳಿಯ ರೈತರು ಅವರವರ ಜಮೀನಿಗೆ ಎಷ್ಟು ಕಂದಾಯ ಕೊಡಬೇಕೆನ್ನುವುದನ್ನು ನಿರ್ಧರಿಸುವುದು. ಬುಕ್ಕಾಂಬುಧಿಗೆ ಸಮೀಪವಾಗಿರುವ ಹಳ್ಳಿಗಳ ಶಾನುಭೋಗರುಗಳೂ ಬಂದಿರುತ್ತಾರೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಯಾರ ಮನೆಗಳಲ್ಲೂ ಕುರ್ಚಿ, ಮೇಜು, ಮಂಚಗಳು ಇರುವುದಿಲ್ಲ.

ಮಲಗಲು ದೊಡ್ಡ ಜಮಖಾನೆ ಹಾಸಿರುತ್ತಾರೆ ಮಲಗಲಿಕ್ಕೆ. ಮನೆಯ ಮಕ್ಕಳು, ಹುಡುಗರೂ ಹೊರಗಡೆ ಜಗುಲಿಯ ಮೇಲೆ ಮಲಗುತ್ತಾರೆ. ಜೊತೆಗೆ ಇನ್ನೂ ಕೆಲವು ಅಧಿಕಾರಿಗಳೂ ಹೊರಗಡೆಯೇ ಮಲಗಿದ್ದರು. ನಮ್ಮ ಅಣ್ಣನವರಿಗೆ ಮಲಗಲು ಜಾಗ ಸಿಗಲಿಲ್ಲ.

ಅವರು ಮನೆಯ ಹಿಂದುಗಡೆ ಹೋಗಿ ಹುಲಿ ಕೂಗಿದಹಾಗೆ ಗರ್ಜನೆಮಾಡಿದರು. ಹೊರಗಡೆ ಮಲಗಿದ್ದವರೆಲ್ಲ ಎದ್ದು ದಿಕ್ಕಾಪಾಲು ಓಡಿದರು. ಜಾಗ ಖಾಲಿಯಾದದ್ದೇ ತಡ ಅವರು ಕಂಬಳಿಹೊದ್ದು ಅಲ್ಲೇ ಮಲಗಿದರು. ಎಲ್ಲರೂ ಕೂಗುತ್ತಲೇ ಇದ್ದಾರೆ. ಶಾಮಣ್ಣ ಎದ್ದುಬಾರೊ ಬೇಗ ಹುಲಿ ಬಂದಿದೆಯಂತೆ ಎಂದು. ಏ ಬಿಡೋ ಇಲ್ಲಿಗೆ ಏಕೆ ಹುಲಿ ಬರುತ್ತೆ ಅಂತ ಅಲ್ಲಿಯೇ ಹಾಯಾಗಿ ಮಲಗಿದ್ದರಂತೆ!

53. ಟೆಲಿಫೋನ್ ಕಥೆಗಳು

ಟೆಲಿಫೋನ್ ಇದ್ದವರ ಮನೆಯವರು ಭಾರೀ ಶ್ರೀಮಂತರು ಎನ್ನುವ ಕಾಲ. ಅವರ ಮನೆಯಲ್ಲಿ ಟೆಲಿಫೋನ್ ಇದೆಯಂತೆ! ನನಗೆ (1945) ಟೆಲಿಫೋನ್ ರಿಸೀವರ್ ತೆಗೆದುಕೊಂಡು ಮಾತನಾಡುವುದಕ್ಕೆ ಗೊತ್ತಿರಲಿಲ್ಲ. ಒಂದು ಚಲನಚಿತ್ರದ ಆಫೀಸಿನಲ್ಲಿ ಕೆಲಸ ದೊರಕಿತ್ತು. ಸಂಬಳ 40 ರುಪಾಯಿ. ಆಫೀಸಿನ ಮುಖ್ಯಸ್ಥರು ಎಲ್ಲಿಗೋ ಹೋಗಿ ಮನೆಗೆ ಒಂದು ವರ್ತಮಾನ ಕೊಡಲು ಫೋನ್ ಮಾಡಿದರು. ನನಗೆ ಹೇಗೆ ಮಾತನಾಡಬೇಕೆಂದು ತಿಳಿಯಲಿಲ್ಲ. ಅವರು ರೇಗಿಕೊಂಡು ಬಂದಕೂಡಲೆ ನನಗೆ ತಿಂಗಳ ಪೂರ ಸಂಬಳಕೊಟ್ಟು, ನಾಳೆಯಿಂದ ಬರಬೇಡ ಎಂದು ಅಟ್ಟಿದರು! ನಾನು 20 ದಿವಸಗಳು ಮಾತ್ರ ಕೆಲಸಮಾಡಿದ್ದೆ. ಆಗಿನ್ನೂ ಮೊಬೈಲ್ ಫೋನ್ ತಲೆಹಾಕಿರಲಿಲ್ಲ.

ನಾನು ಕಾಫೀಬೋರ್ಡಿನಲ್ಲಿ ಕೆಲಸಮಾಡುತ್ತಿದ್ದಾಗ ಒಂದೇ ಹೆಸರಿನ ಇಬ್ಬರು ಸಹೋದ್ಯೋಗಿಗಳಿದ್ದರು. ರಮಣಮೂರ್ತಿ. ಅವರಲ್ಲಿ ಒಬ್ಬರಿಗೆ ಫೋನ್‌ಕರೆ ಬಂತು. ಆ ಕಡೆಯಂದ ಒಬ್ಬ ಹುಡುಗಿ ಮಾತನಾಡುತ್ತಿದ್ದಾಳೆ, ಏನ್‌ರಿ ಎಷ್ಟು ಹೊತ್ತು ನಾನು ಕಾಯಬೇಕು, ಬೇಜಾರಾಯಿತು ಎಂದಳು. ರಮಣಮೂರ್ತಿ ಪೆಚ್ಚಾಗಿಬಿಟ್ಟರು. ನೀವು ಯಾರು ಮಾತನಾಡುತ್ತಿರುವವರು ಎಂದು ಕೇಳಿದರು. ಆಕೆ, ಸುಮ್ಮನೆ ಬೊಗಳೇ ಬಿಡಬೇಡಿ ನಾನೇ ಸುಂದರಿ ಮಾತನಾಡುತ್ತಿರುವುದು. ಆ ಫೋನ್‌ಕರೆ ಇನ್ನೊಬ್ಬ ರಮಣಮೂರ್ತಿಗೆ!

ಹಾಗೆಯೇ ವಿಧಾನಸೌಧದಲ್ಲಿ ಇಬ್ಬರು ಖಂಖ ಆಫೀಸರು, ರಾಜಾ ಐಯ್ಯರ್. ಅವರಲ್ಲಿ ಒಬ್ಬರಿಗೆ ಮನೆಯಿಂದ ಫೋನ್‌ಕರೆ ಬಂತಂತೆ. ಹೆಂಡತಿ

ಮಾತನಾಡುತ್ತಿದ್ದಾಳೆ. ಒಂದು ಗಂಟೆಯಿಂದ ಕಾಯ್ತಾ ಇದೀನಿ. ನಿಮ್ಮ ಡ್ರೈವರ್ ಇನ್ನೂ ಬಂದಿಲ್ಲ. ನಾನು ಯಾವಾಗ ಕ್ಲಬ್ಬಿಗೆ ಹೋಗಬೇಕು ಎಂದು. ಐಯ್ಯರ್ ಕಣ್‌ಕಣ್‌ಬಿಡುತ್ತಾ ಕೂತರು. ಅದು ಇನ್ನೊಬ್ಬ ರಾಜಾ ಐಯ್ಯರ್ ಅವರ ಹೆಂಡತಿ. ಆಫೀಸ್ ಕಾರಿಗಾಗಿ ಕಾಯುತ್ತಿದ್ದಾರೆ! ಫೋನ್ ಮಾಡುವಾಗ ಆ ಕಡೆ ಯಾರಿದ್ದಾರೆ ಎನ್ನುವುದನ್ನು ಖಚಿತಮಾಡಿಕೊಂಡು ಮಾತನಾಡಬೇಕು.

ನಮ್ಮ ಕಾಫೀಬೋರ್ಡಿನಲ್ಲಿ ವೆಂಕಟಸುಬ್ಬಯ್ಯ ಎಂಬುವವನು ಅಟೆಂಡರ್ ಆಗಿ ಕೆಲಸಮಾಡುತ್ತಿದ್ದ. ಅವನ ಹೆಂಡತಿ ಸುಬ್ಬಮ್ಮ. ಆಕೆ ಪ್ರೈಮರಿಶಾಲೆಯ ಉಪಾಧ್ಯಾಯಿನಿಯಾಗಿದ್ದಳು. ಅವಳು ಬೇರೇ ಊರಿಗೆ ವರ್ಗಕ್ಕಾಗಿ ಪ್ರಯತ್ನಿಸುತ್ತಿದ್ದಳು. ಅಂತೂ ಇಂತೂ ವರ್ಗ ಆಯಿತು. ಅದನ್ನು ಖಚಿತಮಾಡಿಕೊಳ್ಳಲು ವೆಂಕಟಸುಬ್ಬಯ್ಯ ವಿದ್ಯಾಇಲಾಖೆ ಆಫೀಸಿಗೆ ಫೋನ್‌ಮಾಡಿದ. ಅದು ಸೀದಾ ಅಫೀಸರ್ಗೇ ಹೋಯಿತು. ಅವರು ರೇಗಿ ರಿಸೀವರ್ ಕೆಳಗಿಟ್ಟರು. ಇವನು ಅವರಿಗೆ ತಲುಪಲಿಲ್ಲವೆಂದು ಅವರಿಗೇ ಪುನಃ ಫೋನ್ ಮಾಡಿದ. ನನ್ನ ಹೆಂಡತಿ ಸುಬ್ಬಮ್ಮ ಅಂತ ಶುರುಮಾಡಿದ. ಕರ್ನಾಟಕ ರಾಜ್ಯದ ಪ್ರೈಮರಿ ಶಾಲೆಗಳಲ್ಲಿ ಸಾವಿರಾರು ಸುಬ್ಬಮ್ಮಗಳು ಇರ್ತಾರೆ. ಅವರನ್ನೆಲ್ಲ ವಿದ್ಯಾ ಇಲಾಖೆಯ ಮುಖ್ಯಸ್ಥರು ಜ್ಞಾಪಕದಲ್ಲಿ ಇಟ್ಟುಕೊಳ್ಳಲು ಸಾಧ್ಯವೇ.? ಈ ಪೆದ್ದ ಫೋನ್ ಅವರಿಗೆ ಹೋಗಿಲ್ಲ ಅಂತ ಪುನಃ ಅವರಿಗೆ ಫೋನ್‌ಮಾಡಿದ. ಅವರು ಆಫೀಸಿಗೆ ಬಂದು ವಿಚಾರಿಸಿ ಎಂದು ಹೇಳಿದರಂತೆ.

ವೆಂಕಟಸುಬ್ಬಯ್ಯ, ಈ ಸಲ ಏನಾದರೂ ವರ್ಗ ಮಾಡದೇಹೋದರೆ ನಾನೇನಿಲ್ಲ ಎಂದು ಬಂದೂಕು ಹಿಡಿಯುವಹಾಗೆ ಕೈತೋರಿಸಿ ಢಂ ಅನ್ನಿಸಿಬಿಡ್ತೀನಿ ಅಂದ. ಬಂದೂಕನ್ನು ಎತ್ತಿ ಹಿಡಿಯುವುದಕ್ಕೂ ತ್ರಾಣವಿರವಿಲ್ಲ ಅವನಿಗೆ!

54. ಸಮಯ ಸ್ಫೂರ್ತಿ.

ಒಂದು ಗೊತ್ತಾದ ಸಂದರ್ಭಕ್ಕೆ ಹೊಂದಿಕೊಳ್ಳುವ ಹಾಗೆ ಸ್ಫೂರ್ತಿ ಬರುವುದು ಎಲ್ಲರಿಗೂ ಸುಲಭವಲ್ಲ. ಒಬ್ಬ ಪ್ರೈಮರಿಶಾಲೆಯ ಉಪಾಧ್ಯಾಯರನ್ನು ದೂರದ ಒಂದು ಹಳ್ಳಿಗೆ ವರ್ಗಮಾಡಿದ್ದರು. ಆತ ಆ ಹಳ್ಳಿಗೆ ಬಂದು ಶಾಲೆಗೆ ಹಾಜರಾದರು. ಸ್ವಲ್ಪ ದಿವಸಗಳವರೆಗೆ ಏನೂ ಸಮಸ್ಯೆ ಇರಲಿಲ್ಲ. ಬೇಸಿಗೆಕಾಲ ಪ್ರಾರಂಭವಾದಕೂಡಲೆ ಅಲ್ಲಿಯ ಸೆಖೆಯ ತಾಪದ ಅರಿವಾಯಿತು.

ಒಂದು ದಿನ ತಡೆಯಲಾರದಷ್ಟು ಸೆಖೆ. ಶಾಲೆಗೆ ಬಂದವರೆ ವಿದ್ಯಾರ್ಥಿಗಳಿಗೆ ಬರೆಯಲು ಒಂದು ಪಾಠವನ್ನು ಕೊಟ್ಟು, ನಂತರ ಪೇಟ, ಕೋಟು, ಷರ್ಟನ್ನು ತೆಗೆದು ರಟ್ಟಿನಿಂದ ಗಾಳಿಬೀಸಿಕೊಳ್ಳುತ್ತ ಕುಳಿತರು.

ಶಾಲೆಯ ಜವಾನ ಓಡಿಬಂದು, ಶಾಲೆಯ ಮುಖ್ಯಸ್ಥರು ಅನಿರೀಕ್ಷಿತ ತನಿಖೆಗಾಗಿ ಬರುತ್ತಿದ್ದಾರೆ ಎಂದು ಹೇಳಿದ. ಅವರು ಇನ್ನೇನು ಒಳಕ್ಕೆ ಕಾಲಿಡಬೇಕು ಅನ್ನುವ ಹೊತ್ತಿಗೆ, ಉಪಾಧ್ಯಾಯರು ಎದೆಯನ್ನು ಮುಟ್ಟಿಕೊಂಡು ನೋಡಿ ಮಕ್ಕಳೇ, ಇದನ್ನು ಹೃದಯ ಎಂದು ಕರೆಯುತ್ತಾರೆ. ಇದಕ್ಕೆ ಎರಡು ಕೊಳವೆಗಳು ಸೇರಲ್ಪಟ್ಟಿವೆ ಒಂದು ಅನ್ನನಾಳ, ಇನ್ನೊಂದು ಶ್ವಾಸನಾಳ ಎಂದರು.

ಶಾಲೆಯ ಮುಖ್ಯಸ್ಥರು ದಂಗಾಗಿಬಿಟ್ಟರು. ಎಷ್ಟು ಮುತುವರ್ಜಿಯಿಂದ ಪಾಠಹೇಳಿ ಹುಡುಗರಿಗೆ ತರಪೇತಿ ಕೊಡುತ್ತಿದ್ದಾರೆ. ಇಂಥವರು ಹತ್ತು ಜನ ಇದ್ದರೂ ಸಾಕು ನಮ್ಮ ಇಲಾಖೆಯ ಉನ್ನತಿಗೆ. ಈ ತರಹ ಉಪಾಧ್ಯಾಯರಿಗೆ ಉತ್ತೇಜನ ಕೊಡಬೇಕು ಎಂದು ಸಂಬಳ ಹೆಚ್ಚುಮಾಡಲು ಅಪ್ಪಣೆಮಾಡಿದರಂತೆ!

55. ಮಾತು ಕೇಳದವರ ಮಾತು ಕಥೆ

ನಾನು ಕಳೆದವರ್ಷ ಬೆಂಗಳೂರಿಗೆ ಹೋದಾಗ ಕೆಲವು ನಿವೃತ್ತ ಸಹೋದ್ಯೋಗಿಗಳು ನನ್ನನ್ನು ಔತಣ ಕೂಟಕ್ಕೆ ಕರೆದರು. ಬೆಂಗಳೂರಿನ ಜನಗಳ ನೂಕುನುಗ್ಗಲನ್ನು ರಸ್ತೆಯಮೇಲೆ ನೋಡಿದಾಗ. ಹೊರಗಡೆ ಒಬ್ಬನೇ ಹೋಗುವುದಕ್ಕೆ ಸ್ವಲ್ಪ ತಳಮಳವಾಯಿತು. ನಾನು ಅವರಿಗೆ ಸಲಹೆಮಾಡಿದೆ. ಎಲ್ಲರೂ ಒಂದುಕಡೆ ಸೇರಿದರೆ ಅಲ್ಲಿ ನಾನು ಪ್ರತಿಯೊಬ್ಬರನ್ನೂ ನೋಡಬಹುದೆಂದು, ಅವರು ಮಲ್ಲೇಶ್ವರಂನಲ್ಲಿ ಒಂದು ಹೊಟೇಲಿನಲ್ಲಿ ಏರ್ಪಡಿಸಿದರು. ಅವರ ಜೊತೆ ಸೇರುವುದಕ್ಕೆ ಜಯನಗರದಿಂದ ಹೋಗಬೇಕಾದವನು ನಾನೊಬ್ಬನೆ. ಆ ಗುಂಪಿನಲ್ಲಿದ್ದ ಒಬ್ಬರು ಅವರ ಸ್ಕೂಟರ್ಮೇಲೆ ನನ್ನನ್ನು ಕರೆದುಕೊಂಡುಹೋದರು. ಅಲ್ಲಿ ಒಟ್ಟು ಐದು ಜನ ಇದ್ದರು. ದೋಸೆ ಮತ್ತೆ ಕಾಫಿಗೆ ಆರ್ಡರ್ ಮಾಡಿದರು.

ಆ ಗುಂಪಿನಲ್ಲಿ ಇಬ್ಬರು, ರಾಮರಾವ್ ಮತ್ತು ಸುಬ್ಬಯ್ಯ ಕಿವುಡರು. ಅವರು ಒಬ್ಬರಿಗೊಬ್ಬರು ಏನು ಮಾತನಾಡುತ್ತಿದ್ದಾರೆ ಅನ್ನುವುದು ನಮಗೆ ಗೊತ್ತಾಗಲಿಲ್ಲ. ನನಗೆ ಇನ್ನೂ ಜ್ಞಾಪಕವಿದೆ. ಅವರು ಮಾತನಾಡಿದ್ದನ್ನು ಅಕ್ಷರಶಃ ತಿಳಿಸಿದ್ದೇನೆ.

ರಾಮರಾವ್: ನಿನಗೆ ಗೊತ್ತಾ, ರಾಮಾಜೋಯಿಸನನ್ನು ಅಮರಿಕಾದ ಅಧ್ಯಕ್ಷರನ್ನಾಗಿ ಚುನಾಯಿಸಿದ್ದಾರೆ.

ಸುಬ್ಬಯ್ಯ: ಅವಳು ಹೋದವಾರವೇ ಹೊರಟುಹೋದಳು.

ರಾ: ರಂಗಪ್ಪ ಏಕೆ ಇಲ್ಲಿಗೆ ಬರಬೇಕು.

ಸು: ನೀನು ರಷ್ಯಾಕ್ಕೆ ಹೋಗ್ತಿಯಾ ಅಂತ ಕೇಳಿದೆನಲ್ಲ.

ರಾ: ಇಲ್ಲ, ಅವಳು ಪ್ರಯಾಣ ನಿಲ್ಲಿಸಿದಳು.

ಸು: ನಾನು ಕೇಳ್ತಾ ಇರೂದು ರಾಮಣ್ಣ ಏಕೆ ಲಂಡನ್ನಿಗೆ ಹೋಗ್ತಾ ಇದಾನೆ ಅಂತ.

ರಾ: ಇಲ್ಲ, ನಾನು ಸಿಂಗಪೂರ್ಗೆ ಹೋಗ್ತಾ ಇದೀನಿ.

ಸು: ನೀನು ಏನೇ ಹೇಳು. ನಾನು ಈ ಹೊಟೇಲಿಗೇ ಬರ್ತೀನಿ.

ನಮಗೆ ಮುಗಸಟ್ಟೆ ಮನೋರಂಜನೆ ಸಿಕ್ಕರೂ. ನಾವು ನಗುವಂತಿರಲಿಲ್ಲ. ನಕ್ಕರೆ ಅವರು ನಮ್ಮನ್ನು ತಪ್ಪಾಗಿ ತಿಳಿಯಬಹುದು. ಅದೃಷ್ಟವಶಾತ್ ದೋಸೆ ಬಂತು. ಸ್ವಲ್ಪ ಸಮಯವಾದರೂ ನಮಗೆ ಬಿಡುವು ಸಿಕ್ಕಿತು. ಇನ್ನು ಇಲ್ಲಿಯೇ ಇದ್ದರೆ ನಮಗೆ ಹುಚ್ಚು ಹಿಡಿಯುವುದು ಖಂಡಿತ. ನನ್ನ ಸ್ನೇಹಿತನೊಬ್ಬ ಅನಿರೀಕ್ಷಿತವಾಗಿ ಬಂದ. ಅವನೂ ಜಯನಗರದವನೆ. ನನ್ನ ಸಹೋದ್ಯೋಗಿಗಳಿಗೆ ವಂದನೆಮಾಡಿ ಅವನಜೊತೆ ಹೊರಟೆ.

56. ಹೊಸ ವರ್ಷಕ್ಕೆ ಬಹುಮಾನ

ಸುದರ್ಶನ್ ಮತ್ತು ಶೀತಲ್ ಸಂತೋಷದಿಂದ ಮದುವೆಯಾದರು ಅವರು ಒಬ್ಬರನ್ನೊಬ್ಬರು ಮನಸಾರೆ ಪ್ರೀತಿಸುತ್ತಿದ್ದರು ಮನೆಯಲ್ಲಿ ಕೂಡಾ ಇಬ್ಬರೂ ಒಟ್ಟಿಗೆ ಕೆಲಸಮಾಡುತ್ತಿದ್ದರು. ಅವನು ಅವಳಿಗೆ ಎಲ್ಲ ರೀತಿಯಲ್ಲೂ ಸಹಾಯಮಾಡುತ್ತಿದ್ದ. ಶೀತಲ್‌ಗೆ ತಲೆಯ ಕೂದಲು ಬಹಳ ಸುಂದರವಾಗಿತ್ತು. ಸುದರ್ಶನ್ ಯಾವಾಗಲೂ ಅವಳನ್ನು ಹೊಗಳುತ್ತಿದ್ದ.

ಹೊಸ ವರ್ಷಕ್ಕೆ ಒಬ್ಬರಿಗೆ ಗೊತ್ತಾಗದಂತೆ ಇಬ್ಬರೂ ಯೋಚಿಸುತ್ತಿದ್ದರು. ಅವನ ಮನಸ್ಸಿನಲ್ಲಿ ಅವಳಿಗೆ ಏನಾದರೊಂದು ಉಪಯೋಗವಾಗುವಂತಹ ಬಹುಮಾನವನ್ನು ಆಶ್ಚರ್ಯಕರವಾಗಿ ಕೊಡಬೇಕೆಂದಿತ್ತು. ಅವಳೂ ಅವನಿಗೆ ಬೇಕಾಗುವಂತಹ ವಸ್ತುವನ್ನು ಕೊಡಬೇಕೆಂದು ಯೋಚಿಸಿದ್ದಳು.



ಹಿಂದಿನ ದಿನ ಅವಳು ಕೂದಲನ್ನು ಮಾರಿ ಒಂದು ಪ್ಲಾಟಿನಮ್ ಪಟ್ಟಿಯನ್ನು ಅವನ ಕೈಗಡಿಯಾರಕ್ಕೆ ಕೊಂಡುಕೊಂಡಳು. ಹಾಗೆಯೇ ಅವನು ತನ್ನ ಕೈಗಡಿಯಾರವನ್ನು ಮಾರಿ ಅವಳಲ್ಲಿ ಇರಲಿಲ್ಲವಾದ ದಂತದ ಬಾಚಣಿಗೆಯನ್ನು ಕೊಂಡಿದ್ದ.

ಹೊಸವರ್ಷ ವಿದ್ಯುದ್ದೀಪಗಳಿಂದ ಅಲಂಕೃತವಾಗಿತ್ತು. ಇಬ್ಬರೂ ಬಹುಮಾನವನ್ನು ಅವರವರ ಹಿಂದೆ ಹಿಡಿದುಕೊಂಡು ತಕ್ಷಣ ತೋರಿಸಿದರು. ಇಬ್ಬರೂ ಕಣ್ಣ್ಬಿಟ್ಟರು. ಸುದರ್ಶನ್‌ಗೆ ಪ್ಲಾಟಿನಮ್ ಪಟ್ಟಿ ಕೈಗಡಿಯಾರವಿಲ್ಲದೆ, ಶೀತಲ್‌ಗೆ ದಂತದ ಬಾಚಣಿಗೆ ಕೂದಲಿಲ್ಲದೆ!

57. ನ್ಯಾಯಾಲಯದ ತೀರ್ಪು ಸದಾ ಸರಿಯೇ ?

ನ್ಯಾಯಾಲಯ ಕೇಸಿನಲ್ಲಿ ಕೊಡುವ ತೀರ್ಪು ಯಾವಾಗಲೂ ಸರಿ ಎಂದು ತೀರ್ಮಾನಮಾಡುವುದಕ್ಕೆ ಆಗುವುದಿಲ್ಲ. ಎಷ್ಟೋ ಕೇಸುಗಳಲ್ಲಿ, ಕದ್ದ ಮಾಲುಸಮೇತ ಸಿಕ್ಕಿಬಿದ್ದವನೂ ಬಚಾವಾಗಿದ್ದಾನೆ. ಒಬ್ಬ ಕೊಲೆಪಾತಕನೂ ಅವನ ಹಣದ ಬಲದಿಂದ ತಪ್ಪಿಸಿಕೊಳ್ಳುತ್ತಾನೆ. ಎಲ್ಲವೂ ಪ್ರಭಾವಶಾಲಿ ವಕೀಲರ ವಾದ ವಿವಾದಗಳಮೇಲೆ ಅವಲಂಬಿಸಿರುತ್ತೆ.

ಒಂದು ಆಫೀಸಿನಲ್ಲಿ ಮ್ಯಾನೇಜರ್ ಆಗಿದ್ದವನು ಸುಳ್ಳು ರಶೀತಿಯನ್ನು ತೋರಿಸಿ ಹಣ ತೆಗೆದುಕೊಂಡ. ಅದು ಗೊತ್ತಾದನಂತರ ಅವನನ್ನು ಕೆಲಸದಿಂದ ತೆಗೆದುಹಾಕಿದರು. ಅವನ ವಾದವೇನೆಂದರೆ. ಇನ್ನೂ ಹೆಚ್ಚು ಹಣ ಲಪಟಾಯಿಸಿರುವವನನ್ನು ಕ್ಷಮಿಸಿರುವಾಗ ನನಗೇಕೆ ಈ ಶಿಕ್ಷೆ!

ನಾನು ಚಿಕ್ಕಮಗಳೂರಿನಲ್ಲಿದ್ದಾಗ ನಾಲ್ಕೈದು ಕಳ್ಳತನಗಳಾದುವು. ಸಿಕ್ಕಿಬಿದ್ದ ಕಳ್ಳರು ಅಲ್ಲಿಯ ಸರಕಾರೀ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳು. ಅವರು ಎಲ್ಲೆಲ್ಲಿ ಕದ್ದಿದ್ದಾರೆ ಎನ್ನುವುದನ್ನು ಖಚಿತಮಾಡಲು ಪೋಲೀಸ್ ಅಧಿಕಾರಿಗಳು ಆಯಾಯ ಸ್ಥಳಕ್ಕೆ ಅವರನ್ನು ಕರೆದುಕೊಂಡುಹೋದರು. ಒಬ್ಬ ವ್ಯಾಪಾರಿ ಪತ್ರಿಕೆಗೆ ವರ್ತಮಾನ ಕೊಟ್ಟಿದ್ದ, ಅವರ ಅಂಗಡಿಯಲ್ಲಿ ಇಪ್ಪತ್ತುಸಾವಿರ ರುಪಾಯಿ ಕಳುವಾಗಿದೆ ಎಂದು.

ಆ ಕಳ್ಳರು ನಾವು ಹತ್ತುಸಾವಿರ ರೂಪಾಯಿ ಮಾತ್ರ ತೆಗೆದುಕೊಂಡಿದ್ದೇವೆ, ನಮ್ಮ ಪುಸ್ತಕದಲ್ಲಿಯೂ ಬರೆದಿದ್ದೇವೆ. ನೀವು ಹೇಗೆ ತಪ್ಪು ವರ್ತಮಾನವನ್ನು ಪತ್ರಿಕೆಗೆ ಕೊಟ್ಟಿದ್ದೀರಿ ಎಂದು ಆ ವ್ಯಾಪಾರಿಯನ್ನು ಕೇಳಿದರು. ಅವನಿಗೆ ನಾಚಿಕೆಯಾಗಿ ಪೆಚ್ಚಾಗಿಬಿಟ್ಟ.

ನನಗೆ ಒಂದು ಕಥೆ ಜ್ಞಾಪಕಕ್ಕೆ ಬಂತು. ನಾನು ಓದಿದ್ದು ಸುಮಾರು ಎಪ್ಪತ್ತು ವರ್ಷಗಳ ಹಿಂದೆ. ಒಬ್ಬ ಕಳ್ಳರ ಸಂಘದ ಪ್ರತಿನಿಧಿಯಾಗಿ ನ್ಯಾಯಾಲಯಕ್ಕೆ ಹೋಗಿ. ಅಲ್ಲಿದ್ದ ಸೇವಕನಿಗೆ ಹೇಳಿದ ಅವನು ನ್ಯಾಯಾಧೀಶರನ್ನು ನೋಡಬೇಕೆಂದು. ಆ ಸೇವಕ ಈಗ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಯಾವ ಹೊರಗಿನವರನ್ನೂ ನ್ಯಾಯಾಧೀಶರನ್ನು ನೋಡುವುದಕ್ಕೆ ಬಿಡುವುದಿಲ್ಲ ಈ

ಸಮಯದಲ್ಲಿ ಎಂದ. ಆ ಪ್ರತಿನಿಧಿ ತನ್ನ ವಿಸಿಟಿಂಗ್ ಕಾರ್ಡನ್ನು ಕೊಟ್ಟು ಇದನ್ನು ಅವರಿಗೆ ತೋರಿಸು, ಅವರು ಒಪ್ಪಿದರೆ ಒಳಕ್ಕೆ ಹೋಗುತ್ತೇನೆ ಎಂದು ಹೇಳಿದ. ಆ ಸೇವಕನಿಗೆ ಸ್ವಲ್ಪ ಮುಜುಗರವಾದರೂ, ಅದನ್ನು ತೆಗೆದುಕೊಂಡುಹೋಗಿ ನ್ಯಾಯಾಧೀಶರಿಗೆ ತೋರಿಸಿದ. ಅವರು ಐದು ನಿಮಿಷ ಒಳಕ್ಕೆ ಬರಲಿ ಎಂದರು.

ಆ ಪ್ರತಿನಿಧಿ ಒಳಕ್ಕೆ ಹೋಗಿ ಅವನ ಬಗ್ಗೆ ಹೇಳಿಕೊಂಡ. ನಾನು ಇಲ್ಲಿಯ ಕಳ್ಳರ ಸಂಘಕ್ಕೆ ಅಧ್ಯಕ್ಷ, ಏನು. ಏನುಹೇಳಿದೆ ನೀನು? ಹೌದು ಸ್ವಾಮಿ ನಾನು ಸಂಘಕ್ಕೆ ಮುಖ್ಯಸ್ಥ. ನಮಗೆ ಪೊಲೀಸ್ ರಕ್ಷಣೆ ಕೊಡಬೇಕು ಎಂದು ಪ್ರಾರ್ಥಿಸುವುದಕ್ಕೆ ಬಂದಿದ್ದೇನೆ ಎಂದ. ಅಲ್ಲಿದ್ದ ವಕೀಲರೆಲ್ಲರೂ ಕಕ್ಕಾಬಿಕ್ಕಿಯಾಗಿ ಅವನನ್ನು ನೋಡುತ್ತಿದ್ದರು.

ಅವನು ವಿವರಿಸುತ್ತಿದ್ದ. ನಾವು ಬಡಪಾಯಿಗಳಿಂದ ದೋಚುವುದಿಲ್ಲ. ಅವರು ರಸ್ತೆಯ ಅಂಚಿನಲ್ಲಿ ಬಾಳೇಹಣ್ಣು ಅಥವಾ ಬೋಂಡ ಮಾರುತ್ತಿದ್ದರೆ ಅವನ ಜೀವನಕ್ಕೋಸ್ಕರ, ಅವನನ್ನು ದರೋಡೆಮಾಡುವುದಿಲ್ಲ. ಸಾವಿರಾರು ಬಡಪಾಯಿಗಳನ್ನು ಸುಲಿಗೆಮಾಡಿ ಒಬ್ಬ ಶ್ರೀಮಂತನಾಗಿದ್ದರೆ, ಅಂಥವರ ಮನೆಯಲ್ಲಿ ದರೋಡೆಮಾಡುತ್ತೇವೆ. ಅದನ್ನು ಪ್ರತಿಭಟಿಸಬೇಕು. ಆ ಕದ್ದ ಹಣದಿಂದ ಎರಡುಸಾವಿರ ಸಂಸಾರಗಳನ್ನು ಪೋಷಿಸುತ್ತಿದ್ದೇವೆ ಎಂದು ವಿವರಗಳನ್ನು ತೋರಿಸಿದ.

ಇಂತಹ ಧೈರ್ಯದ ಕೆಲಸಗಳನ್ನು ಮಾಡುವಾಗ, ನಮಗೆ ಎಷ್ಟು ಶಕ್ತಿ ಇರಬೇಕು. ಪಿಕ್‌ಪಾಕೆಟ್ ಮಾಡುವಾಗ ನಮಗೆ ಎಷ್ಟು ಬುದ್ಧಿ ಇರಬೇಕು, ಎಷ್ಟು ಕೈಚಳಕ. ಇದೊಂದನ್ನೂ ಗಮನಿಸದೆ, ನಮ್ಮನ್ನೂ, ಒಬ್ಬ ಬಾಳೇಹಣ್ಣು ಕದ್ದವನನ್ನೂ ಸಮಾನರೆಂದು ಹೇಳುವುದು ಸರಿಯಲ್ಲ ಎಂದು ಹೇಳಿ, ಅವನ ಸಹಾಯಕನನ್ನು (ಯಶ) ಕರೆದು, ಅಲ್ಲಿದ್ದ ಕಬ್ಬಿಣದ ಬಾಗಿಲನ್ನು ಎತ್ತುವುದಕ್ಕೆ ಹೇಳಿದ. ಆ ಬಾಗಿಲು ಒಳಗಿನ ಜೈಲಿಗೆ ಹೋಗುವುದಕ್ಕೆ, ಅಷ್ಟು ಸುಲಭವಾಗಿ ಎತ್ತುವುದಕ್ಕೆ ಸಾಧ್ಯವಿಲ್ಲ. ಯಶ ಎರಡೇ ನಿಮಿಷದಲ್ಲಿ ಎತ್ತಿದ. ಅಷ್ಟೇ ಅಲ್ಲ. ಪುನಃ ಹಾಗೇ ಇಡಬೇಕು, ಯಾರೂ ಅದನ್ನು ಮುಟ್ಟಿಲ್ಲವೆಂಬಂತೆ.

ನಂತರ ಆ ಪ್ರತಿನಿಧಿ ಅಲ್ಲಿದ್ದ ಒಬ್ಬ ವಕೀಲರನ್ನು ಮುಂದಕ್ಕೆ ಬರುವಂತೆ ಪ್ರಾರ್ಥಿಸಿದ. ಪಿಕ್ ಪಾಕೆಟ್ ಮಾಡುವಾಗ ಒಂದು ಕರವಸ್ತ್ರವನ್ನು ಎಲ್ಲಿ ಹಿಡಿಯಬೇಕು. ಚಾಕು ಅಥವಾ ಕತ್ತರಿ ಎಲ್ಲಿರಬೇಕು ಇತ್ಯಾದಿ. ಅವನ ವಿವರಗಳನ್ನು ಹೇಳುತ್ತಿದ್ದಾಗ. ಯಶ ಆ ವಕೀಲರನ್ನು ಮುಟ್ಟಿ ತೋರಿಸುತ್ತಾ ಅವರ

ಕೈಗಡಿಯಾರವನ್ನೇ ಎಗರಿಸಿದ್ದ. ವಕೀಲರು ಅವರಿಗೆ ಗೊತ್ತಾಗಲೇ ಇಲ್ಲ ಎಂದು ಹೇಳಿದರು. ಹೌದು, ನಿಮಗೆ ಗೊತ್ತಾಗದಹಾಗೆ ಮಾಡುವುದೇ ನಮ್ಮ ವ್ಯವಹಾರ.

ನ್ಯಾಯಾಧೀಶರು ಅವನಿಗೆ ಐದು ನಿಮಿಷ ಎಂದು ಹೇಳಿದ್ದರೂ ಅದು ಎರಡು ಗಂಟೆಯ ಕಾಲವಾಗಿತ್ತು. ಅವನು ಹೇಳಿದ್ದನ್ನೆಲ್ಲಾ ಕೇಳುತ್ತ ಎಲ್ಲರೂ ದಿಗ್ಭಮೆಗೊಂಡಿದ್ದರು.

ಕಳ್ಳರ ಗುಂಪಿನ ಅಧ್ಯಕ್ಷರು ಮುಂದುವರಿಸುತ್ತ ಹೇಳಿದರು; ಅಷ್ಟೇ ಅಲ್ಲ ಸ್ವಾಮಿ, ಕಳ್ಳರೇ ಇಲ್ಲದಿದ್ದರೆ ಪೊಲೀಸ್ ಖಾತೆಯ ಅವಶ್ಯಕತೆಯೇ ಇಲ್ಲ. ಅಂದರೆ ಲಕ್ಷಾಂತರ ಪೊಲೀಸ್ ಪ್ಯಾದೆಗಳಿಗೆ ಕೆಲಸವಿಲ್ಲ. ಹಾಗೆ ನೋಡಿದರೆ, ನಾವು ರಾಷ್ಟ್ರದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಸಹಾಯಮಾಡುತ್ತಿದ್ದೇವೆ. ಈ ವಿಷಯವನ್ನು ಪರಾಮರಿಸಬೇಕು ಎಂದರು.

ನ್ಯಾಯಾಧೀಶರು ಕೊನೆಯದಾಗಿ ಹೇಳಿದರಂತೆ, ಏನೂ ತೊಂದರೆಯಿಲ್ಲ. ಅವರಿಗೆ ಪೊಲೀಸ್ ರಕ್ಷಣೆ ಕೊಡಬೇಕೆಂದು!

58. ಪ್ರೇಮಪತ್ರದ ಪರಿಣಾಮ

ಸರಸಿ ಮುಂದಿನ ಮನೆಯ ಕಿಟಿಕಿಯ ಹತ್ತಿರ ಕುಳಿತು ಕೊಂಡು ಓದುವುದರಲ್ಲಿ ತಲ್ಲೀನನಾಗಿದ್ದ ಹುಡುಗನನ್ನು ಪ್ರತಿನಿತ್ಯವೂ ನೋಡುತ್ತಿದ್ದಳು. ಓದುವಾಗ ಅವನಿಗೆ ಯಾವ ಯೋಚನೆಯೂ ಇರುತ್ತಿರಲಿಲ್ಲ. ಅವನು ಒಂದು ಬಾರಿಯಾದರೂ ಕತ್ತೆತ್ತಿದರೆ ಅವನ ಜೊತೆ ಮಾತನಾಡಬೇಕೆಂದು ಯೋಚಿಸುತ್ತಿದ್ದಳು. ಅವಳ ಅದೃಷ್ಟವೋ. ಏನೋ ಅವನು ಒಂದುಸಲ ಕತ್ತೆತ್ತಿ ಕಿಟಿಕಿಯಿಂದ ಹೊರಗಡೆ ನೋಡಿದ. ಸರಸಿಗೆ ಕುತೂಹಲ ಅವನನ್ನು ಮಾತನಾಡಿಸಬೇಕೆಂದು. ಸರಸರ ಅವನ ಮನೆಗೆ ಹೋಗಿ ನಿಮ್ಮ ಹೆಸರನ್ನು ಕೇಳಬಹುದೇ ಎಂದಳು. ಅವನ ಹೆಸರು ಗೋಪಿ ಎಂದು ಹೇಳಿದ.

ನನಗೆ ಒಂದು ಸಹಾಯಬೇಕಾಗಿದೆ ನಿಮ್ಮಿಂದ. ನಾನು ಒಬ್ಬ ಹುಡುಗನನ್ನು ಪ್ರೀತಿಸುತ್ತಿದ್ದೇನೆ. ಅವನಿಗೆ ಒಂದು ಕಾಗದ ಬರೆಯಬೇಕು, ನೀವು ಬರೆದುಕೊಟ್ಟರೆ ತುಂಬಾ ಅನುಕೂಲ ಎಂದಳು. ಈ ತರಹ ಬೇಡಿಕೆಗೆ ಏನು ಹೇಳಬೇಕು. ಇವೆಲ್ಲವೂ ಹೊಸದು ಅವನಿಗೆ. ಏನಾದರಾಗಲಿ ಎಂದು ಬರೆದುಕೊಟ್ಟ ಈ ಕಾಟ ತಪ್ಪಿದರೆ ಸಾಕೆಂದು.

ನಾಲ್ಕಾರು ದಿನಬಿಟ್ಟು ಸರಸಿ ಮತ್ತೆ ಅವನಬಳಿ ಹೋದಳು. ಓಹೋ ಇನ್ನೊಂದು ಪತ್ರವೇ ಎಂದಾಗ, ಅವಳು ಇಲ್ಲ, ನಾನು ಬರದಿದ್ದ ಪತ್ರಕ್ಕೆ ಅವನಿಂದ

ಒಪ್ಪಿಗೆಯ ಕಾಗದ ಬರೆದುಕೊಡಿ ಎಂದಳು! ಇದೆಂತಹ ಬಯಕೆ. ನಾನೇಕೆ ತಲೆಕೆಡಿಸಿಕೊಳ್ಳಬೇಕು, ಅವಳು ಇಲ್ಲಿಂದ ಹೊರಟರೆ ಒಳ್ಳೆಯದೆಂದು. ಅವಳ ಪ್ರೇಮಿಯ ಉತ್ತರವನ್ನು ಬರೆದ. ಸರಸಿ ಖುಷಿಯಾಗಿ ಹೋದಳು. ಒಂದುವಾರ ಬಿಟ್ಟು ಇನ್ನೊಂದು ಪತ್ರ. ಗೋಪಿಗೆ ಅವಳ ಪ್ರೇಮಿ ಯಾರು ಎನ್ನುವುದೂ ಗೊತ್ತಿಲ್ಲ. ಈ ಬಗೆಯ ಪತ್ರ ವ್ಯವಹಾರ ಏಳೆಂಟುಬಾರಿ ನಡೆಯಿತು. ಸರಸಿ ಮತ್ತು ಗೋಪಿಯರಲ್ಲಿ ಸಲುಗೆಯಾಗಿ, ಕೊನೆಗೆ ಅವನು ಸರಸಿಯನ್ನು ಮೆಚ್ಚಿ ಅವಳನ್ನೇ ಮದುವೆಯಾದನಂತೆ!

59. ಅಂಗಡಿಯ ಪಾಲುದಾರರು

ಮಾವ ಮತ್ತು ಅಳಿಯ ಒಂದು ಅಂಗಡಿ ನಡೆಸುವುದರಲ್ಲಿ ಪಾಲುದಾರರಾಗಿದ್ದರು. ಪ್ರತಿದಿನ ವ್ಯಾಪಾರದ ವೇಳೆ ಮುಗಿದಮೇಲೆ ಇಬ್ಬರೂ ಪಕ್ಕಪಕ್ಕದಲ್ಲಿ ಕುಳಿತುಕೊಂಡು ಹಣದ ನೋಟುಗಳನ್ನು ಎಣಿಸುತ್ತಿದ್ದರು. ಆ ಹಣವನ್ನು ಮಾರನೆಯದಿನ ಬ್ಯಾಂಕಿಗೆ ಕಟ್ಟಬೇಕಾದದ್ದು. ಇಬ್ಬರೂ ಸಂಬಂಧಿಗಳೇ ಆಗಿದ್ದರೂ ಒಬ್ಬರನ್ನೊಬ್ಬರು ನಂಬುತ್ತಿರಲಿಲ್ಲ. ಪ್ರತಿಕ್ಷಣದಲ್ಲೂ ಎಚ್ಚರಿಕೆಯಿಂದ ನೋಡುತ್ತಿದ್ದರು ಒಂದು ದಿನ ರಾತ್ರಿ ಹತ್ತುಗಂಟೆಯ ಸಮಯದಲ್ಲಿ ಹಣವನ್ನು ಎಣಿಸುತ್ತಿದ್ದಾಗ ದೀಪ ಆರಿಹೋಯಿತು. ಇಬ್ಬರಿಗೂ ಅನುಮಾನ. ಒಬ್ಬರಿಗೆ ಗೊತ್ತಾಗದಹಾಗೆ ಇನ್ನೊಬ್ಬರು ಕೆಲವು ನೋಟುಗಳನ್ನು ಎಗರಿಸಿಬಿಡಬಹುದು ಎಂದು. ಇಬ್ಬರು ಪಾಲುದಾರರೂ ಕೈಗಳನ್ನು ಹಿಡಿದುಕೊಂಡು ಕಳ್ಳ, ಕಳ್ಳ ಎಂದು ಕೂಗುತ್ತಿದ್ದರು ದೀಪ ಬರುವತನಕ!

60. ಅಳಿಯನ ಕಿವುಡು ಬಯಲಾಯಿತು!

ರಾಮಾಜೋಯಿಸರು ಹೆಸರುವಾಸಿಯಾದ ಪುರೋಹಿತರು ಮೈಸೂರಿನಲ್ಲಿ. ಜಾನಕಮ್ಮ ಅವರಿಗೆ ತಕ್ಕ ಹೆಂಡತಿ. ಒಬ್ಬಳೇ ಮಗಳು ಲಲಿತ. ಮದುವೆಯ ವಯಸ್ಸು. ಪುರೋಹಿತರಾದರೂ ಆದಾಯ ಚೆನ್ನಾಗಿ ಬರುತ್ತಿತ್ತು. ಜೊತೆಗೆ ಪಿತ್ರಾರ್ಜಿತ ಆಸ್ತಿ, ಮೂರು ಎಕರೆ ತೋಟ, ಮನೆಗಾಗುವಷ್ಟು ಭತ್ತದ ಗದ್ದೆ ನಂಜನಗೂಡಿನ ಹತ್ತಿರ ಇತ್ತು. ಮಗಳಿಗೆ ಗಂಡು ಗೊತ್ತುಮಾಡಿದರು. ಹುಡುಗ, ಅವನ ತಂದೆತಾಯಿಗಳು ಬೆಂಗಳೂರಿನಲ್ಲಿದ್ದರು. ಹುಡುಗ ವೆಂಕಟೇಶಮೂರ್ತಿ ಒಳ್ಳೆಯ ಕೆಲಸದಲ್ಲಿದ್ದ. ಜೋಯಿಸರು ಅವರ ಘನತೆಗೆ ತಕ್ಕಂತೆ ಮದುವೆಯನ್ನು ನಡೆಸಿದರು. ಮದುವೆಯಾದ ನಂತರ ಬೀಗರು ಬೆಂಗಳೂರಿಗೆ ಹೊರಟರು.

ಜೋಯಿಸರಿಗೆ ಪ್ರತಿದಿನವೂ ಒಂದಲ್ಲ ಒಂದು ಕಾರ್ಯಕ್ರಮ. ಮದುವೆ, ಮುಂಜಿ, ಗೃಹಪ್ರವೇಶ, ಸತ್ಯನಾರಾಯಣ ವ್ರತ. ಹಬ್ಬಹರಿದಿನಗಳು. ಈ ಸಮಾರಂಭಗಳಲ್ಲಿ ಊಟ ಅಂದರೆ, ತುಪ್ಪ, ಹಾಲು, ಸಕ್ಕರೆ ಮುಖ್ಯವಾದುವು. ಜೋಯಿಸರು ಮೊದಲಿನಿಂದಲೂ ಸ್ವಲ್ಪ ದಢೂತಿಯು ಮನುಷ್ಯರು. ಅದರಿಂದಾಗಿ ಅವರ ಆರೋಗ್ಯ ಉಲ್ಬಣಾವಸ್ಥೆಗೆ ಬಂತು. ಯಾವ ಔಷಧಿಯೂ ಪ್ರಯೋಜನವಾಗಲಿಲ್ಲ.

ಅಳಿಯ ವೆಂಕಟೇಶಮೂರ್ತಿಗೆ ಕಿವಿ ಸರಿಯಾಗಿ ಕೇಳುತ್ತಿರಲಿಲ್ಲ. ಮದುವೆಗೆ ಮುಂಚೆ ಅಷ್ಟಾಗಿ ಗೊತ್ತಾಗಲಿಲ್ಲ. ಕಾಲ ಕ್ರಮೇಣ ಯಾವ ವೈದ್ಯರೂ ಅದನ್ನು ಸರಿಪಡಿಸಲು ಸಾಧ್ಯವಾಗದೇಹೋಯಿತು. ಮಾವನವರ ಆರೋಗ್ಯ ಹದಗೆಟ್ಟಿದೆ ಎಂದು ತಿಳಿದಾಗ ಹೋಗಿ ನೋಡಿಕೊಂಡು ಬರೋಣ ಎಂದು ಗಂಡ ಹೆಂಡತಿ ಇಬ್ಬರೂ ಮೈಸೂರಿಗೆ ಪ್ರಯಾಣ ಮಾಡಿದರು.

ದಾರಿಯುದ್ದಕ್ಕೂ ವೆಂಕಟೇಶಮೂರ್ತಿಗೆ ಸದಾ ಯೋಚನೆ, ಅತ್ತೆ ಮಾವಂದಿರಿಗೆ ತನ್ನ ಕಿವಿಕಿವುಡು ಗೊತ್ತಾಗಿಬಿಡಬಹುದೆಂದು. ಅದನ್ನು ತೋರ್ಪಡಿಸದೆ ಆದಷ್ಟುಬೇಗ ಹಿಂತಿರುಗಬೇಕೆಂದು ಯೋಚಿಸಿದ. ಮಾವನವರು ಖಾಯಿಲೆಯಿಂದಿರುವಾಗ ಔಷಧೋಪಚಾರ ಇದ್ದೇ ಇರುತ್ತೆ. ಆಹಾರವನ್ನೂ ತೆಗೆದುಕೊಳ್ಳುತ್ತಿರಬೇಕು ಎಂದೆಲ್ಲಾ ಯೋಚಿಸಿ. ಅದಕ್ಕೆ ತಕ್ಕಂತೆ ಮಾತನಾಡಬೇಕೆಂದು ಮನಸ್ಸಿನಲ್ಲೇ ಪ್ರಶ್ನೋತ್ತರಗಳನ್ನು ರೂಪಿಸಿಕೊಂಡ.

ಮೈಸೂರಿಗೆ ಹೋದಕೂಡಲೆ ಮಾವನವರ ಜೊತೆ ಮಾತನಾಡಲು ಶುರುಮಾಡಿದ. ಔಷಧಿ ಕ್ರಮವಾಗಿ ತೆಗದುಕೊಳ್ಳುತ್ತಿದ್ದೀರಾ ಎಂದ. ಅವರು ಯಾವ ಔಷಧಿಯೂ ಒಗ್ಗಿಲ್ಲ ಎಂದರು. ಹೋಗಲಿಬಿಡಿ ಅಷ್ಟಾದರೆ ಸಾಕು ಎಂದ ಅಳಿಯ! ಊಟ, ತಿಂಡಿ ಸೇರುತ್ಯೇ ಅಂದಾಗ, ಅವರು ಹೊಟ್ಟೆಗೆ ಹೋಗುವುದೇ ತಡ ಎಲ್ಲಾ ವಾಂತಿಯಾಗಿಬಿಡುತ್ತೆ ಅಂದರು. ಅಂತೂ ದೇವರು ಕಾಪಾಡಿದ ಅಂದ ವೆಂಕಟೇಶಮೂರ್ತಿ!

ಅಕ್ಕಪಕ್ಕದಲ್ಲಿದ್ದವರಿಗೆಲ್ಲ ತಿಳಿಯಿತು ಅವರಿಬ್ಬರ ಮಾತುಕತೆ ಕೇಳಿ. ವೆಂಕಟೇಶಮೂರ್ತಿಗೆ ಕಿವಿ ಕಿವುಡು ಎಂದು! ಮಾರನೇದಿನವೇ, ಆಫೀಸಿನಲ್ಲಿ ತುಂಬಾ ಕೆಲಸ, ಹೋಗಲೇಬೇಕು, ಇನ್ನೊಂದುಸಲ ಬಿಡುವುಮಾಡಿಕೊಂಡು ಬರ್ತೀವಿ ಎಂದು ಹೇಳಿ ಬೆಂಗಳೂರಿಗೆ ಹೊರಟರು.

ಆಧುನಿಕ ಉಪಕರಣಗಳು, ಉಷಾರಾಗಿರಿ!

ಹರಿಕೃಷ್ಣ ಒಂದು ಆಫೀಸಿನಲ್ಲಿ ಮ್ಯಾನೇಜರ್ ಆಗಿದ್ದ. ಅಲ್ಲಿ ಇನ್ನೂ ನಾಲ್ಕಾರು ಜನ ಅವನ ಕೈಕೆಳಗೆ ಕೆಲಸ ಮಾಡುತ್ತಿದ್ದರು. ಅವರುಗಳು ಆಗಾಗ್ಗೆ ಏನಾದರೂ ಒಂದು ಸುಳ್ಳು ಕಾರಣ ಹೇಳಿ ರಜ ಪಡೆಯುತ್ತಿದ್ದರು. ಅದೆಲ್ಲ ನಿಜವೆಂದೇ ನಂಬಿದ್ದ ಹರಿಕೃಷ್ಣ.

ಒಂದು ದಿನ ಏನೋ ಯೋಚನೆ ಮಾಡುತ್ತ ಕುಳಿತಿದ್ದಾಗ, ರಾಜಶೇಖರ್ ಎಂಬುವವರು ಯಾವುದೋ ಕಂಪೆನಿಯ ಪ್ರತಿನಿಧಿಯಾಗಿ ಬಂದು, ಹೊಸ ಉಪಕರಣವೊಂದನ್ನು ಹರಿಕೃಷ್ಣನಿಗೆ ತೋರಿಸಲು ತಂದಿದ್ದರು. 'ನಾನು ಈಸಿ ಸಲ್ಯೂಷನ್ಸ್ ಕಂಪೆನಿಯ ಪ್ರತಿನಿಧಿ. ನೋಡಿ, ಈ ಉಪಕರಣ ಎಷ್ಟು ಅದ್ಭುತವಾಗಿದೆ, ಇದರಿಂದ ಎಲ್ಲರ ಮನಸ್ಸಿನ ಅಂತರಂಗವನ್ನು ಸುಲಭವಾಗಿ ತಿಳಿಯಬಹುದು, ಅವರು ಮುಚ್ಚುಮರೆ ಮಾಡುವಂತೆಯೇ ಇಲ್ಲ' ಎಂದು ವಿವರಣೆ ಕೊಟ್ಟ. ಈ ಹಸಿರು ಬಣ್ಣದ ಗುಂಡಿಯನ್ನು ಒತ್ತಿ ಐದು ನಿಮಿಷ ಬಿಟ್ಟು ನೀವು ಕೇಳಿದ ಪ್ರಶ್ನೆಗೆ ಅವರ ಮನಸ್ಸಿನಲ್ಲಿರುವ ಉತ್ತರವನ್ನೇ ಹೇಳುತ್ತಾರೆ ಎಂದಾಗ, ಹರಿಕೃಷ್ಣನಿಗೆ ಕುತೂಹಲ ಹೆಚ್ಚಾಯಿತು.

ಹೌದು, ನಮ್ಮ ಆಫೀಸಿನಲ್ಲಿ ಕೆಲಸ ಮಾಡುವವರು ಏನಾದರೂ ನೆಪಹೇಳಿ ರಜ ಬೇಕೆಂದು ಕೇಳುತ್ತಾರೆ. ಅದನ್ನು ಪತ್ತೆಮಾಡಬಹುದು. ನನ್ನ ಹೆಂಡತಿ ಸರಳ ಕೂಡ ಇಂತಹ ಉಪಕರಣಗಳನ್ನು ನೋಡಲು ಆಸೆ. ನಮ್ಮ ಮನೆಗೆ ಇದನ್ನು ತಂದು ತೋರಿಸಿ. ನಾಳೆ ಭಾನುವಾರ. ಇಬ್ಬರೂ ಮನೆಯಲ್ಲೇ ಇರುತ್ತೇವೆ ಎಂದು ಹೇಳಿದ. ಅದರಂತೆ ಅವರು ಬಂದು ಉಪಕರಣವನ್ನು ಜೋಡಿಸಿ ಹರಿಕೃಷ್ಣನ ಕೈಗೆ ತಂತಿಯನ್ನು ತಗುಲಿಸಿ ಪ್ರಶ್ನೆಕೇಳಲು ಶುರುಮಾಡಿದರು.

ರಾಜಶೇಖರ್: ನಿಮ್ಮ ಆಫೀಸ್ ಕೆಲಸದ ವೇಳೆ ಎಷ್ಟು?

ಹರಿಕೃಷ್ಣ: ಹತ್ತರಿಂದ ಐದೂವರೆ (ಹೆಂಡತಿಗೆ ಬೆಳಿಗ್ಗೆ 9ಕ್ಕೆ ಹೋಗಬೇಕು. ತುಂಬಾ ಕೆಲಸ ಎಂದು ಹೇಳಿರುತ್ತಾನೆ)

ಹೋಗಿ ಕೂಡಲೇ ಏನುಮಾಡುತ್ತೀರಿ?

ನನ್ನ ಪರ್ಸನಲ್ ಅಸಿಸ್ಟೆಂಟ್ ಸುಚಿಯ ಜೊತೆ ಹರಟೆ ಹತ್ತುಗಂಟೆಯ ತನಕ.

ನಿಮಗೆ ಸಂಬಳ ಎಷ್ಟು?

ಹತ್ತುಸಾವಿರ (ಹೆಂಡತಿಗೆ ಹೇಳಿರುವುದು ಎಂಟುಸಾವಿರ)

ಭಾನುವಾರ ಏನು ಮಾಡುತ್ತೀರಿ?

ಒಂದೊಂದು ಶನಿವಾರ ಸುಚಿಯಜೊತೆ ಕ್ಲಬ್ಬು (ಹೆಂಡತಿಗೆ ಹೇಳಿದ್ದು ಆಫೀಸಿನಲ್ಲಿ ಕೆಲಸ)

ಹೆಂಡತಿ ಎಲ್ಲವನ್ನೂ ಕೇಳಿಸಿಕೊಂಡು ಮುಖ ಕೆಂಪಗೆ ಮಾಡಿಕೊಂಡಿರುತ್ತಾಳೆ. ತಂತಿಯನ್ನು ತೆಗೆದಕೂಡಲೆ ರಂಪವೋ ರಂಪ. ಹರಿಕೃಷ್ಣ ರೇಗಿಕೊಂಡು. ಮೊದಲು ನಿಮ್ಮ ಹಾಳು ಉಪಕರಣವನ್ನು ತೆಗೆದುಕೊಂಡು ತೊಲಗಿ ಎಂದ. ರಾಜಶೇಖರ್ ಕ್ಷಮಿಸಿ, ತಪ್ಪಾಗಿ ಯಾವುದೋ ಬಟನ್ ಒತ್ತಿಬಿಟ್ಟೆ. ಆ ಪ್ರಶ್ನೆ ಉತ್ತರಗಳೆಲ್ಲಾ ಇನ್ನೊಬ್ಬರಿಗೆ ಸಂಬಂಧಿಸಿದ್ದು ಎಂದು ಹೇಳಿ ಹೊರಟ! ಹೆಂಡತಿಯನ್ನು ಸಮಾಧಾನ ಮಾಡಲು ಸಾಕುಸಾಕಾಗಿ ಹೋಯಿತು ಹರಿಕೃಷ್ಣನಿಗೆ.

ಪ್ರಸಂಗ

62. ಕಲಿತಿರುವುದು ಇಷ್ಟು, ಕಲಿಯಬೇಕಾದದ್ದು ಅಷ್ಟು

ಹರಿಸರ್ವೋತ್ತಮದಾಸರು ಬಹಳ ಘನವಿದ್ವಾಂಸರು. ಅವರು ಸಾಧಿಸಿರುವ ಜ್ಞಾನಾರ್ಜನೆಯನ್ನು ಯಾರೂ ಮೀರಿಸುವವರಿಲ್ಲ ಆ ಊರಿನಲ್ಲಿ. ಯಾರ ಬಾಯಲ್ಲೂ ಅವರ ಮಾತೇ. ಅದು ಅವರ ಅಹಂಭಾವಕ್ಕೆ ನಾಂದಿಯಾಯಿತು. ವಯಸ್ಸು ನೂರು ದಾಟಿ ಮುಂದಕ್ಕೆ ಹೆಜ್ಜೆಯಿಟ್ಟಿತ್ತು. ನಾನು ಎಲ್ಲವನ್ನೂ ಕಲಿತಿದ್ದೇನೆ. ಇನ್ನು ಕಲಿಯಬೇಕಾದದ್ದು ಏನೂ ಇಲ್ಲ ಎಂದು ತಿಳಿದರು. ಸಾಯುವ ಘಳಿಗೆಯೂ ಬಂತು. ಏನೋ ಮನಸ್ಸಿನಲ್ಲಿ ಕೊರತೆ. ತಿಳಿಯಬೇಕಾದದ್ದು ಇನ್ನೂ ಸ್ವಲ್ಪ ಉಳಿದಿದೆ ಎನ್ನುತ್ತಿದೆ ಮನಸ್ಸು. ಆದರೆ ವಯಸ್ಸು. ಬೇರೇ ಏನೂ ತೋಚದೆ ದೇವರನ್ನು ಕುರಿತು ತಪಸ್ಸು ಮಾಡಿದರಂತೆ.

ತಪಸ್ಸು ಮಾಡಿದಮೇಲೆ ದೇವರು ಪ್ರತ್ಯಕ್ಷನಾಗಲೇಬೇಕಾಯಿತು! ಕಾರಣವನ್ನು ತಿಳಿದಾಗ ದೇವರು ಇನ್ನು ನೂರು ವರ್ಷ ವಯಸ್ಸನ್ನು ದಯಪಾಲಿಸಿದ. ಹೀಗೆಯೇ ನಾನೂರು ವರ್ಷಗಳ ಅವಧಿ ಮುಗಿಯಿತು. ವಿದ್ವಾಂಸರು ಬಹಳ ಆನಂದಪಟ್ಟರು. ಅಂತೂ ನಾನು ಎಲ್ಲವನ್ನೂ ಕಲಿತುಕೊಂಡು ಜ್ಞಾನಸಂಪಾದಿಸಿದೆ ಎಂದು ಹೆಮ್ಮೆಪಟ್ಟರು. ಆ ಸಮಯಕ್ಕೆ ಸರಿಯಾಗಿ ದೇವರು ಪುನಃ ಪ್ರತ್ಯಕ್ಷನಾದ. ದಾಸರು ಅವರ ಜ್ಞಾನಭಂಡಾರವನ್ನೆಲ್ಲ ವರ್ಣಿಸಿದರು. ಅವರು ಮಾತು ಮುಗಿಸುವಷ್ಟರಲ್ಲಿ,. ಪಕ್ಕದ ಮರದಮೇಲಿಂದ ಹಕ್ಕಿಯೊಂದು ಹಾರಿ ಸಮುದ್ರದಮೇಲೆ ಒಂದು ತೊಟ್ಟು ನೀರನ್ನು ಕುಡಿದು ಪುರ್ ಎಂದು ಹಾರಿಹೋಯಿತು.

ದೇವರು ವಿದ್ವಾಂಸರಿಗೆ ಹೇಳಿದನಂತೆ. ನೋಡು ನೀನು ಇಲ್ಲಿಯವರೆಗೆ ಕಲಿತಿರುವ ವಿದ್ಯೆ ಆ ಹಕ್ಕಿ ಕುಡಿದ ನೀರಿನಷ್ಟು. ಕಲಿಯಬೇಕಾದದ್ದು ನಿನ್ನ ಮುಂದೆ ಕಾಣುತ್ತಿರುವ ಮಹಾಸಾಗರದಷ್ಟು ಎಂದು ಹೇಳಿ ಅದೃಶ್ಯನಾದನಂತೆ! ದಾಸರಿಗೆ ಆಗ ಜ್ಞಾನೋದಯವಾಯಿತು. ಅಷ್ಟೊಂದು ವಿದ್ಯಾರ್ಜನೆ ಮಾಡಬೇಕಾದರೆ, ಎಷ್ಟು ಸಾವಿರ ಜನ್ಮ ತಾಳಬೇಕೋ ಎಂದು ಯೋಚಿಸಿ ಪ್ರಾಣಬಿಟ್ಟರಂತೆ!

63. ಬರೀ ಓದು ಯಾರಿಗೆ ಬೇಕು ?

ಅವರಿವರು ಆಡುತ್ತಿದ್ದ ಮಾತುಗಳನ್ನು ಪಕ್ಕದಮನೆಯ ಸೋನಾಬಾಯಿ ಗಟ್ಟಿಯಾಗಿ ಕಿರಿಚುತ್ತಿದ್ದರು. ರುಕ್ಮಿಣಮ್ಮ, ರುಕ್ಮಿಣಮ್ಮಾ ಕೇಳಿದಿರಾ, ಸಾವಿತ್ರಮ್ಮನ ಮಗ ಸತ್ಯರಾಜ್‌ಗೆ ನೂರಕ್ಕೆ ನೂರಂತೆಕಣ್ರೀ, ಮುಂದಿನ ವರ್ಷವೂ ಹಾಗೇ ಬಂದರೆ ಚಿನ್ನದಪದಕ ಕೊಡುತ್ತಾರಂತೆ! ನೋಡಿ ನಮ್ಮ ಮಗನೂ ಇದಾನೆ ಮೂದೇವಿ.

ಹಾಗೆಲ್ಲ ಹೇಳಬೇಡಿ ಸೋನಾಬಾಯಿ, ನಿಮ್ಮ ಮಗ ಎಷ್ಟು ಕೆಲಸಮಾಡುತ್ತಾನೆ ಎಂಬುದು ಎಲ್ಲರಿಗೂ ಗೊತ್ತು. ಆ ಮುಂಡೇದು ಸತ್ಯರಾಜ್‌ಗೆ ಓದೋದು ಒಂದು ಬಿಟ್ರೆ ಇನ್ನೇನೂ ಗೊತ್ತಿಲ್ಲ. ಅವನ ಅಪ್ಪ ರಾಮಾಚಾರ್ ಬಂದಿದ್ರು ಅಪರೂಪಕ್ಕೆ ನಮ್ಮ ಮನೆಗೆ. ಪಂಚೆ ಹರಿದುಹೋಗಿತ್ತು. ನಮ್ಮ ಮನೆಯವರು ಕೇಳಿದ್ರೆ, ಹೋಗಲಿ ಬಿಡಪ್ಪ, ನನ್ನನ್ನು ಯಾರು ನೋಡಬೇಕು. ಏನೊ ಅವನು ಮುಂದಕ್ಕೆ ಬರಲಿ ಅಂತ ಒಂದು ಆಸೆ ಅಂದುಬಿಟ್ರು. ಬರುವ ಪಿಂಚಣಿ ಹಣವನ್ನೆಲ್ಲ ಅವನ ವಿದ್ಯೆಗೆ ಕೊಡುತ್ತಾರಂತೆ.

ಅಷ್ಟರಲ್ಲಿ ಕಮಲಮ್ಮ ಬಂದರು. ನೋಡಿ ನಾನು ಅಕಸ್ಮಾತ್ ಸಾವಿತ್ರಮ್ಮನ ಮನೆಗೆ ಹೋಗಿದ್ದೆ. ಪಾಪ ಆಕೆ ಜ್ವರಬಂದು ಹಾಸಿಗೆಬಿಟ್ಟು ಏಳುವುದಕ್ಕೆ ಆಗ್ತಾ ಇಲ್ಲ. ಅಷ್ಟರಲ್ಲಿ ಅವರ ಮಗ ಬಂದು, ಎದ್ದು ಒಂದು ಕಪ್ ಕಾಫಿ ಮಾಡಿಕೊಡು ಎಂದು ಕೂಗಿದ. ಆಕೆಯನ್ನು ನೋಡಿ. ಥತ್ ಎಂದು ಹೋಗಿ ಆನ್‌ಲೈನ್ ಆರ್ಡರ್ ಮಾಡಿ ಅವನ ರೂಮಿಗೇ ಕಾಫೀ ತರಿಸಿದನಂತೆ. ಇಂಥ ಮಕ್ಕಳು ಇದ್ದರೂ ಒಂದೇ ಇಲ್ಲದಿದ್ದರೂ ಒಂದೆ. ನೂರಕ್ಕೆ ನೂರು ಬಂದಮಾತ್ರಕ್ಕೆ ಏನು ಪ್ರಯೋಜನ. ಮಗನನ್ನು ಹೆತ್ತು ಹೊತ್ತು ಸಾಕಿ ಸಲಹಿ, ಅವನಿಗೆ ಹೊತ್ತಿಂದೊತ್ತಿಗೆ ಊಟ, ತಿಂಡಿ ಒದಗಿಸಿ ದೊಡ್ಡವನನ್ನಾಗಿ ಮಾಡಿರುವ ಆ ತಾಯಿಗೆ ಎಷ್ಟು ಅಂಕಗಳನ್ನು ಕೊಡಬಹುದು ಯೋಚಿಸಿ ಹೇಳಿ.

64. ಅಮೇರಿಕಾದಲ್ಲಿ ನಮ್ಮ ದೇವಸ್ಥಾನಗಳು

ಅಮೆರಿಕಾದಲ್ಲಿ ನವರಾತ್ರಿ ಹಬ್ಬದ ಪ್ರಯುಕ್ತ ಎರಡು ಮೂರು ಮನೆಗಳಲ್ಲಿ ನಮ್ಮನ್ನು ಕರೆದಿದ್ದರು. ಪೂಜಾಕಾರ್ಯಕ್ರಮಗಳ ಸಂಬಂಧವಾಗಿ ಹಾಡು ಭಜನೆಗಳನ್ನು ಮಾಡಲು ಒಂದು ಗುಂಪು ಬಂದಿತ್ತು. ಅದೂ ಎರಡು ಮೂರು ಗಂಟೆಗಳಕಾಲ ಹೇಳಿದ್ದನ್ನೇ ಹೇಳಿಕೊಂಡು ಭಜನೆ ಮಾಡುತ್ತಿದ್ದರು. ಮನೆಯವರು ತಿಳಿಸಿದ್ದ ಸಮಯಕ್ಕೆ ಒಂದು ಗಂಟೆ ತಡವಾಗಿ ಹೋದರೂ ಇನ್ನೆರಡು ಗಂಟೆ ಕಾಲ ಕಳೆಯುವುದು ಹಿಂಸೆಯಾಯಿತು. ಮನೆಯವರೆಲ್ಲ ಸಲೀಸಾಗಿ ಬಂದವರನ್ನು

ವಿಚಾರಿಸುತ್ತ ಓಡಾಡುತ್ತಿದ್ದರು. ಕೆಲವರು ಬೊಂಬೆಪಟವನ್ನು ಬಹಳ ಚನ್ನಾಗಿ ಜೋಡಿಸಿದ್ದರು.

ಈ ತರಹ ಭಜನೆಗಳನ್ನು ಮಾಡುವುದಕ್ಕಾಗಿಯೆ ಕೆಲವು ತಂಡಗಳಿವೆ ಎಂದು ತಿಳಿಯಬಂತು. ಅಳುವುದಕ್ಕೂ ಕೆಲವರಿದ್ದಾರೆ ಎಂದು ನಾನು ಕೇಳಿರಲಿಲ್ಲ! ಮನೆಯವರಿಗಿಂತ ಹೆಚ್ಚಾಗಿ ಬೇರೆಯವರು ಬಂದು ನಮ್ಮ ಮನೆಯಲ್ಲಿ ಅಳಬೇಕು ಅನ್ನುವುದು ಯಾವ ಸಂಪ್ರದಾಯವೋ ತಿಳಿಯದು.

ಇಲ್ಲಿಯು ದೇವಸ್ಥಾನಗಳಿಗೆ ಹೋಗಲು ಸ್ವಂತ ವಾಹನಗಳಿಲ್ಲದೆ ಪ್ರಯಾಣಮಾಡಲು ಸಾಧ್ಯವಿಲ್ಲ. ದೇವಾಲಯಗಳನ್ನು ದೂರದೂರ ಕಟ್ಟಿಸಿರುತ್ತಾರೆ. ವಾಹನಗಳನ್ನು ನಿಲ್ಲಿಸುವುದಕ್ಕೆ ದೊಡ್ಡ ಪ್ರಮಾಣದ ಜಾಗ ಬೇಕು. ನಾವು ಆಗಿನ ಕಾಲಕ್ಕೆ ನಾಲ್ಕೈದು ಮೈಲಿ ದೂರದ ದೇವಸ್ಥಾನಕ್ಕೂ ಕಾಲ್ನಡಿಗೆಯಲ್ಲೆ ಹೋಗುತ್ತಿದ್ದೆವು.

ಅಮೆರಿಕಾದ ದೇವಾಲಯಗಳಲ್ಲಿ ಊಟ, ತಿಂಡಿ ಬಹಳ ಸೊಗಸಾಗಿರುತ್ತೆ. ಆದರೆ ಹಣಕೊಡಬೇಕು! ಪ್ರಸಾದವನ್ನೇನೋ ಪುಗಸಟ್ಟೆಯಾಗಿ ಕೊಡುತ್ತಾರೆ. ಗಣೇಶ, ಬಾಲಾಜಿ ದೇವಸ್ಥಾನಗಳಲ್ಲಿ ದೋಸೆ, ಇಡ್ಲಿ, ವಡೆ ತುಂಬಾ ರುಚಿ, ಬನ್ನಿ ಹೋಗಿಬರೋಣ ಅನ್ನುವ ಮಾತನ್ನು ಅನೇಕರ ಬಾಯಿಂದ ಕೇಳಿದ್ದೇನೆ. ದೇವಸ್ಥಾನಕ್ಕೆ ಹೋಗಿ ಬರುವುದು ಭಕ್ತಿಯ ಕೆಲಸ ಅಲ್ಲ, ಭುಕ್ತಿಯ ಕೆಲಸ.

ಮೊನ್ನೆ ನನ್ನ ಬಾಲ್ಯಸ್ನೇಹಿತನೊಬ್ಬ ನಮ್ಮ ಮನೆಗೆ ಬಂದಿದ್ದ. ಗಣೇಶ, ಬಾಲಾಜಿ ದೇವಸ್ಥಾನಗಳಲ್ಲಿ ಲಡ್ಡು, ಸೋನ್‌ಪಪ್ಪಡಿ, ಕಾರಾಸೇವ್ ರುಚಿಯಾಗಿರುತ್ತೆ. ಆ ಪ್ರಸಾದಗಳನ್ನು ಆನ್‌ಲೈನ್ ಆರ್ಡರ್ ಮಾಡಿ ಮನೆಗೇ ತರಿಸಿಕೊಳ್ಳಬಹುದುಕಣೋ ಎಂದ!

ದೇವರನ್ನು ನೋಡಲಿಕ್ಕೆ ದೇವಸ್ಥಾನಕ್ಕೇ ಹೋಗಬೇಕು ನಮ್ಮ ಜನ್ಮ ಮುಗಿಯುವತನಕ ಅಂದರೆ ಹೇಗಾಗುತ್ತೆ. ದೇವರು ಪ್ರತಿಯೊಬ್ಬನಲ್ಲೂ ಇದಾನೆ ಅನ್ನುವ ವಾಕ್ಯವನ್ನು ಮಾತ್ರ ಪುರಾಣ ಪ್ರವಚನದಲ್ಲಿ ಪಠಿಸುವುದನ್ನು ಕೇಳಿದ್ದೇನೆ. ಹಾಗಿದ್ದಲ್ಲಿ ಆ ದೈವತ್ವವನ್ನು ಇನ್ನೊಬ್ಬರಲ್ಲೂ ಕಾಣುವುದು ಸಾಧ್ಯವಿರಬೇಕು.

65 ಸಪ್ತನಾರಾಯಣ ನಮೋ ನಮೋ

ನಮ್ಮ ಕಾಫೀಬೋರ್ಡಿನಲ್ಲಿ ಒಂದೇ ಹೆಸರಿನವರು ಐದಾರು ಜನ ಇದ್ದರು. ಇಬ್ಬರನ್ನು ಮೊದಲನೇ ಎರಡು ಅಕ್ಷರದಿಂದ ಸಂಬೋಧಿಸಬಹುದಾದ್ದರಿಂದ ಏನೂ ತೊಂದರೆ ಇರಲಿಲ್ಲ. ಅವರು ಹೆಚ್. ನಾರಾಯಣ್, ಹೆಚ್.ಎಂ. ನಾರಾಯಣ್.

ಇನ್ನಿಬ್ಬರದು ಹೆಸರಿನ ಕೊನೆಯಲ್ಲಿ ರಾವ್ ಮತ್ತು ಅಪ್ಪ ಸೇರಿದ್ದರಿಂದ ಅವರದೂ ತೊಂದರೆಯಿರಲಿಲ್ಲ. ಅವರು ಎಸ್. ನಾರಾಯಣ ರಾವ್ ಮತ್ತು ನಾರಾಯಣಪ್ಪ ಇನ್ನೊಬ್ಬರು ಅವರು ಮಾಡುತ್ತಿದ್ದ ಕೆಲಸ ಚಿತ್ರಗಳನ್ನು ಬರೆಯುವುದು. ಇಂಡಿಯನ್ ಕಾಫೀ ಮಾಸಪತ್ರಿಕೆಗೆ ಚಿತ್ರಗಳನ್ನು ಬರೆಯುತ್ತಿದ್ದರು. ಹಾಗಾಗಿ ಅವರನ್ನು ಆರ್ಟಿಸ್ಟ್ ನಾರಾಯಣ್ ಎಂದೇ ಹೇಳುತ್ತಿದ್ದರು. ಇನ್ನಿಬ್ಬರಲ್ಲಿ ಒಬ್ಬರು ವಿಪರೀತ ನಶ್ಯ ಹಾಕುತ್ತಿದ್ದುದರಿಂದ ಅವರನ್ನು ಮಾತ್ರ ನಶ್ಯ ನಾರಾಯಣ್ ಎಂದು ಕರೆಯುತ್ತಿದ್ದರು. ನಮಗೀಗ ಬೇಕಾಗಿರುವ ವ್ಯಕ್ತಿಯ ಹೆಸರು ಆರು ಬೆರಳ್ ನಾರಾಯಣ್, ಕಾರಣ ಅವರ ಒಂದು ಕೈಯ್ಯಲ್ಲಿ ಆರು ಬೆರಳುಗಳಿದ್ದುವು.

ಬೆಂಗಳೂರು ಕಾಫೀಬೋರ್ಡ್ ಆಫೀಸಿನಿಂದ ಒಂದು ಕ್ರಿಕೆಟ್ ತಂಡ ಚಿಕ್ಕಮಗಳೂರಿಗೆ ಬಂದಿತ್ತು. ಬೆಂಗಳೂರಿಗೆ ಅವರುಗಳು ವಾಪಸ್ ಹೊರಡುವ ದಿನ, ಒಂದು ಭೋಜನಕೂಟ ಏರ್ಪಡಿಸಿದ್ದೆವು. ಆಗೆಲ್ಲ (1955–56) ದೊಡ್ಡ ಹೊಟೇಲುಗಳು ಇರಲಿಲ್ಲ. ಎಲ್ಲರೂ ಚಾಪೆಯಮೇಲೆ ಕುಳಿತುಕೊಂಡು ಊಟಮಾಡುತ್ತಿದ್ದರು. ನಾನು ಮತ್ತು ಇನ್ನು ಮೂರು ಜನ ಸಹೋದ್ಯೋಗಿಗಳು ಸೇರಿಕೊಂಡು ಅಷ್ಟು ಜನಕ್ಕೂ ಅಡಿಗೆ ಮಾಡಿದ್ದೆವು. ಸಿಹಿ ಪದಾರ್ಥಕ್ಕಾಗಿ ಕೇಸರೀಭಾತ್. ನಾವು ಅವರಿಗೆಲ್ಲ ಬಡಿಸುವಾಗ, ನಾರಾಯಣ್ ಕೇಸರೀಭಾತ್ ಸ್ವಲ್ಪ ಬಡಿಸಿ ಎಂದರು. ನಾನು, ಇದು ಸ್ವಲ್ಪವೇ ಇದೆ. ನಿಮ್ಮ ಆ ದಪ್ಪ ಗಾಜಿನ ಕನ್ನಡಕವನ್ನು ತೆಗದುನೋಡಿ ನಿಮಗೇ ಗೊತ್ತಾಗುತ್ತೆ ಎಂದಾಗ, ಅವರ ಪಕ್ಕದಲ್ಲಿ ಕುಳಿತಿದ್ದ ನಮ್ಮ ಆಫೀಸರ್ಗೆ (ಸತೀಶ್‌ಚಂದರ್) ನಗು ತಡೆಯಲಾಗದೆ ಬಾಯಲ್ಲಿದ್ದ ತುತ್ತು ಹೊರಗಡೆ ಬಿದ್ದುಬಿಡ್ತು!

66. ಹುಟ್ಟುಹಬ್ಬದ ವಿಶೇಷತೆ.

ನ್ಯೂಜೆರ್ಸಿಯಲ್ಲಿರುವ (ಅಮೆರಿಕ) NO. 27 ಎನ್. ಜೂಲಿಯೆಟ್ ರಸ್ತೆ, ಇಸೆಲಿನ್ ಮನೆಯಲ್ಲಿ, ತಾರೀಖು 11 ರಂದು ನಮ್ಮ ಕೆಲವು ಹಿತಚಿಂತಕರು ಬುಕ್ಕಾಂಬುಧಿ ಕೃಷ್ಣಮೂರ್ತಿಯವರ 99ನೇ ಹುಟ್ಟುಹಬ್ಬವನ್ನು ಆಚರಿಸಿದರು. ಸುಮಾರು 35 ಜನ ಅತಿಥಿಗಳಿದ್ದರು. ಅವರಪೈಕಿ ಒಬ್ಬ ಮಹಿಳೆ ಪ್ರತಿಭಾ ಅಶ್ವಿನ್ ಎಂಬುವವರು ಒಂದು ಕಾಗದವನ್ನು ತಯಾರಿಸಿದ್ದರು. ಅದರಲ್ಲಿ ಎಷ್ಟು



ವರ್ಷಗಳು, ಎಷ್ಟು ತಿಂಗಳುಗಳು, ವಾರಗಳು, ದಿನಗಳು, ಗಂಟೆ, ನಿಮಿಷ, ಸೆಕೆಂಡುಗಳು ಕಾಣುತ್ತಿದ್ದುವು. ನೋಡಿ ಅದು ಹೇಗೆ ಕಾಣುತ್ತಿದೆ, ಅಮೆರಿಕಾದಲ್ಲಿ, ಹುಟ್ಟಿದಹಬ್ಬದ ವರ್ಷವನ್ನು, ಮುಗಿದ ವರ್ಷದಮೇಲೆ ನಿರ್ಧರಿಸುತ್ತಾರೆ. ಭಾರತದಲ್ಲಿ, ವರ್ಷತುಂಬಿ, ಮುಂದಿನ ವರ್ಷಕ್ಕೆ ಕಾಲಿಟ್ಟಿರುವ ವರ್ಷವನ್ನು ಹುಟ್ಟಿದಹಬ್ಬದ ಆಚರಣೆಗೆ ಪರಿಗಣಿಸುತ್ತಾರೆ.

ಅವರು ತಯಾರಿಸಿರುವ ಚಿತ್ರವನ್ನು ನೋಡಿದಾಗ ಒಂದು ವಿಶೇಷತೆ ಜ್ಞಾಪಕಕ್ಕೆ ಬಂತು. ಇಪ್ಪತ್ತೈದು ವರ್ಷಗಳ ಹಿಂದೆ, ನ್ಯೂಯಾರ್ಕಿನ ಮನ್ಹಾಟನ್ನಲ್ಲಿ ಒಂದು ದೊಡ್ಡ ಗಡಿಯಾರವನ್ನಿಟ್ಟಿದ್ದರು. ಅದು ಒಂದೊಂದು ಘಳಿಗೆಗೂ 2000ದ ವರ್ಷವನ್ನು ತಲುಪಲು ಎಷ್ಟು ದಿನಗಳು, ಎಷ್ಟು ಗಂಟೆಗಳು, ನಿಮಿಷಗಳು, ಸೆಕೆಂಡುಗಳು ಬೇಕು ಅನ್ನುವುದನ್ನು ತೋರಿಸುತ್ತಿತ್ತು! ಅನೇಕರು ಆರು ತಿಂಗಳು ಮುಂಚಿತವಾಗಿ ಹೊಟೇಲುಗಳಲ್ಲಿ ಕೊಠಡಿಗಳನ್ನು ಗೊತ್ತುಮಾಡಿದ್ದರು. ನೋಡಿ ಅವರ ಉತ್ಸಾಹವನ್ನು!

67. ಕಾಣೆಯಾಗಿದ್ದಾನೆ !

ಕಾಣೆಯಾಗಿದ್ದಾನೆ. ಯಾರಂತೆ, ಎಂಥಾ ಮಗು, ಗಂಡೋ ಹೆಣ್ಣೋ, ಸ್ವಲ್ಪ ನಿಧಾನವಾಗಿ ಕೇಳಿ, ಸುಮ್ಮನೆ ಬಡಬಡಿಸಬೇಡಿ. ನೀವೇನು ಪಂಚಾಂಗ ನೋಡಿ ಭವಿಷ್ಯ ಹೇಳ್ತೀರಾ. ಕಾಣೆಯಾಗಿರುವುದು ಯಾರು ಅಂತ ತಿಳೀಬೇಕು. ನೋಡಿ ಇಲ್ಲಿದೆ ಚೀಟಿ. ಕಾಣೆಯಾಗಿರುವುದು ಮಗುವೂ ಅಲ್ಲ ಮನುಷ್ಯರೂ ಅಲ್ಲ. ಮಗನೇ ಆಗಿದ್ದರೂ ಹೋಗಲಿಬಿಡಿ ಅವನು ಎಲ್ಲಾದರೂ ಹಾಳಾಗಲಿ ಅಂದುಬಿಡುತ್ತಿದ್ದರು. ಕಾಣೆಯಾಗಿರುವುದು ಬೆಕ್ಕು! ಇದು ಸಾಮಾನ್ಯವಾದ ವಿಷಯವೇ? ಅದೂ ಗಂಡು ಬೆಕ್ಕು. ಅದಕ್ಕೇ ಅದರ ಹೆಸರು ಬ್ರೌನ್ ಅಂತ, ಹೆಣ್ಣಾಗಿದ್ದರೆ ಬ್ರೌನೀ ಅಂತ ಕರೆಯುತ್ತಿದ್ದರು. ನಮ್ಮ ರಸ್ತೆಯಲ್ಲಿ ಏಳೆಂಟು ಕಂಬಗಳಮೇಲೆ ಅಂಟಿಸಿದ್ದಾರೆ ಈ ಚೀಟಿಯನ್ನು. ನಾನು ಅವರ ಮನೆಯ ಹತ್ತಿರ ಹೋಗುತ್ತಿದ್ದಾಗ ನನಗೂ ಒಂದು ಚೀಟಿಯನ್ನು ಕೊಟ್ಟರು.

ಅದರಲ್ಲಿ ಬರೆದಿದ್ದಾರೆ. ಅದರ ಬಣ್ಣ, ಉದ್ದ, ಅಗಲ, ಎತ್ತರ, ಅದರ ಮಾಲೀಕರು ಕಡೆಯಬಾರಿ ನೋಡಿದ್ದು ಯಾವ ದಿನ, ಎಷ್ಟು ಹೊತ್ತಿನಲ್ಲಿ. ಯಾರಾದರೂ ಅವನನ್ನು ನೋಡಿದರೆ. ಈ ಕೆಳಕಂಡ ನಂಬರಿಗೆ ದಯವಿಟ್ಟು ಫೋನ್ ಮಾಡಿ ಅಂತ. ಇದು ಸಾಮಾನ್ಯವಾಗಿ ಬೆಕ್ಕು ನಾಯಿಗಳಿಗೆ ಮಾತ್ರ ಅನ್ವಯಿಸುತ್ತೆ.

ನೆನ್ನೆ ನಮ್ಮ ಆಫೀಸಿಗೆ ಒಬ್ಬರು ಬಂದಿದ್ದರು. ಅವರು, ಅವರ ಹೆಂಡತಿ ಮತ್ತು ಮಗಳ್ಳು. ಒಂದು ಮಕ್ಕಳನ್ನು ಕೂರಿಸಿಕೊಂಡು ಹೋಗುವ ಸಣ್ಣ ಬುಟ್ಟಿಯ ಸಮೇತ. ಅವರೆಲ್ಲ ನನಗೆ ಪರಿಚಿತರು. ಅದು ಆ ಹುಡುಗಿಯ ಮಗು ಇರಬೇಕು ಎಂದು ತಿಳಿದಿದ್ದೆ. ಅವರು ನಮ್ಮ ಆಫೀಸರ್ ಜೊತೆ ಬಹಳಹೊತ್ತು ಮಾತನಾಡುತ್ತಿದ್ದರು. ವಾಪಸ್ ಹೊರಡುವಾಗ ನನಗೂ ಆ ಬುಟ್ಟಿಯನ್ನು ತೋರಿಸಿದರು. ಅದರಲ್ಲಿದ್ದುದು ಮಗುವಲ್ಲ, ಬೆಕ್ಕು!

68. ಸೀಮಂತದಲ್ಲಿ ನಾನು ನರ್ತಿಸಿದೆ

ಸೀಮಂತ ಕಾರ್ಯಕ್ರಮ ಬಹಳ ಹಿಂದಿನಿಂದಲೂ, ಮುಖ್ಯವಾಗಿ ಕರ್ನಾಟಕದಲ್ಲಿ ಗರ್ಭಿಣಿಯಾದ ಹೆಂಗಸಿಗೆ ಅವಳ ಏಳನೇ ಅಥವಾ ಎಂಟನೇ ತಿಂಗಳಲ್ಲಿ ನಡೆಸುತ್ತಾರೆ. ಇದು ಹೆಚ್ಚಾಗಿ ಹೆಂಗಸರ ಕಾರ್ಯಕ್ರಮ. ಆ ದಿನ ಅವಳು ಹಸಿರುಬಣ್ಣದ ಸೀರೆಯನ್ನು ಉಟ್ಟಿರುತ್ತಾಳೆ. ಕೆಲವು ಮುತ್ತೈದೆಯರು ಆರತಿಮಾಡಿ ಅವಳಿಗೆ ಆಶೀರ್ವದಿಸುತ್ತಾರೆ. ತಂದೆತಾಯಿಯರು ಎಲ್ಲರಿಗೂ ಚಿಗುಳಿ, ತಂಬಿಟ್ಟು ಕೊಡುತ್ತಾರೆ.

ಅಮೆರಿಕಾದಲ್ಲೂ ಆ ತರಹ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಅನೇಕ ಸಂಸಾರದವರು (ಗಂಡ, ಹೆಂಡತಿ ಮತ್ತು ಮಕ್ಕಳು) ಬಂದಿದ್ದರು. ಗರ್ಭಿಣಿಯಾದ ಹೆಂಗಸನ್ನು ಕುರ್ಚಿಯಮೇಲೆ ಕೂರಿಸಿ, ಅವಳ ಸುತ್ತ ಮಕ್ಕಳಿಂದ ಹಾಡುಗಳು, ನೃತ್ಯ






ಏರ್ಪಡಿಸಿದ್ದರು. ಇದು ಎಲ್ಲರಿಗೂ ಆಕರ್ಷಣೆಯಾಗಿತ್ತು. ಕೊನೆಗೆ ಪ್ರತಿಯೊಬ್ಬರಿಗೂ ಬಿಸಿಯಾದ ಊಟದ ಏರ್ಪಾಡಿತ್ತು.

ಇನ್ನೊಂದು ಸೀಮಂತ. ಅದು ಮುಸ್ಲಿಮರದ್ದು, ಗರ್ಭಿಣಿಯಾದ ಹೆಂಗಸು ವಕೀಲಿವೃತ್ತಿಯಲ್ಲಿದ್ದಾಳೆ. ನಾವೆಲ್ಲರೂ ಒಂದೇ ಆಫೀಸ್ ಕೊಠಡಿಯಲ್ಲಿ ಕೆಲಸಮಾಡುತ್ತೇವೆ. ಹಾಗಾಗಿ ನಾವು ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದುದು. ಇದು ಅವಳ ಮೊದಲನೆ ಸೀಮಂತ. ರಾಯಲ್ ಅಲ್‌ಬರ್ಟ್ ಪ್ಯಾಲೇಸಿನಲ್ಲಿ ಕಾರ್ಯಕ್ರಮ. ಅನೇಕರನ್ನು ಕರೆದಿದ್ದರು. ಆಕೆ ಮತ್ತು ಅವಳ ಗಂಡ ಎಲ್ಲ ಅತಿಥಿಗಳನ್ನು ಆಹ್ವಾನಿಸಿದರು.

ಕೆಲವು ಸಾಂಸ್ಕೃತಿಕ ಚಟುವಟಿಕೆಗಳು, ಮ್ಯೂಸಿಕಲ್ ಚೇರ್, ನೃತ್ಯ ಏರ್ಪಾಡಾಗಿತ್ತು. ಕೆಲವರು ಟಿಶ್ಯೂಪೇಪರನ್ನು ತಲೆಗೆ ಪೇಟದಂತೆ ಸುತ್ತಿಕೊಂಡು ಅವರಮುಂದೆ ಮೆರವಣಿಗೆಯಂತೆ ಓಡಾಡಿದರು. ಮಕ್ಕಳಿಗೆ ಆಟಪಾಟಗಳಿದ್ದುವು. ನಂತರ ನೃತ್ಯ. ನನಗೂ ಹುಮ್ಮಸ್ ಬಂದು ಗರ್ಭಿಣಿಯಾದ ಹೆಂಗಸಿನ ಜೊತೆ ಕೆಲಸ ಮಾಡುವ ಇನ್ನಿಬ್ಬರು ಹೆಂಗಸರ ಜೊತೆ ಸ್ವಲ್ಪ ಹೊತ್ತು ನರ್ತನ ಮಾಡಿದೆ! ನಾವು ಮಾಡುವಂತೆ ಆರತಿ ಕಾರ್ಯಕ್ರಮ ಇರಲಿಲ್ಲ. ಊಟದ ಏರ್ಪಾಡು ಬಹಳ ಚೆನ್ನಾಗಿತ್ತು.

69. ಉದ್ದಿನವಡೆಗೆ ಸಲಕರಣೆ

ನಮ್ಮ ಕಾಫೀಬೋರ್ಡಿನಲ್ಲಿ ಕೆಲಸಮಾಡಿ. ನಿವೃತ್ತರಾದ ನಂತರ, ನಾರಾಯಣ ಐಯ್ಯಂಗಾರ್ ಎಂಬುವವರನ್ನು ತಿರುಪತಿ ದೇವಸ್ಥಾನದ ಕ್ಯಾಂಟೀನಿಗೆ ಎರಡು ವರ್ಷಗಳಮಟ್ಟಿಗೆ ಕೆಲಸದಮೇಲೆ ತೆಗೆದುಕೊಂಡರು. ಅವರು ಅಲ್ಲಿದ್ದಾಗ, ಉದ್ದಿನವಡೆ ಮಾಡುವುದಕ್ಕೆ ಒಂದು ಸಲಕರಣೆಯನ್ನು ಕಂಡುಹಿಡಿದಿದ್ದರು. ನೋಡಿ ಹೇಗಿದೆ ಆ ಸಲಕರಣೆ.

ಸುಮಾರು ಎರಡೂವರೆ ಅಡಿ ಚಚ್ಚೌಕದ ಟೇಬಲ್, ಸುತ್ತಲೂ ಮುಚ್ಚಿದೆ. ಮೇಲ್ಭಾಗದಲ್ಲಿ ಒಂದು ದೊಡ್ಡ ಬಾಣಲೆ. ಮಧ್ಯೆ ಹದಿನೈದು ಇಪ್ಪತ್ತು ತೂತುಗಳು ಅಕ್ಕಿ ಜರಡಿಯಹಾಗೆ. ಆ ತೂತುಗಳಿಗೆ ಸೇರಿದಂತೆ ಸಣ್ಣ ಕೊಳವೆಗಳನ್ನು ಕೆಳಭಾಗದವರೆಗೂ ಬಿಟ್ಟು ಅವು ಎಣ್ಣೆಯ ಡಬ್ಬಕ್ಕೆ ಸೇರಿವೆ. ಬಾಣಲೆಯೊಳಕ್ಕೆ ವಡೆಯ ಹಿಟ್ಟನ್ನು ಒಂದೊಂದಾಗಿ ಹಾಕಿ, ಸ್ವಿಚ್ ಹಾಕಿದರೆ ವಡೆಗಳು ಕಾದ ಎಣ್ಣೆಯೊಂದಿಗೆ ಸೇರಿ ಬರುವ ರಭಸಕ್ಕೆ ತಕತಕ ಕುಣಿಯುತ್ತಿರುತ್ತವೆ. ಅವು ಒಂದು ಹದಕ್ಕೆ ಬಂದನಂತರ ಸ್ವಿಚ್ ತೆಗೆದರೆ, ಎಣ್ಣೆಯೆಲ್ಲ ಕೆಳಕ್ಕೆ ಹೋಗಿ,



ಬಾಣಲೆಯಲ್ಲಿ ವಡೆಗಳು ಮಾತ್ರ ಇರುತ್ತವೆ. ಒಂದುಸಲಕ್ಕೆ ನೂರೈವತ್ತು ವಡೆಗಳನ್ನು ಮಾಡಬಹುದು.

ಅದಕ್ಕಾಗಿ ಆ ದೇವಸ್ಥಾನದವರು ಅವರಿಗೆ ಒಂದು ವಿಶೇಷ ಪಾರಿತೋಷಕವನ್ನು ಕೊಟ್ಟಿದ್ದರು.

70. ಮದುವೆ ಪದ್ಧತಿಗಳಲ್ಲಿ ಬದಲಾವಣೆ

ಮದುವೆ ಪದ್ಧತಿಗಳಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ನಾನು ನೋಡಿರುವಂತೆ, ನಮ್ಮ ಹಳ್ಳಿಯಾದ ಬುಕ್ಕಾಂಬುಧಿಯಲ್ಲೇ ಎರಡು ಮದುವೆಗಳು ಏಳು ದಿವಸಗಳು ನಡೆದುವು. ಒಂದು ದಿನಕ್ಕೆ ಒಂದೇ ಕಾರ್ಯಕ್ರಮ, ಊಟ, ಪ್ರತಿದಿನ.

ಕಾಲಕ್ರಮೇಣ ಮದುವೆ ಸಮಾರಂಭ ನಾಲ್ಕು ದಿವಸಕ್ಕೆ ಇಳಿಯಿತು. ಈಚೀಚಿನ ಮದುವೆಗಳಿಗೆ ಒಂದೇ ದಿನ ಸಾಕು ಎಲ್ಲ ಕಾರ್ಯಕ್ರಮಗಳೂ ಮುಗಿದು ಹೋಗುತ್ತವೆ. ಕೆಲವರಂತೂ ಮದುವೆ ಎರಡು ಗಂಟೆಗಳಲ್ಲಿ ಮುಗಿಯಬೇಕು ಎಂದು ಮೊದಲೇ ತಿಳಿಸಿಬಿಡುತ್ತಾರೆ.

ಹಿಂದೆಲ್ಲ, ಮದುವೆ ನಿಷ್ಕರ್ಷೆ ಮಾಡುವುದಕ್ಕೆ ಮುಂಚೆ ಹೆಣ್ಣು ಗಂಡಿನ ತಂದೆತಾಯಿಗಳು ಭೇಟಿಯಾಗಿ ಅವರ ಜಾತಕಗಳನ್ನು ಶಾಸ್ತ್ರಿಗಳಿಗೆ ತೋರಿಸಿ ಅವು ಹೊಂದಾಣಿಕೆಯಾದಮೇಲೆ ಎರಡು ಸಂಸಾರದವರಿಗೂ ಸಮರ್ಪಕವಾಗಿ

ಕಂಡುಬಂದರೆ ಮಾತ್ರ ಮುಂದಿನ ಮಾತು. ಆ ಕಾಲ ಮುಗಿದುಹೋಗಿ ಬೇಕಾದಷ್ಟು ಬದಲಾವಣೆಗಳಾಗಿವೆ. ಹೆಣ್ಣಾಗಲಿ, ಗಂಡಾಗಲಿ, ತಂದೆ ತಾಯಿಗಳಿಗೆ ಆ ಅವಕಾಶವನ್ನೇ ಕೊಡುವುದಿಲ್ಲ. ಅವರವರೇ ಇಂಟರ್ನೆಟ್ ಮೂಲಕ ಸಂಪರ್ಕಿಸಿ ಮದುವೆ ನಿಶ್ಚಯಿಸುತ್ತಾರೆ. ಛತ್ರ ಹುಡುಕಬೇಕಾಗಿಲ್ಲ. ಪುರೋಹಿತರೂ ಬೇಕಿಲ್ಲ, ಸಂಪ್ರದಾಯಗಳು ಯಾವ ಪ್ರಕರಣವೂ ಇಲ್ಲ. ರಿಜಿಸ್ಟರ್ಡ್ ಮ್ಯಾರೇಜ್‌ಗಳು ಬಳಕೆಯಲ್ಲಿವೆ. ಈಗ ಲಿವಿಂಗ್ ಟುಗೆದರ್ ಅಂತ ಮದುವೆಯಿಲ್ಲದೆ ಸಂಸಾರ ಮಾಡುವ ಪದ್ದತಿ.

ಇನ್ನು ಮುಂದೆ ಹೋದ ತಿಂಗಳೇ ನಮ್ಮ ಮದುವೆಯಾಯಿತು ಎಂದು ಮಕ್ಕಳು ತಂದೆ ತಾಯಿಗಳಿಗೆ ಹೇಳಿದರೆ ಅದರಲ್ಲಿ ಆಶ್ಚರ್ಯವೇನಿಲ್ಲ! ಎಲ್ಲ ಕ್ಷೇತ್ರಗಳಲ್ಲೂ ಆಗಿರುವ ಬದಲಾವಣೆಯಂತೆ ಇಲ್ಲಿಯೂ ಆಗಿದೆ.

ರಾಜಣ್ಣ ಬಹಳ ವರ್ಷಗಳವರೆಗೆ ಮದುವೆಯಾಗಿರಲಿಲ್ಲ. ಎಲ್ಲರೂ ಅವನನ್ನು ಹಂಗಿಸಿ ಮಾತನಾಡುವವರೆ. ಒಂದು ದಿನ ಅವನೇ ಮುಂದು ಬಂದು ಹೇಳಿದ. ನಾನು ಮದುವೆ ಮಾಡಿಕೊಳ್ಳಲು ತೀರ್ಮಾನಿಸಿದ್ದೇನೆ ಎಂದು.

ಹೌದಾ, ಹಾಗಾದರೆ ಹುಡುಗಿ ಚಲೋ ಇರಬೇಕು. ಯಾರೋ ಆ ಐಶ್ವರ್ಯಾ ಹುಡುಗಿ. ರಾಜಕುಮಾರಿಯ ಜೊತೆ!

ಅಯ್ಯೋ ಹುಚ್ಚಾ, ನಿನಗೆ ತಲೆಯಲ್ಲಿ ಸ್ವಲ್ಪವಾದರೂ ಬುದ್ದಿ ಇದೆಯಾ, ರಾಜಕುಮಾರಿಯ ಜೊತೆ ಮದುವೆಯಾಗ್ತಿಯಾ?

ಅರ್ಧಕರ್ಧ ತೀರ್ಮಾನವಾಗಿದೆ ಆಗಲೇ. ಹೇಗೆ. ನಾನು ಒಪ್ಪಿದೀನಿಕಣೋ ಅಂದನಂತೆ! ಅವಳು ಒಪ್ಪಬೇಕಷ್ಟೇ ಅಂದ ಹಾಗೆ ಅವಳ ಹೆಸರು ರಾಜಕುಮಾರಿ.

ಮದುವೆ, ಮುಂಜಿ ಸಮಾರಂಭಗಳಲ್ಲಿ ಸಾಮಾನ್ಯವಾಗಿ ಕರೆಯೋಲೆಯನ್ನು ಅಚ್ಚುಹಾಕಿಸುತ್ತಿರಲಿಲ್ಲ. ಎಲ್ಲವೂ ಪೋಸ್ಟ್‌ಕಾರ್ಡ್ ವ್ಯವಹಾರದಲ್ಲೇ ಮುಗಿದು ಹೋಗುತ್ತಿತ್ತು. ಅದರಲ್ಲಿ ಬರೆದು ನಾಲ್ಕು ಮೂಲೆಗಳಿಗೂ ಕೈ ಬೆರಳಿನಿಂದ ತುಪ್ಪದ ಜಿಡ್ಡಿನಲ್ಲಿ ಕುಂಕುಮವನ್ನು ಸವರಿ ಅಂಚೆ ಇಲಾಖೆಗೆ ಕೊಟ್ಟು ಬರುತ್ತಿದ್ದರು. ಕಾರ್ಡಿನ ಅಂಚಿನಲ್ಲಿ ಕುಂಕುಮವನ್ನು ನೋಡಿದರೆ ಸಾಕು. ಅದು ಶುಭ ಸಮಾಚಾರದ್ದು ಎಂದು ತಿಳಿದುಕೊಳ್ಳುತ್ತಿದ್ದರು. ನಿಧನದ ಸಮಾಚಾರ ಇದ್ದ ಪೋಸ್ಟ್‌ಕಾರ್ಡ್‌ಗೆ ಅಂಚಿಗೆ ಕಪ್ಪು ಮಸಿ ಬಳಿಯುತ್ತಿದ್ದರು.

ಕಾಲಕ್ರಮೇಣ ಕರೆಯೋಲೆಗಳನ್ನು ಅಚ್ಚುಹಾಕಿಸುವ ಪದ್ದತಿ ಜಾರಿಗೆ ಬಂತು. ಮೇಲುಗಡೆ ಅವರವರ ಕುಲದೇವರ ಚಿತ್ರದೊಂದಿಗೆ ಶ್ರೀ ವೆಂಕಟೇಶ್ವರ

ಪ್ರಸನ್ನ, ನಂಜುಂಡೇಶ್ವರ ಪ್ರಸನ್ನ, ಭೈರವೇಶ್ವರ ಪ್ರಸನ್ನ ಎಂದು ಬರೆಸಿ. ನಂತರ ತಂದೆತಾಯಿಗಳ ಹೆಸರು, ಹುಡುಗ ಹುಡುಗಿಯ ಹೆಸರು, ಯಾವ ದಿನ ಮುಹೂರ್ತದ ಘಳಿಗೆ. ಛತ್ರದ ಹೆಸರು ಹಾಕಿಸುತ್ತಿದ್ದರು.

ಈಗೆಲ್ಲಾ ಹುಡುಗ ಹುಡುಗಿಯ ಹೆಸರು, ಮದುವೆ ಎರಡು ಗಂಟೆಗಳಲ್ಲಿ ಮುಗಿಯಬೇಕು. ರಿಸೆಪ್ಷನ್ ಮಾತ್ರ ಬಹಳ ಜೋರು. ಗಂಡು, ಹೆಣ್ಣು ಅವರವರ ಹೆಸರಿನಲ್ಲೇ ಕರೆಯೋಲೆಯನ್ನು ಅಚ್ಚುಹಾಕಿಸುತ್ತಾರೆ. ತಂದೆತಾಯಿಗಳು ಬೆಳಕಿಗೆ ಬರುವುದೇ ಇಲ್ಲ. ಇನ್ನು ಕೆಲವರು ಮದುವೆಯಾದ ನಂತರ ತಂದೆತಾಯಿಗಳಿಗೆ ವಿಷಯವನ್ನು ತಿಳಿಸುತ್ತಾರೆ. ಅದೇ ಒಂದು ಅದೃಷ್ಟ ಅಪ್ಪ ಅಮ್ಮನಿಗೆ!

ಶಾಸ್ತ್ರಿಗಳೊಬ್ಬರು ನನಗೆ ಬಹಳ ಪರಿಚಿತರಾದವರು. ಶಾಸ್ತ್ರಿಗಳು ಹೆಸರಿಗಷ್ಟೆ. ಅವರೇನು ಪೌರೋಹಿತ್ಯ ಮಾಡುತ್ತಿರಲಿಲ್ಲ. ಅವರಿಗೆ ಇಬ್ಬರು ಹೆಣ್ಣುಮಕ್ಕಳು. ಹಿರಿಯವಳು ಅಮೆರಿಕಾದಲ್ಲಿದ್ದಳು. ಅವಳಿಗೆ ಮದುವೆ ಗೊತ್ತಾಗಿತ್ತು. ಹುಡುಗ ಅಮೆರಿಕಾದವನು. ನಿಶ್ಚಿತಾರ್ಥ ಬೆಂಗಳೂರಿನಲ್ಲಿ ನಡೆಯಿತು. ಆ ಸಮಾರಂಭಕ್ಕೆ ಹೆಣ್ಣೂ ಇಲ್ಲ, ಗಂಡೂ ಇಲ್ಲ.. ಗಂಡಿನ ಕಡೆಯವರಾಗಿ ಒಬ್ಬರೂ ಇಲ್ಲ. ಶಾಸ್ತ್ರಿಗಳು ಸಮಾರಂಭಕ್ಕೆ ಆಹ್ವಾನ ಮಾಡಿದವರ ಸಂಖ್ಯೆ ಇನ್ನೂರಕ್ಕೂ ಮೀರಿತ್ತು!

ಮದುವೆ ನಡೆದದ್ದು ಅಮೆರಿಕಾದ ಒಂದು ಚರ್ಚಿನಲ್ಲಿ. ಮದುವೆಗೆ ಗೊತ್ತಾಗಿದ್ದ ಕಾಲ ಬೆಳಿಗ್ಗೆ 11 ಗಂಟೆ. ಹುಡುಗಿಯ ತಂದೆ ಐದು ನಿಮಿಷ ತಡವಾಗಿ ಹೋದರು. ಚರ್ಚ್ ಬಾಗಿಲು ಮುಚ್ಚಿತ್ತಂತೆ! ಮುಚ್ಚಿದ್ದ ಬಾಗಿಲನ್ನು ನೋಡಿಕೊಂಡು, ಮನೆಗೆ ಬಂದು ಮುಚ್ಚಿದ್ದ ಬಾಗಿಲನ್ನು ತೆರೆದು ಒಳಕ್ಕೆ ಬಂದು ಹಾಯಾಗಿ ಮಲಗಿದರಂತೆ!

71. ಯಾರನ್ನು ಏನೆಂದು ಕರೆಯುತ್ತಾರೆ

ತಂದೆಯನ್ನು ತಂದೆ ಎಂದು ಯಾರೂ ಕರೆಯುವುದಿಲ್ಲ. ಅಪ್ಪ, ಅಪ್ಪಾಜಿ, ಅಣ್ಣ, ಬಾವ, ಬಾವಯ್ಯ. ಕೆಲವರು ಅಣ್ಣ ಎಂದು ಕರೆಯುತ್ತಾರೆ. ತಾಯಿಯನ್ನು ಮಾತ್ರ ಅಮ್ಮ ಎಂದೇ ಹೇಳುತ್ತಾರೆ. ತಾಯಿಯನ್ನು ಜನನಿ, ಹೆತ್ತವ್ವ ಇತ್ಯಾದಿ ಕರೆಯುವುದಿಲ್ಲ. ಒಂದು ಮನೆಯಲ್ಲಿ ಅವರ ಮಗ ಅಮ್ಮಾಜಿ ಎನ್ನುತ್ತಿದ್ದ. ಅಕ್ಕ, ಅಣ್ಣನನ್ನು ಅದೇ ಪದದಿಂದಲೇ ಸಂಬೋಧಿಸುತ್ತಾರೆ. ಸೋದರ, ಸೋದರಿ ಒಡಹುಟ್ಟಿದವನೇ ಎಂಬುದೆಲ್ಲ. ಪುಸ್ತಕದ ಮಾತುಗಳು. ತಂಗಿ ಅಥವಾ ತಮ್ಮನನ್ನು ಅವರವರ ಹೆಸರಿನಿಂದ ಕರೆಯುವುದು ರೂಢಿ. ಪಿತಾಜಿ, ಪಿತಾಶ್ರಿ, ಮಾತೆ, ಮಾತಾಜಿ, ಇವು ಪೌರಾಣಿಕ ಭಾಷೆಯಾಗುತ್ತೆ. ನಾನು ಒಬ್ಬ ಸ್ನೇಹಿತರ ಮನೆಗೆ ಹೋದಾಗ, ಅವನು ತಾಯಿಯನ್ನು ಮಾತೆ ಎಂದು ಕರೆದ. ನನಗೆ ನಗು ಬರುವಂತಾದರೂ, ಕಷ್ಟಪಟ್ಟು ತಡೆದುಕೊಂಡೆ! ಅಜ್ಜ ತಾತಾ ಎಂದೂ ಅಜ್ಜಿ ತಾತಿ ಎಂದು ಕರೆಯುವುದನ್ನು

ಕಾಣುತ್ತೇವೆ. ತಂದೆ ಕಡೆ ತಾಯಿ ಕಡೆ ಎರಡು ಕಡೆ ಅಜ್ಜ ಅಜ್ಜಿ ಇದ್ದಾಗ ಅಪ್ಪಮ್ಮ ಅಪ್ಪಪ್ಪ, ಅಮ್ಮಪ್ಪ ಅಮ್ಮಮ್ಮ ಎಂದು ಕರೆಯಬಹುದು.

72. ಯಂತ್ರ–ಮಾನವ ಯಾರು ಮೇಲು ?

ಇದು ಒಂದು ಸಲಕರಣೆ. ಕಾಲುಚೀಲವನ್ನು ಹಾಕಿಕೊಳ್ಳುವುದಕ್ಕೆ. ಕಳೆದವಾರ ಮೇರೀಲ್ಯಾಂಡ್‌ಗೆ ಹೋಗಿದ್ದಾಗ ಒಬ್ಬರು ನನಗೆ ಕೊಟ್ಟರು. ಆ ನೀಲಿಬಣ್ಣದ ಕೊಳವೆಯಲ್ಲಿ ಕಾಲಿಟ್ಟು, ತುದಿಗೆ ಕಾಲುಚೀಲವನ್ನು ಸೆಕ್ಕಿಸಿ ಪಟ್ಟಿಯನ್ನು ಎಳೆದರೆ ಕಾಲುಚೀಲ ನನ್ನ ಮಂಡಿಯವರೆಗೂ ಸರಕ್ಕನೆ ಬರುತ್ತೆ! ಆದರೆ ನಾನು ಹೋದಕಡೆಗೆಲ್ಲ ಕೊಳವೆಯನ್ನು ತೆಗೆದುಕೊಂಡು ಹೋಗಬೇಕು. ಕೈಯಿಂದ ಕಾಲುಚೀಲವನ್ನು ಹಾಕಲಾರದಷ್ಟು ನಿಶ್ಯಕ್ತನಾಗಿಲ್ಲ ನಾನು!

ನಾನು ಒಬ್ಬ ಸ್ನೇಹಿತರ ಮನೆಗೆ ಹೋಗಿದ್ದೆ. ನಾವಿಬ್ಬರೂ ಮಾತನಾಡುತ್ತ ಕುಳಿತಿದ್ದಾಗ. ಅವರ ಮನೆಯಲ್ಲಿರುವ ಒಂದು ಸಲಕರಣೆ ಸಣ್ಣ ಆಮೆಯ ಆಕಾರದಲ್ಲಿದೆ. ಅದು ಮನೆಯನ್ನೆಲ್ಲ ಗುಡಿಸುತ್ತಿತ್ತು, ಸಂದಿಗೊಂದಿ ಮೊದಲ್ಗೊಂಡು! ಆ ಸಲಕರಣೆಯನ್ನು ಅನೇಕ ಸಂಸಾರದವರು ಇಟ್ಟುಕೊಂಡಿದ್ದಾರಂತ ತಿಳಿಯಬಂತು. ಕಸಬರಿಕೆ, ಬ್ರಷ್ ಯಾವುದೂ ಬೇಕಾಗಿಲ್ಲ. ಆ ಕೆಲಸಕ್ಕೂ ಯಂತ್ರವೇ ಬೇಕೆನ್ನುವುದಾದರೆ, ವ್ಯಾಯಾಮಕ್ಕೆ ಎಲ್ಲಿದೆ ಜಾಗ. ವಿಧವಿಧವಾದ ಸಲಕರಣೆಗಳು, ಯಂತ್ರಗಳು ಇಲ್ಲದಿದ್ದರೆ ನಾವು ಜೀವನ ಸಾಗಿಸುವುದಕ್ಕೆ ಸಾಧ್ಯವಿಲ್ಲ ಎನ್ನುವ ದುಃಸ್ಥಿತಿಗೆ ತಂದುಕೊಂಡಿದ್ದೇವೆ ನಮ್ಮ ಜೀವಮಾನವನ್ನು. ಪರಿಸ್ಥಿತಿ ಹೀಗಾದರೆ ನಾವು ಇನ್ನು ಯಾವ ಮಟ್ಟಕ್ಕೆ ಇಳಿಯಬಹುದು. ಊಹಿಸಲಾಗದ ಪ್ರಶ್ನೆ.

ಹೀಗೆಯೇ ಮಾತನಾಡುತ್ತ ಲೋಕಾಭಿರಾಮವಾಗಿ ಹೇಳುತಿದ್ದೆ. ಒಬ್ಬಾಕೆಯ ಜೊತೆ. ಅರಿಷಿನ, ಕುಂಕುಮ ಕೊಡುವ ಪದ್ಧತಿ ಹೇಗೆ ಬದಲಾಯಿಸಿದೆ ನೋಡಿ ಎಂದಾಗ. ಅವರು ಅದರಲ್ಲೇನೂ ಆಶ್ಚರ್ಯವಿಲ್ಲ. ಈಗ ಯಾರೂ ಹಣೆಗೆ ಕುಂಕುಮ ಇಡುವುದಿಲ್ಲ. ಅರಿಷಿನ ತಾನೇ ಯಾರು ಹಚ್ಚಿಕೊಳ್ಳುತ್ತಾರೆ. ಅದರ ಅಗತ್ಯವಿಲ್ಲ ಎಂದು ಅದನ್ನೇ ಸಮರ್ಥನೆ ಮಾಡಿದರು. ಇನ್ನು ಅವರೊಡನೆ ವಾದಮಾಡಿದರೆ, ಹೊಡದೇಬಿಡುತ್ತಿದ್ದರೋ ಏನೋ, ಅವರು ಕುಂಕುಮ ಹಚ್ಚಿಕೊಂಡರೆಷ್ಟು, ಬಿಟ್ಟರೆಷ್ಟು ನನಗೇನು ಅಂತ ತೆಪ್ಪಗಾದೆ.



ವಿನೋದ

73. ಲೂಸ್ (LOSE) ಮತ್ತು ಲೂಸ್ (LOOSE)

ನಾನು ಕಾಫೀಬೋರ್ಡಿನಲ್ಲಿ ಕೆಲಸ ಮಾಡುತ್ತಿದ್ದಾಗ ನಾಲ್ಕೈದು ಸಹೋದ್ಯೋಗಿಗಳು ಒಂದೇ ಇಲಾಖೆಯಲ್ಲಿದ್ದೆವು. ಕೆ.ವಿ. ಸುಬ್ಬರಾವ್, ಎಮ್.ಟಿ. ದೊರೆಸ್ವಾಮಿ, ಸಿ. ಕೇಶವಮೂರ್ತಿ ಮತ್ತು ನಾನು ಒಂದು ಕಡೆ ನಿಂತು ಮಾತನಾಡುತ್ತಿದ್ದೆವು. ಒಂದು ಟೇಬಲ್ ಆಚೆಗೆ ಇನ್ನೊಬ್ಬ ಸಹೋದ್ಯೋಗಿ ಕುಳಿತಿದ್ದರು.

ಅವರು 'ನಷ್ಟ' ಅನ್ನುವುದಕ್ಕೆ ಐಔಖಇ ಬರೆಯಬೇಕೇ ಅಥವಾ ಐಔಔಖಇ ಬರೆಯಬೇಕೇ ಎಂದು ಕೇಳಿದರು. ನಾನು ಐಔಖಇ ಬರೆಯಬೇಕು ಎಂದು ಹೇಳಿದೆ. ಅವರು ಸುಮ್ಮನಿರಲಾರದೆ ಐಔಔಖಇ ಬರೆದರೆ ತಪ್ಪಾಗುತ್ತದೆಯೇ ಎಂದರು. ಎಲ್ಲರೂ ಅವರ ಕಡೆ ಮುಖ ಮಾಡಿದರು.

ನಾನು ಅವರಿಗೆ ಗಂಭೀರವಾಗಿ ಹೇಳಿದೆ. ಅಂಥಹ ತಪ್ಪೇನೂ ಆಗುವುದಿಲ್ಲ ಎಂದು. ಎಲ್ಲರೂ ನನ್ನ ಕಡೆ ನೋಡಿದರು ನಂತರ ನನ್ನ ತಲೆಮುಟ್ಟಿಕೊಂಡು ಹೇಳಿದೆ ಇದು ಸ್ವಲ್ಪ ಐಔಔಖಇ ಆಗಿದ್ದರೆ ಅದನ್ನೇ ಬರೆಯಬಹುದು ಎಂದೆ.. ಸುಬ್ಬರಾವ್ ಖಿಛಿಣ ನ ಃಗಿಏ' ಎಂದರು!

74. ಇಸ್ಪೀಟ್ ಎಲೆಗಳ ಚಮತ್ಕಾರ

ಸಂಸ್ಕೃತ ಭಾಷೆಗೂ ಇಂಗ್ಲಿಷ್ ಭಾಷೆಗೂ ಹೇಗೆ ಹೊಂದಾಣಿಕೆ ಆಗಿದೆ ನೋಡಿ. ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ.

ಪಂಚ ನವ ದಶಮಸ್ಯ ರಾಜಾ ರಾಣಿ ದ್ವಿತೀಯ ಕಃ॥

ಚತುಃ ಪುಷ್ಪ ಗುಲಾಮಶ್ಚ ಏಕ ಸಪ್ತ ಅಷ್ಟಮಾ ತ್ರಿಹಿ ॥

ಪಂಚ



ನವ



ದಶಮಸ್ಯ



ರಾಜಾ



ರಾಣೀ



ದ್ವಿತೀಯಕಃ



ಚತು




ಷಷ್ಠಿ



ಗುಲಾಮಶ್ಚ





ಈಗ ಶ್ಲೋಕಕ್ಕೆ ಅನುಸಾರವಾಗಿ ಎಲೆಗಳನ್ನು ಒಂದರಮೇಲೊಂದರಂತೆ ಜೋಡಿಸಿ. ನಂತರ ಮೇಲಿನಿಂದ ಒಂದೊಂದಾಗಿ ಇಂಗ್ಲಿಷ್ ಭಾಷೆಯ ಅಂಕಗಳ ಅಕ್ಷರದಂತೆ ಕೆಳಭಾಗಕ್ಕೆ ಸೇರಿಸುತ್ತ ಬನ್ನಿ. ಔಓಇ ಮೂರು ಎಲೆಗಳಾದಮೇಲೆ ನಾಲ್ಕನೆಯದು 1 ಆಗಿರುತ್ತೆ. ನಂತರ ಖಿಘಔ ಮೂರು ಎಲೆಗಳನ್ನು ಕೆಳಕ್ಕೆ ಸೇರಿಸಿದರೆ ಎಂಟನೆಯ ಎಲೆ 2, ನಂತರ ಐದು ಎಲೆಗಳನ್ನು ಖಿಊಖಇಇ ಕೆಳಕ್ಕೆ ಸೇರಿಸಿದಾಗ ಮುಂದಿನದು 3. ಹೀಗೆಯೇ ಹದಿಮೂರು ಎಲೆಗಳನ್ನು ಸೇರಿಸಿ. ನೀವೂ ಒಂದುಬಾರಿ ಪ್ರಯತ್ನಿಸಿ. ಸಂಸ್ಕೃತಕ್ಕೂ ಇಂಗ್ಲಿಷ್ ಭಾಷೆಗೂ ಹೊಂದಾಣಿಕೆಯಾಗಿರುವುದು ಗೊತ್ತಾಗುತ್ತೆ.

ಈ ಶ್ಲೋಕವನ್ನು ರಚಿಸಿದವರು ಚಂದ್ರಶೇಖರ್, ಅವರು ಅಡಿಗೆ ಭಟ್ಟರು. ಶೃಂಗೇರಿಯಿಂದ (ಕರ್ನಾಟಕ) ಬಂದು ಬೆಂಗಳೂರಿನಲ್ಲಿ ವಾಸವಾಗಿದ್ದರು. ನಮ್ಮ ಮನೆಯ ಎಲ್ಲ ಸಮಾರಂಭಗಳಲ್ಲೂ ಅವರದೇ ಅಡಿಗೆ. ಒಂದು ಬಾರಿ ಅವರನ್ನು ತರೀಕೆರೆಗೂ ಕರೆದುಕೊಂಡು ಹೋಗಿದ್ದೆ, ನನ್ನ ತಂಗಿಯ ಮಗಳು ಗಂಗಮ್ಮನ ಮದುವೆಗೆ. ಅವರನ್ನು ನಾನು ಮರೆಯಲು ಅಸಾಧ್ಯ.

75. ಸುಲಭ ಚಿಕಿತ್ಸೆ – ಸೂಕ್ತ ಪರಿಹಾರ?

ಒಬ್ಬ ಸ್ವಲ್ಪ ವಯಸ್ಸಾದವನೇ ಅನ್ನಿ. ಡಾಕ್ಟರ್ ಆಫೀಸಿಗೆ ಹೋಗಿ ಕುಳಿತಿದ್ದನಂತೆ. ನಂತರ ಗೊತ್ತಾಯಿತು ಅವನಿಗೆ ಅಲ್ಲಿಗೆ ಏಕೆ ಬಂದಿದ್ದಾನೆಂತ. ಅಷ್ಟರಲ್ಲೇ ಡಾಕ್ಟರ್ ಬಂದರು. ಏನಾಗಿದೆ ನಿನಗೆ ಎಂದು ಕೇಳಿದಾಗ, ಅವನು ಎರಡು ನಿಮಿಷ ಬಿಟ್ಟು ಹೇಳಿದ, ನನಗೆ ಈಚೀಚೆಗೆ ಮರವು ಜಾಸ್ತಿಯಾಗಿದೆ ಎಂದು ತಿಳಿಸಿದ. ಏನೂ ಯೋಚನೆ ಮಾಡಬೇಕಾಗಿಲ್ಲ. ಅನೇಕ ತಜ್ಞರು ಪ್ರಯೋಗಗಳನ್ನು ನಡೆಸಿ, ಒಂದು ಸಿದ್ಧೌಷಧವನ್ನು ತಯಾರಿಸಿದ್ದಾರೆ. ಬಹಳ ಜನಗಳಿಗೆ ಅದರಿಂದ ಗುಣವಾಗಿದೆ ಎಂದರು.

ಹಾಗಾದರೆ ಅದನ್ನೇ ಕೊಟ್ಟುಬಿಡಿ ಡಾಕ್ಟರೆ ಎಂದ. ಹೇಗಾದರಾಗಲಿ ಅದರ ಬಾಬತ್ತು ಹಣವನ್ನು ಮೊದಲು ಕೊಡು, ನಂತರ ಔಷಧಿ ಕೊಡುತ್ತೇನೆ ಎಂದರಂತೆ ಡಾಕ್ಟರು!

ರಮಾಬಾಯಿ ನಮ್ಮ ಮನೆಯ ಹಿಂದಿನ ರಸ್ತೆಯಲ್ಲಿ ಇದೆ ಅವರ ಮನೆ. ಅವರು ಮಾತನಾಡುವುದಕ್ಕೆ ಶುರು ಮಾಡಿದರೆ ಅದಕ್ಕೆ ನಿಲ್ಲುವ ಸೂಚನೆಯೇ ಇರುವುದಿಲ್ಲ. ನಮ್ಮಗಳ ಜೊತೆ ಮಾತ್ರವಲ್ಲ. ಅವರ ಗಂಡನ ಜೊತೆಯೂ ಹಾಗೇ ಅಂತ. ಅಕ್ಕಪಕ್ಕದವರೆಲ್ಲ ಹೇಳಿದರು. ಆಕೆಯ ಗಂಡ ನಿದ್ರೆಯಲ್ಲಿದ್ದಾಗಲೂ ಏನಾದರೂ ಮಾತನಾಡುತ್ತಾರಂತೆ.

ಆಕೆ ಅವರಿಗೆ ಪರಿಚಿತರಾಗಿದ್ದ ಡಾಕ್ಟರ್ ಬಳಿಗೆ ಹೋಗಿ ಹೇಳಿದರಂತೆ. ನಮ್ಮ ಯಜಮಾನರು ನಿದ್ರೆಮಾಡುತ್ತಿರುವಾಗಲೂ ಸುಮ್ಮನೆ ಬಡಬಡಾ ಮಾತನಾಡುತ್ತಲೇ ಇರುತ್ತಾರೆ. ಹಾಗಾಗಿ ನನಗೆ ನಿದ್ರೆಯಿಲ್ಲ, ಏನು ಮಾಡಬೇಕು ಹೇಳಿ ಎಂದರಂತೆ.

ಡಾಕ್ಟರು ಇದು ಔಷಧಿಯಿಂದ ಸರಿಹೋಗುವುದಿಲ್ಲ. ಅದಕ್ಕಾಗಿ ನೀವೇನೂ ಹಣ ಖರ್ಚು ಮಾಡಬೇಕಾಗಿಲ್ಲ. ಹಗಲುಹೊತ್ತಿನಲ್ಲಿ ಅವರಿಗೆ ಮಾತನಾಡುವುದಕ್ಕೆ ಸ್ವಲ್ಪ ಸಮಯಕೊಡಿ, ಎಲ್ಲವೂ ಸರಿಹೋಗುತ್ತೆ ಎಂದು ಹೇಳಿಕಳಿಸಿದರಂತೆ!

ಮಯೂರಿ ಕ್ಲಬ್ಬಿನಿಂದ ಹಿಂತಿರುಗುವಾಗ ಬುಸುಗುಟ್ಟಿಕೊಂಡೇ ಬಂದಳು. ಗಂಡ ಸೇತೂರಾಮ್ ಬಾಗಿಲಲ್ಲೇ ನಿಂತಿದ್ದರು. ಏನೇ ಸಮಾಚಾರ. ಯಾಕೆ ಎನಾಗಿದೆ. ಏನೂ ಆಗಿಲ್ಲ. ಮೊದಲು ಆ ಹೊಸ ಡ್ರೈವರನ್ನು ಕೆಲಸದಿಂದ ತೆಗೆದುಹಾಕಿ. ಈ ದಿನ ನಾನು ಕ್ಲಬ್ಬಿನಿಂದ ಬರುವಾಗ ಮೂರುಸಲ ನನ್ನನ್ನು ಕೊಂದೇಬಿಡುತ್ತಿದ್ದ ಎಂದಳು.

ಸೇತೂರಾಮ್ ಸಮಾಧಾನದಿಂದಲೇ ಹೇಳಿದರು. ಹಾಗೆಲ್ಲ ಆತುರಪಡಬೇಡ. ಅವನಿಗೆ ಇನ್ನೊಂದು ಅವಕಾಶ ಕೊಟ್ಟುನೋಡೋಣ ಎಂದರಂತೆ!

76. ಸುಳ್ಳು ಪ್ರಕಟಣೆಗಳಿಗೆ ಬಲಿಯಾಗಬೇಡಿ!

ಒಬ್ಬ ವ್ಯಾಪಾರಿ ಪತ್ರಿಕೆಗಳಲ್ಲಿ ವಿಶೇಷಸುದ್ದಿ ಎಂದು ಹೇಳಿ ಪ್ರಕಟಣೆ ಕೊಟ್ಟಿದ್ದನಂತೆ. ಇನ್ವಿಸಿಬ್ಲಿಯೊ ಎಂಬ ಹೊಸ ಮಾದರಿಯ ಬಟ್ಟೆ ಬಂದಿದೆ. ಇದನ್ನು ಧರಿಸಿದಾಗ ನಿಮ್ಮನ್ನು ಯಾರೂ ಗುರ್ತಿಸುವುದಿಲ್ಲ, ಆದರೆ ನೀವು ಯಾರನ್ನು ಬೇಕಾದರೂ ನೋಡಬಹುದು. ಎಲ್ಲಾ ಪೊಲೀಸ್ ಇಲಾಖೆಗಳಲ್ಲೂ ಮತ್ತು ಮುಖ್ಯ ಗುಪ್ತಚಾರ ಇಲಾಖೆಗಳಲ್ಲೂ ಉಪಯೋಗಿಸುತ್ತಿದ್ದಾರೆ. ಕೇವಲ ಇನ್ನೂರು ರುಪಾಯಿ

ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿದರೆ ಸಾಕು, ಹದಿನೈದು ದಿವಸದೊಳಗೆ ನಿಮ್ಮ ಮನೆಗೆ ತಲುಪುವಂತೆ ಏರ್ಪಾಡುಮಾಡುತ್ತೇವೆ ಎಂದಿತ್ತು ಆ ಸುದ್ದಿಪ್ರಕಟಣೆಯಲ್ಲಿ.

ಅದನ್ನು ನೋಡಿದ್ದೇ ನೋಡಿದ್ದು. ಹುಚ್ಚು ಜನ ಒಬ್ಬೊಬ್ಬರಾಗಿ ಹಣ ಕಳುಹಿಸಲು ಶುರುಮಾಡಿದರು. ಕೇವಲ ಕೆಲವು ಮಂದಿಯಲ್ಲ, ಸಾವಿರಾರು ಜನ. ಎರಡೇ ವಾರದಲ್ಲಿ ಪ್ರತಿಯೊಬ್ಬರ ಮನೆಯ ಬಾಗಿಲ ಮುಂದೆ ಒಂದು ರೊಟ್ಟಿನ ಡಬ್ಬ. ತೆಗೆದು ನೋಡಿದರೆ, ಒಳಗಡೆ ಒಂದು ಬುರ್ಖಾ!

77. ಕಾಂಪೌಂಡ್ ಎಷ್ಟುಸಲ ಹಾರಬಹುದು?

ಕಾಲೇಜಿಗೆ ಸೇರುವದಿನ ಪ್ರತಿಯೊಬ್ಬ ಹುಡುಗ, ಹುಡುಗಿಯರಿಗೂ ಸಡಗರ, ಅವರವರ ತಂದೆ ತಾಯಿಯರಿಗೂ ಅಷ್ಟೇ ಕುತೂಹಲ. ಕಾಲೇಜ್ ಪ್ರಿನ್ಸಿಪಾಲರು ಧ್ವನಿವರ್ಧಕದಲ್ಲಿ ಹೇಳುತ್ತಿದ್ದರು, ಯಾರು ಯಾರಿಗೆ ಸೀಟ್ ಸಿಕ್ಕಿದೆ ಎಂದು. ಅವಕಾಶ ಸಿಕ್ಕವರೆಲ್ಲ ಒಂದುಕಡೆ ನೆರೆದರು. ಮನೆಯಿಂದ ಕಾಲೇಜಿಗೆ ಬರುವ ಅನುಕೂಲ ಇಲ್ಲದವರು, ಹಾಸ್ಟೆಲ್‌ನಲ್ಲಿರಲು ಕಾಲೇಜ್ ಸಹಾಯ ಒದಗಿಸಿತು. ಹುಡುಗಿಯರಿಗೇ ಪ್ರತ್ಯೇಕ ಹಾಸ್ಟೆಲ್, ಹುಡುಗರಿಗೇ ಬೇರೆ. ಎರಡು ಹಾಸ್ಟೆಲ್‌ಗಳೂ ಅಕ್ಕಪಕ್ಕದಲ್ಲಿದ್ದುವು. ಮಧ್ಯೆ ಒಂದು ಕಾಂಪೌಂಡ್.

ಮಾರನೆಯದಿನ, ಪ್ರಿನ್ಸಿಪಾಲರು ಎಲ್ಲರನ್ನೂ ಕರೆಸಿ, ಕಾಲೇಜ್ ನಿಯಮಗಳನ್ನು ವಿವರಿಸಿದರು. ನಿಯಮಗಳನ್ನು ಪಾಲಿಸದವರಿಗೆ ಶಿಕ್ಷೆ. ಮುಖ್ಯವಾಗಿ ಹುಡುಗರಿಗೆ. ನಿಮ್ಮ ಪಕ್ಕದ ಹಾಸ್ಟೆಲ್ ಹುಡುಗಿಯರದು. ಯಾರೂ ಕಾಂಪೌಂಡ್ ದಾಟಬಾರದು. ಯಾರಾದರೂ ಒಂದುಸಲ ದಾಟಿದರೆ, ಐವತ್ತು ರುಪಾಯಿ ದಂಡ, ಎರಡುಸಲ ದಾಟಿದರೆ ನೂರು ರುಪಾಯಿ ದಂಡ ಎಂದು ಎಚ್ಚರಿಕೆ ಕೊಟ್ಟರು, ಕಾಲೇಜ್ ಪ್ರಿನ್ಸಿಪಾಲ್.

ಒಬ್ಬ ಹುಡುಗ ಎದ್ದುನಿಂತುಕೊಂಡು ಕೇಳಿದನಂತೆ. ಒಂದು ಟರ್ಮ್ ಪೂರ ದಾಟಿದರೆ ಎಷ್ಟು ದಂಡ ಕೊಡಬೇಕಾಗುತ್ತೆ ಸರ್ ಎಂದು!

78. ಭೂಲೋಕಕ್ಕೆ ದೇವರುಗಳ ಪ್ರಯಾಣ

ಒಂದುಬಾರಿ ಹೆಣ್ಣು ದೇವರುಗಳೂ. ಗಂಡು ದೇವರುಗಳೂ ಭೂಲೋಕಕ್ಕೆ ಪ್ರಯಾಣ ಮಾಡಿ ಬರಲು ತೀರ್ಮಾನಿಸಿದರಂತೆ. ಅದರ ಪ್ರಕಾರ ಹೆಣ್ಣು ದೇವರುಗಳಿಗೇ ಪ್ರಥಮ ಸ್ಥಾನ ಸಿಕ್ಕಿದೆಯೆಂದು ತಿಳಿಯಬಂತು. ಆ ನಿಯಮದಂತೆ, ಲಕ್ಷ್ಮಿ, ಪಾರ್ವತಿ ಮತ್ತು ಸರಸ್ವತಿ ಭೂಮಿಯ ಮೇಲೆ ಬಂದಿಳಿದರು. ಎಲ್ಲರೂ

ಒಂದುಕಡೆ ಸೇರಿ ಮಾತುಕತೆ ಆರಂಭಿಸಿದರು. ಎಲ್ಲರೂ ತಮ್ಮತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಲು ಸನ್ನದ್ಧರಾದರು.

ಮೊದಲನೆಯ ಹೇಳಿಕೆ ಲಕ್ಷ್ಮಿಗೆ ಮೀಸಲಾಗಿತ್ತು. ಅವಳ ತೊಂದರೆ ಏನೆಂದರೆ, 'ನೀವೇ ನೋಡಿ. ನನಗೆ ದನಕಾಯುವ ಕೆಲಸ ಕೊಟ್ಟರೂ ಸಂತೋಷದಿಂದ ಮಾಡುತ್ತೇನೆ. ಕೆಲಸ ಕಾರ್ಯಗಳಲ್ಲಿ ನನಗೇನೂ ತಾರತಮ್ಯವಿಲ್ಲ. ಯಾವ ಕೆಲಸವನ್ನಾದರೂ ಶ್ರದ್ಧೆಯಿಂದ ಇನ್ನೊಬ್ಬರ ಮನ ಒಪ್ಪುವಂತೆ ಮಾಡಬೇಕೆನ್ನುವುದೇ ನನ್ನ ಧ್ಯೇಯ. ಹಾಗೆಂದ ಮಾತ್ರಕ್ಕೆ ಹಗಲು ರಾತ್ರಿ ಬಿಡುವಿಲ್ಲದಂತೆ ವಿಷ್ಣುವಿನ ಕಾಲನ್ನು ಒತ್ತಿಒತ್ತಿ, ಬೆರಳುಗಳೆಲ್ಲ ಊದಿವೆ. ಇಲ್ಲಿ ಬಂದನಂತರ ಯಾವುದಾದರೂ ಔಷಧಿ ದೊರೆಯಬಹುದೆಂದಿದ್ದೆ. ನೆನ್ನೆ ಯಾವುದೋ ಆಯಿಂಟ್‌ಮೆಂಟ್ ಕೊಟ್ಟರು. ಇಲ್ಲಿಯವರೆಗೂ ಏನೂ ಗುಣ ಕಂಡುಬಂದಿಲ್ಲ. ಒಂದೆರಡು ದಿನ ಇದ್ದು ವಾಪಸ್ ಹೊರಡುತ್ತೇನೆ' ಎಂದಳು.

ಅಷ್ಟರಲ್ಲೇ ಪಾರ್ವತಿಯ ರೋದನ ಶುರುವಾಯಿತು. 'ನಾನು ನಮ್ಮ ಯಜಮಾನರಿಗೆ ಹೇಳಿದ್ದೇನೆ ಎಷ್ಟೋಸಲ. ನೀವು ಮನೆಯಲ್ಲಿ ಹೇಗೆ ಬೇಕಾದರೂ ಇರಿ. ಚರ್ಮಾಂಬರಧಾರಿಯೇ ಆಗಿರಿ, ನನ್ನದೇನೂ ಅಭ್ಯಂತರವಿಲ್ಲ. ಆದರೆ ಹೊರಗಡೆ ಬಂದಾಗಲಾದರೂ, ಒಳ್ಳೆಯ ಉಡುಪನ್ನು ಧರಿಸಬಾರದೇ ಅಂತ. ನನ್ನ ಮಾತನ್ನು ಕೇಳಿಯೂ ಕೇಳದಂತೆ ಹೋಗಿಬಿಡುತ್ತಾರೆ. ನನಗಂತೂ ಅವರಜೊತೆ ಯಾವುದಾದರೂ ರಿಸೆಪ್‌ಷನ್‌ಗೆ ಹೋಗಬೇಕೆಂದರೆ ನಾಚಿಕೆಯಾಗುತ್ತೆ. ಅದಕ್ಕೇ ನಾಲ್ಕಾರು ದಿನ ಹಾಯಾಗಿರಬೇಕು ಅಂತ ಬಂದೆ' ಎಂದಳು.

ಸರಸ್ವತಿ ಅವಳದ್ದೇ ಹೆಚ್ಚಿನ ಸಮಸ್ಯೆ ಎಂದು ತಿಳಿದುಕೊಂಡಿದ್ದಳು. ಆದರೆ ಅವರಿಬ್ಬರ ಪರಿಸ್ಥಿತಿಯನ್ನು ಕೇಳಿಸಿಕೊಂಡಾಗ ತನ್ನದೇನೂ ಮಹತ್ವದ್ದಲ್ಲ ಎಂದು ಅರಿವಾಯಿತು. ಅದರೂ ಅವಳ ಕಷ್ಟವನ್ನು ಅವರೊಂದಿಗೆ ಹೇಳಿಕೊಂಡರೆ, ಮನಸ್ಸು ಕೊಂಚವಾದರೂ ಹಗುರವಾಗಬಹುದು ಎನಿಸಿತು.

ಅವಳು ಹೇಳಿದ್ದೇನೆಂದರೆ, 'ನಾನು ಇಲ್ಲಿಗೆ ಬರುವಾಗ, ಭೂಲೋಕದಲ್ಲಿ ಒಳ್ಳೆಯ ಮೇಧಾವಿಗಳೇ ಇರಬಹುದೆಂದು ನಂಬಿದ್ದೆ. ನನ್ನ ನಂಬಿಕೆ ಸುಳ್ಳಾಯಿತು. ಏನೋ ಏಳೆಂಟು ಜನ ದಡ್ಡರಿದ್ದರೆ ಅವರಿಗೆ ವಿದ್ಯೆ ಕಲಿಸುವುದು ಎಷ್ಟೂ ಆಯಾಸವಲ್ಲ. ಎಂಬ ಭ್ರಾಂತಿ ಮನಸ್ಸಿನಲ್ಲಿತ್ತು. ಇಲ್ಲಿಗೆ ಬಂದನಂತರ ಗೊತ್ತಾಯಿತು, ನೂರಕ್ಕೆ ತೊಂಬತ್ತೆಂಟು ಭಾಗ ದಡ್ಡರೇ ಇದ್ದಾರಂತ. ಅದೂ ಹೋಗಲಿ, ತಾವೆಲ್ಲಾ ಬಹಳ ಬುದ್ಧಿವಂತರು ಎಂದು ಕತ್ತು ಅಲ್ಲಾಡಿಸುತ್ತ ತಿರುಗಾಡಿಸುತ್ತಿರುವುದನ್ನು ನೋಡಿ ಬೇಜಾರಾಯಿತು. ಇಷ್ಟೊಂದು ಗುಂಪಿಗೆ ವಿದ್ಯಾದಾನ ಮಾಡುವುದು

ನನ್ನಿಂದ ಆಗದ ಕೆಲಸ. ಅವರ ಹಣೆಬರಹ, ಅದಷ್ಟು ಬೇಗ ಜಾಗ ಖಾಲಿಮಾಡಿ ಹೊರಡಬೇಕೆಂದಿದ್ದೇನೆ' ಎಂದಳು.

ಮಾರನೆಯ ದಿನವೇ ಮರುಪ್ರಯಾಣಕ್ಕೆ ಸಿದ್ಧಮಾಡಿಕೊಂಡರು. ಅವರು ಹೊರಡುವುದೇ ತಡ, ಗಂಡು ದೇವರುಗಳು ಹುಮ್ಮಸ್ಸಿನಿಂದ ಭೂಲೋಕ ಪ್ರಯಾಣಕ್ಕೆ ಸಿದ್ಧರಾದರು. ಗಂಡುದೇವರುಗಳೆಂದರೆ ಸಾಮಾನ್ಯವೇ, ಮೂರಲ್ಲ ಮುನ್ನೂರು ದೇವರುಗಳು! ಎಲ್ಲರೂ ಬಂದಮೇಲೆ ಒಂದು ದೊಡ್ಡ ಸಭಾಂಗಣದಲ್ಲಿ, ಸಮಾವೇಶ ಪ್ರಾರಂಭವಾಯಿತು. ಬಾಲಾಜಿಯೇ ಸಭೆಯ ಅಧ್ಯಕ್ಷರು. ಹೊರಬಾಗಿಲ ಎರಡು ಕಡೆಗೂ ಆಂಜನೇಯ ಮತ್ತು ಗರುಡ ಕಾವಲುಗಾರರು (Security Guards).

ಶ್ರೀರಾಮ, ಈಶ್ವರ, ಗಣಪತಿ, ನರಸಿಂಹ, ಚನ್ನಕೇಶವ, ಒಬ್ಬರೇ ಇಬ್ಬರೇ, ಎಲ್ಲರೂ ಅವರವರ ಸ್ಥಾನದಲ್ಲಿ ಆಸೀನರಾದ ಮೇಲೆ, ಅಧ್ಯಕ್ಷರು ಒಬ್ಬೊಬ್ಬರನ್ನಾಗಿ ಮಾತನಾಡಲು ಅನುಮತಿ ಕೊಟ್ಟರು. ಮೊದಲನೆಯವನೇ ಶ್ರೀರಾಮ. ಅವನ ಹೇಳಿಕೆಯಂತೆ, ಹಿಂದೆಲ್ಲ ರಾಮನವಮಿ ಎಂದರೆ, ಏಳು ದಿವಸಗಳ ಉತ್ಸವ ಸಮಾರಂಭ, ಭಜನೆ, ಉಪನ್ಯಾಸ. ರಾಮನವಮಿಯ ದಿನ ನೋಡಬೇಕು. ಆ ರಸಾಯನ, ಬೇಲದ ಹಣ್ಣಿನ ಪಾನಕ. ಪ್ರತಿಯೊಬ್ಬರ ಮನೆಯಲ್ಲೂ ಸಡಗರ. ನಾನೇ ಒಂದೆರಡು ಸಲ ಆ ಬುಕ್ಕಾಂಬುಧಿ ಗ್ರಾಮಕ್ಕೆ ಹೋದ ನೆನಪು. ಈಗ ರಸಾಯನವೂ ಇಲ್ಲ, ಪಾನಕವೂ ಇಲ್ಲ. ಊರೇ ಬೋಳು ಬೋಳಾಗಿದೆ ಎಂದು ಮುಖ ಮುಚ್ಚಿ ಕುಳಿತ' ಶ್ರೀರಾಮ.

ಗಣಪತಿ ಎರಡನೆಯವನು. 'ವರ್ಷದಲ್ಲಿ ಒಂದು ಬಾರಿಯಾದರೂ ಪೂಜಿಸುತ್ತಿದ್ದರು ನನ್ನನ್ನು ನಾಲೈದು ದಿವಸ ನನ್ನನ್ನು ಮನೆಯಲ್ಲಿಡುತ್ತಿದ್ದರು. ಈಗೆಲ್ಲ ಒಂದೇದಿನದ ಪೂಜೆ, ಆ ದಿನ ರಾತ್ರಿಯೇ ಮುಳುಗಿಸಿಬಿಡುತ್ತಾರೆ. ಆ ಕರಿಗಡುಬೋ, ನನಗೇ ಕಡಿಯುವುದಕ್ಕೆ ಕಷ್ಟ ಎಂದಮೇಲೆ, ಅದು ಹೇಗಿರಬೇಕು ಊಹಿಸಿ' ಎಂದ ಗಣಪತಿ.

ಮೂರನೆಯವನಾಗಿ ಕುಳಿತಿದ್ದ ನರಸಿಂಹದೇವರು ಎದ್ದುನಿಂತು, 'ಹಿಂದೆಲ್ಲ, ನರಸಿಂಹಜಯಂತಿಯ ದಿನ, ಪಾನಕ, ಕೋಸುಂಬರಿ, ಕಬ್ಬಿನಹಾಲು, ನೀರುಮಜ್ಜಿಗೆ, ಎಲ್ಲರನ್ನೂ ಮನೆಗೆ ಕರೆದು ಪೂಜೆಯಾದನಂತರ ಹಂಚುತ್ತಿದ್ದರು. ಈಗ ಬರೀ ನೀರು ಸಿಗುವುದೇ ಕಷ್ಟ. ಶೃಂಗೇರಿಯ (ಕರ್ನಾಟಕ) ಹತ್ತಿರ ಆನೆಗುಂದ ಎಂಬ ಅಗ್ರಹಾರವಿದೆ. ಮುಂಭಾಗದಲ್ಲಿರುವ ಅಶ್ವತ್ಥವೃಕ್ಷಕ್ಕೆ ಸುತ್ತಲೂ ಕಟ್ಟೆಹಾಕಿಸಿ,

ನರಸಿಂಹಜಯಂತಿಯ ದಿನ ದಾರಿಹೋಕರಿಗೆಲ್ಲ ಪಾನಕ. ನೀರುಮಜ್ಜಿಗೆ ಹಂಚಲು ಏರ್ಪಾಡು ಮಾಡಿದ್ದಾರೆಂದು ತಿಳಿಯಬಂತು' ಎಂದು ಹೇಳಿ ಕುಳಿತರು.

ಬೇಲೂರು ಚನ್ನಕೇಶವ ಇದುವರೆಗೂ ಸುಮ್ಮನೆ ಕೇಳುತ್ತ ಕುಳಿತಿದ್ದ. 'ನನ್ನ ಫಜೀತಿ ನೋಡಿ. ದೇವಾಲಯಕ್ಕೆ ನನ್ನನ್ನು ನೋಡುವುದಕ್ಕೆ ಎಂದು ಬಂದ ಜನ, ಮುಂಭಾಗದಲ್ಲಿರುವ ಶಿಲಾಬಾಲಿಕೆಗಳನ್ನು ನೋಡಿ ಅವುಗಳ ಫೋಟೊ ತೆಗೆದುಕೊಂಡು ಆನಂದಪಟ್ಟು ಹೊರಟುಹೋಗುತ್ತಾರೆ. ನನ್ನ ಗರ್ಭಗುಡಿಯ ಕಡೆ ತಿರುಗಿಯೂ ನೋಡುವುದಿಲ್ಲ.'

ಈಶ್ವರ ಜಕ್ಕನೆ ಎದ್ದುನಿಂತು ಹೇಳಿದ. ಕಾರ್ತಿಕ ಮಾಸದ ಸೋಮವಾರ ನನ್ನ ದೇವಾಲಯಗಳಲ್ಲಿ ಹಿಂದೆ ಕಡಲೆಕಾಳು, ಹೆಸರುಕಾಳು, ಬಿಸಿಉಸಲಿ, ಎಳ್ಳುಸೂಸಲು. ಹಂಚುತ್ತಿದ್ದರು ಆ ದೇವಾಲಯಗಳು ಇರುವುದನ್ನೇ ಮರೆತಿದೆ ಈಗಿನ ಜನ.

ಎಲ್ಲರ ದೂರು, ತಾಪತ್ರಯಗಳನ್ನು ಆಲಿಸುತ್ತ ಕುಳಿತಿದ್ದ ಅಧ್ಯಕ್ಷರು ಒಂದೇ ಉಸಿರಿನಲ್ಲಿ ಕೂಗಿದರು ಅಧ್ಯಕ್ಷರು ಹೇಳಿದರು 'ನಿಮ್ಮ ನಿಮ್ಮ ತೊಂದರೆಗಳನ್ನು ಹೇಳಿಕೊಳ್ಳುವುದರಲ್ಲಿ ನಿಮಗೆ ಆಸಕ್ತಿ ಇದೆಯೇ ಹೊರತು. ನನ್ನ ಕಷ್ಟಗಳನ್ನೇನಾದರೂ ವಿಚಾರಿಸಿದಿರಾ ಇಲ್ಲಿ ತನಕ ಎಂದರು. ಎಲ್ಲ ದೇವರುಗಳೂ ಅವಾಕ್ಕಾದರು. ಅಧ್ಯಕ್ಷರಿಗೂ ಇವುಗಳು ಬಾಧಿಸುತ್ತಿರಬೇಕಾದರೆ ನಮ್ಮದು ಯಾವ ಲೆಕ್ಕ. ಆಯಿತು ಅವರ ಕುಂದುಕೊರತೆಗಳನ್ನು ಕೇಳಿಯೇಬಿಡೋಣ ಎಂದು ಆಸನಗಳನ್ನು ಸರಿಪಡಿಸಿಕೊಂಡು ಆಲೈಸುತ್ತ ಕುಳಿತರು.

ಅಧ್ಯಕ್ಷರು ಮುಂದುವರಿಸಿ, ನನಗೆ ಅಯ್ಯೋ ಎನ್ನುವವರು ಯಾರೂ ಇಲ್ಲ. ಬೆಳಿಗ್ಗೆ ಮೂರು ಗಂಟೆಗೇ ಪೂಜೆ, ಪೂಜೆ ಎಂದು ಶುರುಮಾಡಿ ಬಿಡುತ್ತಾರೆ. ಅದು ಪುನಃ ರಾತ್ರಿ ಒಂಬತ್ತಕ್ಕೇ ಮುಕ್ತಾಯ. ನಾನು ನಿದ್ರೆ ಮಾಡುವುದು ಯಾವಾಗ. ನನಗೆ ವಿಶ್ರಾಂತಿ ಎಂಬುವುದೇ ಇಲ್ಲ. ಅದು ಹೋಗಲಿ, ನನ್ನ ಹುಂಡಿಗೆ ಯಾರೋ ಕೆಟ್ಟ ಜನ, ಒಂದು ಬೀಡಿಕಟ್ಟು, ಬಂದೂಕನ್ನು ಹಾಕಿದ್ದರಂತೆ!' ಇನ್ನೂ ಏನೇನೋ ಹೇಳುವುದರಲ್ಲಿದ್ದರು ಅಧ್ಯಕ್ಷರು. ಅಷ್ಟರಲ್ಲೇ ಬಾಗಿಲ ಕಾವಲುಗಾರರಾಗಿದ್ದ ಆಂಜನೇಯ, ಗರುಡ ಓಡೋಡುತ್ತ ಒಳಗೆ ಬಂದು, ವಿಗ್ರಹಗಳನ್ನು ಕದಿಯವ ಕಳ್ಳರ ಗುಂಪು ಬರುತ್ತಿದೆ. ತಕ್ಷಣ ಹೋಗಿ ನಿಮ್ಮ ನಿಮ್ಮ ಜಾಗಕ್ಕೆ ಸೇರಿಕೊಳ್ಳಿ ಎಂದು ಕೂಗಿದರು.

ದೇವರುಗಳ ಸಮಾವೇಶ ಮುಕ್ತಾಯವಾಯಿತು!

79. ಮದುವೆ ನಿಶ್ಚಿತಾರ್ಥ

ಇತ್ತೀಚೆಗೆ ಒದಗಿದ ಒಂದು ಸಂದರ್ಭ, ಮದುವೆ ನಿಶ್ಚಿತಾರ್ಥ, ಹುಡುಗ ಹುಡುಗಿ ಇಬ್ಬರೂ ಒಟ್ಟಿಗೆ ಕೆಲಸ ಮಾಡುತ್ತಿದ್ದಾರೆ. ಆದರೂ ಅಪ್ಪ ಅಮ್ಮಂದಿರ ಕಕುಲಾತಿ. ನಿಶ್ಚಿತಾರ್ಥ ಮಾಡಲೇಬೇಕೆಂದು. ಆ ಸಮಾರಂಭ ಮದುವೆಗಿಂತ ಜೋರಾಗಿತ್ತು.

ಒಂದು ತಮಾಷೆ ಏನೆಂದರೆ, ಹೆಣ್ಣಿನ ಮನೆಯವರು ಒಂದು ನಾಯಿಮರಿಯನ್ನು ಇಟ್ಟುಕೊಂಡಿದ್ದಾರೆ. ನಾಯಿಮರಿ ಬಹಳ ಮುದ್ದಾಗಿದೆ ನಿಜ. ಅದು ಹೆಣ್ಣಿನ ತಂದೆಯನ್ನು ಒಂದು ನಿಮಿಷವೂ ಬಿಟ್ಟಿರಲಿಲ್ಲ. ಯಾವಾಗಲೂ ಅದನ್ನು ಹೆಗಲಿನ ಮೇಲೆ ಕೂರಿಸಿಕೊಂಡೇ ಓಡಾಡುತ್ತಿದ್ದರು. ಎಲ್ಲ ಆಹ್ವಾನಿತರ ಜೊತೆಗೆ ಅದಕ್ಕೂ ಒಂದು ಕುರ್ಚಿ ಮೀಸಲಾಗಿತ್ತು. ಹೆಣ್ಣಿನ ತಂದೆ ಹಸೆಯ ಮೇಲೆ ಕೂರುವಾಗಲೂ ಅದನ್ನು ಪಕ್ಕದಲ್ಲೇ ಕೂರಿಸಿಕೊಂಡಿದ್ದರು! ಅದು ಅವರ ಅಭಿಮಾನ. ಶಾಸ್ತ್ರದಂತೆ ಮುತ್ತೈದೆಯರು ಆರತಿ ಎತ್ತಿದರು. ನಾಯಿಗೂ ಆರತಿಯಾಯಿತು. ನಾಯಿ ಹಣೆಲಿ. ಕುಂಕುಮ ಇರಲಿಲ್ಲ ಅಷ್ಟೆ. ಇಂದೊಂದು ಅಪರೂಪದ ಪ್ರಸಂಗ ಎನಿಸಿತು. ನಾಯಿಯನ್ನು ಎತ್ತಿಕೊಂಡಿದ್ದ. ಯಜಮಾನರ ಜೊತೆಯಲ್ಲಿ ಫೋಟೋ ತೆಗೆಸಿಕೊಂಡು ಹಸೆಮಣೆ ಮೇಲೆ ನಾಯಿಜೊತೆ ಆರತಿ ಮಾಡಿಸಿಕೊಂಡ ಸಮಾರಂಭ ಅದೇ ಮೊದಲು ಅದೇ ಕೊನೆ. ನೀವೇನಾದರೂ ಅಂತ ಸಮಾರಂಭ ನೋಡಿದ್ದೀರಾ?



ಜೀವನ

80. ದೇಹದಾನದ ಉಯಿಲು

ಒಬ್ಬ ವೈದ್ಯರು ಹೇಳಿದ್ದರಂತೆ ಒಬ್ಬಾತನಿಗೆ. ನಿಮಗೆ 84 ಆಯಿತು, 85. 86 ಆಯಿತು ಎಂದು. ಅದರಲ್ಲಿ ಏನು ಆಶ್ಚರ್ಯ, ಎಲ್ಲರಿಗೂ ವಯಸ್ಸು ಆಗಿಯೇ ಆಗುತ್ತೆ, ವಯಸ್ಸಾದವರಿಗೆಲ್ಲ ಯಾರೂ ಪ್ರಶಸ್ತಿಪತ್ರ ಅಥವಾ ಚಿನ್ನದಪದಕವನ್ನು ಕೊಡುವುದಿಲ್ಲ ಎಂದು. ಆ ಒಬ್ಬಾತ ಅವರು ಹೇಳಿದಮೇಲೂ ಬದುಕಿದ್ದಾನಂತೆ, ಪ್ರಶಸ್ತಿಪತ್ರವೂ ಇಲ್ಲ, ಪದಕವೂ ಇಲ್ಲ. ಬಹುಶಃ ಆ ವೈದ್ಯರ ದಿವ್ಯದೃಷ್ಟಿಗೆ ಮುಂಚೆಯೇ ಗೊತ್ತಾಗಿರಬಹುದು. ಆ ದಡ್ಡನಿಗೆ ಇನ್ನೂ ಒಂದು ಚಿಗುರಾಸೆ ಮನಸ್ಸಿನಲ್ಲಿ. ಇನ್ನೂ ನಾಲ್ಕೈದು ವರ್ಷ ಬದುಕಿದ್ದರೆ, ಪದಕ ಇಲ್ಲದೇ ಹೋದರೂ ಹೋಗಲಿ, ಪ್ರಶಸ್ತಿಪತ್ರ ಸಿಕ್ಕರೂ ಚಿಂತೆಯಿಲ್ಲ ಎಂಬ ಭ್ರಾಂತಿ. ಆದರೆ ಯಾವ ಹೊತ್ತಿಗೆ ಏನಾಗುತ್ತೋ ಯಾರುಬಲ್ಲರು. ಸಾಯುವಹೊತ್ತಿಗೆ ಪ್ರಶಸ್ತಿಪತ್ರ ಸಿಕ್ಕರೂ ಏನು ಪ್ರಯೋಜನ? ಏನಾದರಾಗಲಿ ಎಂದು, ಅವನ ಮರಣಾನಂತರ ಶರೀರವನ್ನು ವೈದ್ಯಕೀಯಶಾಲೆಗೆ ದಾನಮಾಡಬೇಕೆಂದು ಬರೆದುಕೊಟ್ಟನಂತೆ. ಈ ಕತೆಯನ್ನು ನನ್ನ ಬಾಲ್ಯಸ್ನೇಹಿತ ನನಗೆ ತಿಳಿಸಿದ ಅವನು ಇನ್ನೂ ಬದುಕಿದ್ದಾನೆ ಎಂದು!

ನನಗೆ ತಿಳಿದಂತೆ, ನನ್ನ ಸ್ನೇಹಿತರೊಬ್ಬರು ಸಿ. ದಿನಕರ್ ರಾವ್ ಎಪ್ಪತ್ತು ವರ್ಷಗಳಿಂದಲೂ ಪರಿಚಯ. ಟೆಕ್ಸಾಸ್ ಯೂನಿವರ್ಸಿಟಿಯಲ್ಲಿ ಪ್ರೊಫೆಸರ್ ಆಗಿ ನಿವೃತ್ತರಾಗಿದ್ದರು. ಅವರು ನನ್ನ ನಾಲ್ಕಾರು ಪುಸ್ತಕಗಳನ್ನು ಓದಿ ವಿಮರ್ಶೆ ಮಾಡಿದ್ದರು. ಅವರೂ ಕೂಡ ಮರಣಾನಂತರ, ದೇಹವನ್ನು ಮೆಡಿಕಲ್ ಕಾಲೇಜಿಗೆ ದಾನಮಾಡಬೇಕೆಂದು ಬರೆದುಕೊಟ್ಟಿದ್ದರಂತೆ. ಅವರ ಹೆಂಡತಿ ಜ್ಯೋತ್ಸ್ನಾ, ಗಂಡ ತೀರಿಕೊಂಡಮೇಲೆ ಅವರ ಶರೀರದ ಫೋಟೋ ನನಗೆ ಕಳುಹಿಸಿದ್ದರು. ಆ ದಿನ ಅವರ ಮಕ್ಕಳು, ಮೊಮ್ಮಕ್ಕಳು ಹಾಜರಿದ್ದರಂತೆ.

ಇನ್ನೊಬ್ಬ ನನ್ನ ಸ್ನೇಹಿತರು, ಸುಬ್ಬಲಕ್ಷ್ಮಿ ಅವರ ಹೆಸರು, ಕೋಲಾರದಲ್ಲಿ ವಾಸವಾಗಿದ್ದಾರೆ. ಅವರ ಅಣ್ಣ ಎಚ್. ಕೆ. ರಾಘವೇಂದ್ರ ನಲವತ್ತೈದು ವರ್ಷಗಳಿಂದ "ಕೋಲಾರ ಪತ್ರಿಕೆ' ಎಂಬ ಹೆಸರಿನಲ್ಲಿ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಅದರ ವಾರಪತ್ರಿಕೆಯಲ್ಲಿ ಸುಬ್ಬಲಕ್ಷ್ಮಿಯವರ ಲೇಖನಗಳೂ ಪ್ರಕಟವಾಗುತ್ತಿರುತ್ತೆ. ಅವರ ಅಕ್ಕ ಪ್ರೇಮಾ ನಿವೃತ್ತ ಕನ್ನಡ ಉಪನ್ಯಾಸಕಿಯಾಗಿದ್ದರು. ಅವರು ತೀರಿಹೋಗುವ ಮುಂಚೆಯೇ ಸತ್ತನಂತರ ಶರೀರವನ್ನು ದಾನವಾಗಿ ಕೊಡುವಂತೆ ಬರೆದುಕೊಟ್ಟಿದ್ದರಂತೆ.

ಇವುಗಳನ್ನೆಲ್ಲಾ ಕೇಳಿದಬಳಿಕ ನನ್ನ ಮನಸ್ಸು ಹಾತೊರೆಯಿತು. ನೂರರ ಹೊಸ್ತಿಲು ಮೆಟ್ಟಿದಾಗ ಯಾವ ಗಳಿಗೆಗೆ ಏನಾಗುತ್ತೋ ಯಾರುಬಲ್ಲರು. ನಾನೀಗ 100ರ ಹೊಸಲಿನಲ್ಲಿ ಕಾಲಿಟ್ಟಿದ್ದೇನೆ. ತಕ್ಷಣ ಬರೆದುಕೊಟ್ಟೇಬಿಟ್ಟೆ. ನನ್ನ ಪಾರ್ಥಿವ ಶರೀರವನ್ನು ಸುಟ್ಟು ಬೂದಿಯಾಗುವುದರ ಬದಲು. ಒಂದು ಮೆಡಿಕಲ್ ಕಾಲೇಜಿಗೆ ತಲುಪಿಸಬೇಕೆಂದು. ಸತ್ತಮೇಲೂ ನನ್ನ ಶರೀರದ ಅವಯವಗಳು ಇನ್ನೊಬ್ಬ ರೋಗಿಗೆ ಅನುಕೂಲವಾಗುವುದಾದರೆ ನನ್ನ ಜನ್ಮ ಸಾರ್ಥಕವಾಗುತ್ತೆ.

ನಾನು ಕೆಲಸಮಾಡುತ್ತಿರುವ ಆಫೀಸಿನ ಪಕ್ಕದ ಕಟ್ಟಡದಲ್ಲಿ ಅಂಚೆ ಇಲಾಖೆ ಇದೆ. ಇಪ್ಪತ್ತು ವರ್ಷಗಳಿಂದ ನಾನು ಅನೇಕಬಾರಿ ಅಲ್ಲಿಗೆ ಹೋಗುತ್ತಿರುತ್ತೇನೆ, ಹಾಗಾಗಿ ಅಲ್ಲಿ ಕೆಲಸಮಾಡುವವರೆಲ್ಲ ನನಗೆ ಪರಿಚಿತರಾಗಿದ್ದಾರೆ. ನಾನು ನಾಲ್ಕಾರು ದಿವಸ ಹೋಗದೇ ಇದ್ದರೆ, ನನ್ನ ಬದಲು ಹೋದವರನ್ನು ವಿಚಾರಿಸುತ್ತಾರೆ. ನಾನು ಆರೋಗ್ಯವಾಗಿದ್ದೇನೆಯೇ ಎಂದು. ಅವರ ಪೈಕಿ ಒಬ್ಬಾಕೆ, ಆವನಿ. ಗುಜರಾತಿಯವಳು. ನಾನು ಹೋದ ದಿನ, ಕುರ್ಚಿಯಿಂದ ಎದ್ದುಬಂದು, ಕಾಲಿಗೆ ನಮಸ್ಕಾರಮಾಡಿ, ಈ ದಿನ ನನ್ನ ಹುಟ್ಟಿದಹಬ್ಬ, ನೀವು ನನಗೆ ತಂದೆಯ ಸಮಾನ, ಆಶೀರ್ವಾದಮಾಡಿ ಎಂದು ಕೇಳಿದಳು!

100 ವರುಷ ಆಸೆ, ಆಯುಷ್ಯ ಮೂರು ನಿಮಿಷ ಗಾದೆ ನೆನಪಾಯಿತು ನನಗೆ. ಸಮಾರಂಭ ಒಂದರಲ್ಲಿ ಫೋಟೋಗ್ರಾಫರ್ ಹೇಳಿದ ನಾನು ನಿಮ್ಮ 100ರ ಸಮಾರಂಭಕ್ಕೂ ಫೋಟೋಗ್ರಾಫರ್ ಆಗಿ ಬರುತ್ತೇನೆ ಎಂದು ಸಂತೋಷ. ದೇವರು ನಿನಗೆ ಆ ಭಾಗ್ಯ ಕರುಣಿಸಲಿ ಎಂದೆ. ಮಾರನೇ ದಿನವೇ ಹೃದಯಾಘಾತದಿಂದ ನಿಧನನಾಗಿದ್ದ. ಆಸೆ ಬೇರೆ ಆಯುಷ್ಯ ಬೇರೆ.

81. ದಸರಾ ಮಹೋತ್ಸವ ಮೈಸೂರಿನಲ್ಲಿ

1933–34, ಮಹಾರಾಜ ಚಾಮರಾಜ ಒಡೆಯರು ಇದ್ದಕಾಲ. ನಾನು ಆಗ ಪ್ರೈಮರಿಶಾಲೆಯಲ್ಲಿ ಓದುತ್ತಿದ್ದೆ. ದಸರಾ ಮಹೋತ್ಸವದ ಕಡೆಯದಿನ, ಅಂದು

ವಿಜಯದಶಮಿ. ಮಹಾರಾಜರು ಆನೆಯಮೇಲೆ ಅಂಬಾರಿಯಲ್ಲಿ ಕುಳಿತು ಅರಮನೆಯನ್ನು ಬಿಟ್ಟಕೂಡಲೆ, 21 ತೋಪುಗಳನ್ನು ಹೊಡೆಯುತ್ತಿದ್ದರು. ರಸ್ತೆಯ ಉದ್ದಕ್ಕೂ ಉತ್ಸಾಹಿತ ಜನರು ಕಿಕ್ಕಿರಿದು ಅವರನ್ನು ನೋಡಲು ನಿಂತಿರುತ್ತಾರೆ.

ಆ ದಿನ ಎಲ್ಲ ಅನ್ನಸತ್ರಗಳಲ್ಲೂ ಭೂರಿಭೋಜನ ಪ್ರತಿಯೊಬ್ಬರಿಗೂ. ಮಕ್ಕಳಾದಿಯಾಗಿ ಎಲ್ಲರಿಗೂ ಬೆಳ್ಳಿಯ ಒಂದು ರುಪಾಯಿ ದಕ್ಷಿಣೆ ಲಾಡು ಜೊತೆಗೆ!

ನನ್ನ ಅಣ್ಣ ಚಿತ್ರಕಲಾಶಾಲೆಯಲ್ಲಿ ಓದುತ್ತಿದ್ದರು. ಅವರಿಗೆ ಆಗ ಕಡೂರು ಜಿಲ್ಲೆಗೆ ಅಧ್ಯಕ್ಷರಾಗಿದ್ದ ಹೊಸಕೊಪ್ಪ ಕೃಷ್ಣರಾಯರು ತಿಂಗಳಿಗೆ ಮುವ್ವತ್ತು ರುಪಾಯಿ ವಿದ್ಯಾರ್ಥಿವೇತನವನ್ನು ಕೊಡುತ್ತಿದ್ದರು. ಮೈಸೂರಿನಲ್ಲಿದ್ದಾಗ ಮನೆಯಲ್ಲಿ ನಾವು ಮೂರೇಜನ. ನಾನು, ಅಣ್ಣ ಮತ್ತು ಅತ್ತಿಗೆ. ಆ ಮುವ್ವತ್ತು ರುಪಾಯಿಯಲ್ಲೇ ನಮ್ಮ ಜೀವನ ಸಾಗುತ್ತಿತ್ತು. ಮನೆಯ ಬಾಡಿಗೆ ತಿಂಗಳಿಗೆ ಒಂದು ರುಪಾಯಿ!

ನಾನು ಅಣ್ಣ ಇಬ್ಬರೂ ವಿದ್ಯಾರ್ಥಿಗಳು, ಹಿಂದೆ ಮಹಾರಾಜರಾಗಿದ್ದ ಕೃಷ್ಣರಾಜ ಒಡೆಯರ ಪ್ರತಿಮೆಯ ಸುತ್ತಲೂ ದೊಡ್ಡ ವಿದ್ಯುದ್ದೀಪಗಳು. ಅದನ್ನೆಲ್ಲ ನೋಡಿಕೊಳ್ಳುತ್ತಿದ್ದ ಒಬ್ಬ ರಕ್ಷಣಾ ಅಧಿಕಾರಿಗೆ ಅಣ್ಣ ಎರಡಾಣೆಕೊಟ್ಟು ನಾವಿಬ್ಬರೂ ಅಲ್ಲಿ ಕುಳಿತು ಓದಿಕೊಳ್ಳಲು ಅನುಕೂಲ ಮಾಡಿಕೊಂಡಿದ್ದರು! ಬೆಳಿಗ್ಗೆ 4 ರಿಂದ 6ಗಂಟೆಯ ತನಕ ನಮ್ಮ ಓದು ಸಾಗುತ್ತಿತ್ತು. ಅವರು ಚಿತ್ರಗಳನ್ನು ಬರೆಯುವುದು, ನಾನು ನನ್ನ ಪಾಠಗಳನ್ನು ಓದುವುದು. ನಂತರ ಹೊಟೇಲಿಗೆ ಬಂದು, ಇಬ್ಬರೂ ಎರಡೆರಡು ದೋಸೆ ತಿಂದು ಮನೆಗೆ ಬರುತ್ತಿದ್ದೆವು. ಇಬ್ಬರಿಂದ ಒಂದಾಣೆ ಖರ್ಚು!

82. ವರ್ತಮಾನಪತ್ರಿಕೆ ಓದಲು ಕೂಲಿ

1944ರಲ್ಲಿ ನಾನು ಕಾಫೀಬೋರ್ಡಿಗೆ ಸೇರುವುದಕ್ಕೆ ಮುಂಚೆ, ಒಬ್ಬ ನಿವೃತ್ತ ನ್ಯಾಯಾಧೀಶರ ಮನೆಗೆ ಹೋಗಿ, ಅವರಿಗೆ ವರ್ತಮಾನಪತ್ರಿಕೆಯನ್ನು ಓದುತ್ತಿದ್ದೆ. ಅವರ ಎರಡು ಕಣ್ಣೂ ಕಾಣುತ್ತಿರಲಿಲ್ಲ. ಬೆಂಗಳೂರಿನ ಗಾಂಧೀನಗರದ ಬಡಾವಣೆಯಲ್ಲಿ ಹೆಸರಾಂತ ವಕೀಲರೊಬ್ಬರ ಕೊಲೆಯಾಗಿತ್ತು. ಅದರಬಗ್ಗೆ ವಾದವಿವಾದಗಳು ಪ್ರತಿದಿನವೂ ವರ್ತಮಾನಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುವು. ಹಿಂದೂ (ಊಟಿಜಣ) ಪತ್ರಿಕೆಯಲ್ಲಿ ಎರಡು ಪುಟಗಳು ಅದಕ್ಕೇ ಮೀಸಲು.

ಆ ನಿವೃತ್ತ ನ್ಯಾಯಾಧೀಶರಿಗೆ ಅದನ್ನು ತಿಳಿದುಕೊಳ್ಳಲು ತುಂಬಾ ಆಸಕ್ತಿ. ಹಾಗಾಗಿ ನನ್ನನ್ನು ನೇಮಿಸಿಕೊಂಡಿದ್ದರು. ತಿಂಗಳಿಗೆ ಏಳು ರುಪಾಯಿ ನನಗೆ ಸಿಗುತ್ತಿತ್ತು. ಕೇಸಿಗೆ ಸಂಬಂಧಪಟ್ಟ ಎರಡು ಪುಟ ವಿವರಗಳನ್ನು ಓದಲು

ಒಂದೂವರೆ ಗಂಟೆಕಾಲ ಬೇಕಾಗುತ್ತಿತ್ತು. ಉಳಿದ ವಿಷಯಗಳ ಮುಖ್ಯಾಂಶವನ್ನು ತಿಳಿಸಿದಾಗ ಆಗಲಿ ಎಂದರೆ ಓದಬೇಕು. ಇಲ್ಲವಾದರೆ ಮುಂದಿನದನ್ನು ತಿಳಿಸಬೇಕು.

ಪತ್ರಿಕೆಯನ್ನು ಮನಸ್ಸಿನಲ್ಲಿ ಓದುವುದಕ್ಕೂ ಗಟ್ಟಿಯಾಗಿ ಓದುವುದಕ್ಕೂ ವ್ಯತ್ಯಾಸವಿದೆ. ಓದಿ ಮುಗಿಸುವುದರಲ್ಲಿ ಗಂಟಲು ಒಣಗಿಬರುತ್ತಿತ್ತು.. ಸುಮಾರು ಐದಾರು ತಿಂಗಳು ಆ ಕೆಲಸಮಾಡಿದೆ. ಅದು ದಿನಾ ವರ್ತಮಾನಪತ್ರಿಕೆಯನ್ನು ಓದುವುದರಲ್ಲಿ ನನಗೆ ಆಸಕ್ತಿ ಹುಟ್ಟಿಸಿತು. ಜೊತೆಗೆ ಭಾಷೆಯಲ್ಲಿನ ಒಪ್ಪು ತಪ್ಪುಗಳ ಬಗ್ಗೆ ನಿಗಾ ಹೆಚ್ಚಾಯಿತು.

ಕಾಫೀಬೋರ್ಡಿನಲ್ಲಿ ಕೆಲಸಕ್ಕೆ ಸೇರಿದಮೇಲೆ ಮೂರುನಾಲ್ಕುಬಾರಿ, ಟೈಪ್‌ರೈಟಿಂಗ್ ಪರೀಕ್ಷೆಗೆ ಹೋಗಿದ್ದ ಸಾವಿರಾರು ವಿದ್ಯಾರ್ಥಿಗಳ ಉತ್ತರದ ಪೇಪರನ್ನು ನೋಡುವುದಕ್ಕೆ ನನ್ನನ್ನು ಚುನಾಯಿಸಿದರು. ಸರ್ಕಾರದಿಂದ. ಏನಿಲ್ಲೆಂದರೂ ಒಂದು ವರ್ಷದಲ್ಲಿ ಎರಡು ಪರೀಕ್ಷೆಗಳಿಂದ ನಾಲ್ಕು ಸಾವಿರ ಉತ್ತರದ ಪೇಪರ್ಗಳನ್ನು ನೋಡುವ ಅವಕಾಶ ದೊರಕಿತು. ನಾಲ್ಕನೇ ಬಾರಿ ಡೆಪ್ಯುಟಿಚೀಫ್ ಪರೀಕ್ಷಕನನ್ನಾಗಿ ಚುನಾಯಿಸಿದ್ದರು. ಅದರಲ್ಲಿ ನಾನು ಮಾಡಬೇಕಾದ ಕೆಲಸ ಹುಡುಗರು ಎಷ್ಟು ತಪ್ಪುಗಳನ್ನು ಮಾಡಿದ್ದಾರೆ ಎನ್ನುವುದನ್ನು ಕಂಡುಹಿಡಿಯುವುದು! ಅದರಮೇಲೆ ಅಂಕಗಳನ್ನು ನಿರ್ಧರಿಸುತ್ತಾರೆ. ನೂರಕ್ಕೆ 35 ಅಂಕಗಳು ಬಂದರೆ ಅವನು ತೇರ್ಗಡೆಯಾದಂತೆ. ಸಾವಿರಾರು ತಪ್ಪುಗಳನ್ನು ನೋಡಿನೋಡಿ ಈಗ ಯಾವುದೇ ಬರಹ ನೋಡಿದರೂ ತಾನೇತಾನಗಿ ತಪ್ಪುಗಳತ್ತ ಕಣ್ಣು ಹೋಗುತ್ತದೆ.

83. ಮಾತನಾಡುವುದರಲ್ಲಿ ಆದ ಆಭಾಸ

ನನ್ನ ಮಗ ಕ್ಯು.ಆ. ಮಾಡುವುದಕ್ಕೆ! ಖಖಿಖ ಕಾನ್ಪುರ್‌ನಲ್ಲಿ ವ್ಯಾಸಂಗಮಾಡುತ್ತಿದ್ದ. ಅದು ನಾಲ್ಕು ವರ್ಷಗಳ ವಿದ್ಯಾಭ್ಯಾಸ. ಕಡೆಯ ವರ್ಷ ಮುಗಿದನಂತರ ಅವನು ಮತ್ತು ಅವನ ಇನ್ನಿಬ್ಬರು ಸ್ನೇಹಿತರು ಬೆಂಗಳೂರಿಗೆ ಹಿಂತಿರುಗಬೇಕಾಗಿತ್ತು. ಹೊರಡುವುದಕ್ಕೆ ಮುಂಚೆ ಅಲ್ಲಿಯ ಒಂದು ಚರ್ಮದ ಅಂಗಡಿಗೆ ಹೋದರಂತೆ, ನನ್ನ ಮಗನ ಸ್ನೇಹಿತ ಒಂದು ಬೆಲ್ಟ್ ಕೊಳ್ಳಬೇಕೆಂದು.

ಅಂಗಡಿಗೆ ಹೋದಾಗ ಅಲ್ಲಿ ನೂರಾರು ತರಹ ಬೆಲ್ಟ್‌ಗಳನ್ನು ತಗುಲಿಹಾಕಿದ್ದರು. ಆ ಹುಡುಗ ಎಲ್ಲವನ್ನೂ ಒಂದೊಂದಾಗಿ ನೋಡಿ ಒಂದು ಬೆಲ್ಟನ್ನು ಆರಿಸಿದ. ಅವನಿಗೆ ಹಿಂದಿ ಭಾಷೆ ಅಷ್ಟಾಗಿ ಗೊತ್ತಿರಲಿಲ್ಲ. ಆ ಬೆಲ್ಟಿಗೆ ಎಷ್ಟು ಬೆಲೆ ಅನ್ನುವುದನ್ನು ತಿಳಿದುಕೊಳ್ಳಬೇಕು. ಅಂಗಡಿ ಮ್ಯಾನೇಜರ್‌ಗೆ ತೋರಿಸಿ.

'ಎ ಕೌನ್ ಹೈ? ಎಂದನಂತೆ! ಅವರಿಗೆ ಈ ಹುಡುಗ ದಕ್ಷಿಣ ಭಾರತದವನೆ ಎಂದು ಅರ್ಥವಾಗಿರಬೇಕು.

ನನ್ನ ಮಗ ಮತ್ತು ಇನ್ನೊಬ್ಬ ಸಹಪಾಠಿ ಅವನ ಜೊತೆ ಇದ್ದರೆ ನಮಗೂ ಅವಮಾನ ಎಂದು ಮೆಲ್ಲಗೆ ಬೇರೆಕಡೆಗೆ ಹೊರಟರಂತೆ.

ಅದಾದನಂತರ ಮೂವರೂ ರಸ್ತೆಯಮೇಲೆ ಬರುತ್ತಿದ್ದಾಗ ಕಾನ್ಪುರ್‌ನಲ್ಲೇ ವಾಸವಾಗಿರುವವರೊಬ್ಬರು ಇವರನ್ನು ನೋಡಿ ಅವರ ಮನೆಗೆ ಊಟಕ್ಕೆ ಕರೆದರಂತೆ. ಇವರುಗಳು ಊಟಕ್ಕೆ ಕುಳಿತು ಅರ್ಧ ಊಟ ಆಗಿತ್ತು. ಆ ಮನೆಯಾಕೆ. ನೋಡಿ ನೀವು ಅಪರೂಪಕ್ಕೆ ಬಂದಿರಿ. ಇಲ್ಲವಾದರೆ ಅಡಿಗೆಯನ್ನೆಲ್ಲ ನಾಯಿಗೆ ಹಾಕಬೇಕಾಗಿತ್ತು, ಎಂದರಂತೆ!

ನಾನು ಕಾಫೀಬೋರ್ಡಿನಿಂದ ನಿವೃತ್ತನಾದಮೇಲೆ ಎರಡು–ಮೂರು ವರ್ಷ ಬ್ರಾಹ್ಮಣ ಮಹಾಸಭಾದಲ್ಲಿ ಕೆಲಸಮಾಡಿದೆ. ಅಲ್ಲಿ ಹೇಮಲತಾ ಎಂಬ ಹೆಸರಿನ ಹುಡುಗಿ ಕೆಲಸಮಾಡುತ್ತಿದ್ದಳು. ಬೆಂಗಳೂರಿಗೆ ಬರುವುದಕ್ಕೆ ಮುಂಚೆ, ಅವಳು ಮತ್ತು ಅವಳ ತಂದೆತಾಯಿಗಳು ಡೆಲ್ಲಿಯಲ್ಲಿದ್ದರಂತೆ. ಅವಳ ತಂದೆ ಎಲೆಕ್ಟಿಕಲ್ ಎಂಜಿನಿಯರ್. ಅವರಿಗೆ ಅಲ್ಪಸ್ವಲ್ಪ ಹಿಂದಿಭಾಷೆ ಗೊತ್ತಿತ್ತು.

ವಿದ್ಯುತ್ ದೀಪದ ತಂತಿಗಳಲ್ಲಿ ಏನಾದರೂ ರಿಪೇರಿಮಾಡಬೇಕಾದರೆ ಒಂದು ಮರದಕೋಲಿನಿಂದ ತಂತಿಯನ್ನು ಮುಟ್ಟುತ್ತಾರೆ. ಆಗ ಷಾಕ್ ಹೊಡೆಯುವುದಿಲ್ಲ. ಅದಕ್ಕಾಗಿ ಅವರು, ಏಕ್ ಲಕಡಿ ಲಾವ್ ಎಂದು ಹೇಳುವ ಬದಲು, ಏಕ್ ಲಡಕಿ ಲಾವ್ ಎಂದು ಹೇಳಿದರಂತೆ!

ಹೇಮಲತ, ನೋಡಿ ನಮ್ಮ ತಂದೆ ಎಷ್ಟು ಪೆಚ್ಚುಪೆಚ್ಚಾಗಿ ಮಾತನಾಡಿದರು ಎಂದು ಹೇಳಿದ್ದಳು.

84. ಬದಲಾವಣೆಯ ಅಗತ್ಯ ಬೇಕು ಈ ಕ್ಷೇತ್ರದಲ್ಲಿ

ಕ್ರಮವಾಗಿ ಅಪರಕರ್ಮಗಳನ್ನು ಮಾಡುವುದಕ್ಕೆ ತಕ್ಕ ಪುರೋಹಿತರು ಇಲ್ಲವಾಗಿದೆ. ಆಗ ಕರ್ನಾಟಕದ ತರೀಕೆರೆಯಲ್ಲಿ ಒಬ್ಬಿಬ್ಬರಲ್ಲ. ಅನೇಕ ಮಂದಿ ಪೌರೋಹಿತ್ಯವನ್ನು ವೃತ್ತಿಯಾಗಿ ನಡೆಸುತ್ತಿದ್ದರು. ಈಗ ಬುಕ್ಕಾಂಬುಧಿ, ತಾವರೇಕೆರೆ, ಶಿವನೆ, ಅಜ್ಜಂಪುರ ಈ ಊರುಗಳಲ್ಲಿ ಪುರೋಹಿತರು ಯಾರೂ ಇಲ್ಲ. ಅನೂಚಾನವಾಗಿ ನಡೆಸುತ್ತಿದ್ದ ಹಿರಿಯರು ತೀರಿಕೊಂಡಿದ್ದಾರೆ. ಅವರ ಮಕ್ಕಳಲ್ಲಿ ಕೆಲವರಿಗೆ ಅದರಲ್ಲಿ ಆಸಕ್ತಿಯಿಲ್ಲ, ಇನ್ನು ಕೆಲವರು ಬೇರೆ ವೃತ್ತಿಯನ್ನು ಅರಸುತ್ತ ಚದುರಿಹೋಗಿದ್ದಾರೆ.

ಇತ್ತೀಚೆಗೆ ತರೀಕೆರೆಯಲ್ಲಿ ಒಬ್ಬ ವಯಸ್ಸಾದ ಮಹಿಳೆ ತೀರಿಕೊಂಡರು. ಅವರ ಅಪರಕಾರ್ಯಕ್ಕೆ ಪುರೋಹಿತರು ಯಾರೂ ಇಲ್ಲ. ದೂರದಲ್ಲಿರುವ ಬಾಣಾವರ ಎಂಬ ಊರಿನಿಂದ ಒಬ್ಬ ಪುರೋಹಿತರು ಬಂದಿದ್ದರಂತೆ. ಮೇಲೆ ತಿಳಿಸಿರುವ ಊರುಗಳಲ್ಲಿ ಶವದ ದಹನಕಾರ್ಯಕ್ಕೆ ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಸುವ ಯಂತ್ರಗಳು ಇಲ್ಲ. ಹಿಂದಿನಂತೆಯೇ ಚಟ್ಟವನ್ನು ಕಟ್ಟಿ ಶವವನ್ನು ಮೇಲಿಟ್ಟು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವ ಪದ್ಧತಿ ಸದ್ಯದಲ್ಲಿದೆ. ಅದೇ ಒಂದು ಸಂತೋಷ.

ಪರಿಸ್ಥಿತಿ ಹೀಗಾದಾಗ ಈ ಕ್ಷೇತ್ರದಲ್ಲೂ ಬದಲಾವಣೆ ಅಗತ್ಯವಾಗಿ ಆಗಲೇಬೇಕು. ಇದು ಎಲ್ಲರೂ ಸೇರಿ ಒಮ್ಮತದಿಂದ ತೀರ್ಮಾನ ತೆಗೆದುಕೊಳ್ಳುವ ಪ್ರಶ್ನೆ. ನಿಮಗೆ ಪುರೋಹಿತರೆ ಸಿಗದಿದ್ದರೆ ನೀವು ತಾನೇ ಏನು ಮಾಡುವುದಕ್ಕೆ ಸಾಧ್ಯ. ಗೌರೀ–ಗಣೇಶ ವ್ರತಗಳನ್ನು ಕ್ಯಾಸೆಟ್ ಮೂಲಕ ಮಾಡುವ ಹಾಗೆ ತಿಥಿ ಮಂತ್ರವನ್ನೂ ಮಾಡುವುದಕ್ಕೆ ಆಗುತ್ತೆದೆಯೆ?. ಕೋವಿಡ್ ಅವಾಂತರದಿಂದ ಪುರೋಹಿತರು ಸಿಕ್ಕರೂ ಬರುವುದಕ್ಕೆ ಸಾಧ್ಯವಾಗಲಿಲ್ಲ. ಆಗ ನಾವು ಬದಲಾವಣೆ ಮಾಡಿಕೊಳ್ಳಲಿಲ್ಲವೇ. ತಿಥಿ ಮಾಡುವುದರಿಂದಲೇ ತೀರಿಕೊಂಡವರ ಆತ್ಮಕ್ಕೆ ಶಾಂತಿ ದೊರಕುವುದೆಂಬ ಭ್ರಮೆಯನ್ನು ಬಿಡಿ. ನಾನಾ ರೂಪಗಳಲ್ಲಿ ಅವರಿಗೆ ಶಾಂತಿ ಉಂಟು ಮಾಡುವ ರೀತಿ ಇದೆ. ಖರ್ಚು ಮಾಡುವ ಹಣವನ್ನು ಯಾರಾದರೂ ಬಡಬಗ್ಗರಿಗೆ ದಾನಮಾಡಿ, ಯಾವುದಾದರೂ ಅನಾಥಾಲಯಕ್ಕೆ ಕೊಡಿ, ಇಲ್ಲ ಯಾವುದಾದರೂ ಶಾಲೆಯ ಬಡವಿದ್ಯಾರ್ಥಿಗಳಿಗೆ ಬೇಕಾಗುವ ಪುಸ್ತಕ, ಬಟ್ಟೆಬರೆ ಇಂತಹ ಕೆಲಸ ಕಾರ್ಯಗಳಿಗೆ ಆ ಹಣವನ್ನು ಉಪಯೋಗಿಸಿ. ಇದರಿಂದ ತೀರಿಕೊಂಡ ಹಿರಿಯರ ಆತ್ಮಕ್ಕೆ ಸದ್ಗತಿ ಖಂಡಿತಾ ಸಿಗುತ್ತೆ.

ನನ್ನ ವಿಷಯದಲ್ಲಿ ಈಗಾಗಲೇ ಒಂದು ತೀರ್ಮಾನಕ್ಕೆ ಬಂದು, ಸತ್ತನಂತರ ನನ್ನ ಶವವನ್ನು ಒಂದು ವೈದ್ಯಕೀಯ ಶಾಲೆಗೆ ತಲುಪಿಸಬೇಕೆಂದು ಬರೆದುಕೊಟ್ಟಿದ್ದೇನೆ. ಇದು ಸಾಯವವನ ಇಷ್ಟಕ್ಕೆ ಬಿಟ್ಟಿದ್ದೇ ಹೊರತು ಉಳಿದವರು ಯೋಚಿಸುವ ವಿಷಯವಲ್ಲ. ನನ್ನ ತಿಥಿ ಸಂಸ್ಕಾರಗಳನ್ನು ಬೇರೇ ರೀತಿಯಲ್ಲಿ ಮಾಡುವ ಒಂದು ವ್ಯವಸ್ಥೆ ಮಾಡಿದ್ದೇನೆ. ಅದರಿಂದ ನನ್ನ ಮನಸ್ಸಿಗೆ ಶಾಂತಿ ದೊರಕುತ್ತೆ ಅನ್ನುವ ಭರವಸೆ ನನಗಿದೆ.

85. ಪಂಡಿತನಿಗೆ ಬೇಕಾದದ್ದು ವಿಚಾರ–ಆಚಾರ

ನನಗೆ ಅನೇಕ ವರ್ಷಗಳಿಂದ ಪರಿಚಿತರಾಗಿದ್ದ ಶಾಸ್ತ್ರಿಗಳೊಬ್ಬರು ಬೆಂಗಳೂರಿನಲ್ಲಿ ಬಸವನಗುಡಿ ಬಡಾವಣೆಯಲ್ಲಿದ್ದರು. ಅವರು ಹೆಚ್ಚಾಗಿ ಶ್ರಾದ್ಧಕರ್ಮಗಳಿಗೆ ಮೀಸಲು. ಗೌರಿ ಗಣಪತಿ ಮುಂತಾದ ವ್ರತಗಳನ್ನು ಮಾಡಿಸಲು ಹೋಗುತ್ತಿರಲಿಲ್ಲ.

1966ರಲ್ಲಿ ನಮ್ಮ ಮನೆಯ ಗೃಹಪ್ರವೇಶ ಮಾಡಿಸಲು ಅವರನ್ನು ಭೇಟಿಮಾಡಲು ಹೋಗಿದ್ದೆ. ವಿಚಾರಿಸಿದಾಗ ಅವರು ಹೇಳಿದರು. ನಾಲ್ಕು ಜನ ಋತ್ವಿಕರನ್ನು ಕರೆದುಕೊಂಡು ಬರುತ್ತೇನೆ. ಒಬ್ಬೊಬ್ಬರಿಗೂ ಐದು ರುಪಾಯಿ ದಕ್ಷಿಣೆ ಮತ್ತು ಬಸವನಗುಡಿಯಿಂದ ಜಯನಗರಕ್ಕೆ ಬಂದುಹೋಗಲು ಬಸ್‌ಚಾರ್ಜು ನಾಲ್ಕಾಣೆ ಕೊಡಬೇಕು ಎಂದರು. ನಾನು ಆ ನಾಲ್ಕು ಜನ ಋತ್ವಿಕರಿಗೂ ಒಬ್ಬೊಬ್ಬರಿಗೆ ಹತ್ತು ರುಪಾಯಿ ದಕ್ಷಿಣೆ ಕೊಡಬೇಕೆಂತ ಮನಸ್ಸು ಮಾಡಿದ್ದೇನೆ ಎಂದಾಗ ಅವರು, ಹಾಗೇಮಾಡಿ, ಹತ್ತು ರುಪಾಯಿ ದಕ್ಷಿಣೆ, ಬಸ್‌ಚಾರ್ಜು ನಾಲ್ಕಾಣೆ ಕೊಡಿ ಎಂದರು! ಶಾಸ್ತ್ರಿಗಳು ವೇದಾಧ್ಯಯನ ಪಂಡಿತರು.

ನಮ್ಮ ಮನೆಯಲ್ಲಿ ನಮ್ಮ ತಾಯಿಯ ಶ್ರಾದ್ಧ. ಆ ದಿನವೇ ಇನ್ನೊಂದು ಮನೆಯಲ್ಲಿ ಶ್ರಾದ್ಧ. ಎರಡೂ ಪಕ್ಕಪಕ್ಕದಲ್ಲಿರುವ ಮನೆಗಳೇ. ಒಂದು ಕಡೆ ಆಹ್ವಾನಿತ ಬ್ರಾಹ್ಮಣರಿಗೆ ಭೋಜನಮಾಡಲು ಶುರುಮಾಡಿಸಿ, ಪಕ್ಕದಮನೆಗೆ ಹೋಗಿ ಶ್ರಾದ್ಧಕರ್ಮ ಪ್ರಾರಂಭ. ಆ ಮನೆಯಲ್ಲಿ ಬ್ರಾಹ್ಮಣರನ್ನು ಭೋಜನಕ್ಕೆ ಕೂರಿಸಿಬಂದು ನಮ್ಮ ಮನೆಯಲ್ಲಿ ಶ್ರಾದ್ಧ ಮುಂದುವರಿಸುತ್ತಿದ್ದರು. ಇಬ್ಬರ ಮನೆಯವರಿಂದಲೂ ಆಟೋ ಚಾರ್ಜನ್ನು ವಸೂಲುಮಾಡುತ್ತಿದ್ದರು!

ಶಾಸ್ತ್ರಿಗಳ ಮನೆ ಬಸವನಗುಡಿಯಲ್ಲಿ. ವಯಸ್ಸಾದ ತಾಯಿ, ಮಗ ಇಬ್ಬರೇ. ಒಬ್ಬರಿಗೊಬ್ಬರು ಮಾತನಾಡುತ್ತಿರಲಿಲ್ಲ.

ಇಬ್ಬರೂ ಬೇರೆಬೇರೆಕಡೆ ಅಡಿಗೆ, ಊಟ! ವೇದಪಾಠವನ್ನೆಲ್ಲ ಗಿಳಿಪಾಠದಂತೆ ಹೇಳಿದರೆ ಏನು ಸಾರ್ಥಕ? ಆಚಾರ ವಿಚಾರ, ನಡೆ ನುಡಿ ಇವು ಮುಖ್ಯವಾಗಿ ಬೇಕು ಮನುಷ್ಯನಿಗೆ.

86. ನಾನು ಯಾರು ಗೊತ್ತೆ?

ಬೆಂಗಳೂರಿನಲ್ಲಿ ನಮ್ಮ ಮನೆ ಇರುವುದು ಜಯನಗರದ ಟಿ ಬ್ಲಾಕ್ 17ನೇ ಮೇನ್ ರಸ್ತೆಯಲ್ಲಿ. 11ನೇ ರಸ್ತೆಯಲ್ಲಿ ಒಂದು ಕಾಫೀ ವರ್ಕ್ಸ್ ಇದೆ. ನಾನು ಆಗಾಗ್ಗೆ ಹುರಿದ ಕಾಫಿಬೀಜವನ್ನು ಪುಡಿಮಾಡಿಸುವುದಕ್ಕೆ ಅಲ್ಲಿಗೆ ಹೋಗುತ್ತಿದ್ದೆ. ಒಂದು ದಿನ ಹೋದಾಗ ಇನ್ನೂ ಅಂಗಡಿಬಾಗಿಲು ತೆಗೆದಿರಲಿಲ್ಲ. ಮೇಲ್ಗಡೆ ಬೋರ್ಡಿನಲ್ಲಿ

ಕೆಲಸದ ವೇಳೆ ಒಂಬತ್ತರಿಂದ ಒಂದು ಗಂಟೆಯವರೆಗೆ ಎಂದಿತ್ತು. ಆಗಲೇ ಹತ್ತು ಗಂಟೆಯಾಗಿತ್ತು. ನನ್ನಂತೆಯೇ ಇನ್ನೊಬ್ಬರು ಅಲ್ಲಿ ಕಾಯುತ್ತಿದ್ದರು.

ಬಾಗಿಲು ತೆಗೆಯುವವರೆಗೂ ಮಾತನಾಡುತ್ತಾ ಕುಳಿತೆವು. ಅವರು ಮಾತಿನಮಧ್ಯೆ. ನಿಮ್ಮ ಮನೆಯಲ್ಲಿ ಪ್ರಭಾಕರ ಅನ್ನುವವರು ಈಗ ಎಲ್ಲಿದ್ದಾರೆ ಸರ್ ಎಂದು ಕೇಳಿದರು. ಅವರು ಈಗ ಕಲ್ಕತ್ತಾ ಹತ್ತಿರ ಸ್ಟೀಲ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದಾರೆ ಎಂದೆ. ನಿಮ್ಮ ಮಗ ಶ್ರೀಧರ್ ಬ್ಯಾಂಕಿನಲ್ಲಿದ್ದರಲ್ಲ. ಅವರು ಹಾಸನದಲ್ಲಿದ್ದಾರೆ ಎಂದೆ. ಇನ್ನೊಬ್ಬ ಮಗ ಆನಂದ? ಅವನು ಖಖಖಿ ಕಾನ್‌ಪುರದಲ್ಲಿ ಓದುತ್ತಿದ್ದಾನೆ ಎಂದು ಹೇಳಿದೆ. ಆಗ ನನಗೆ ಸ್ವಲ್ಪ ಅನುಮಾನವಾಯಿತು. ಈತ ನಮ್ಮ ಮನೆಯ ವಿಷಯವನ್ನೆಲ್ಲ ಕೇಳುತ್ತಿದ್ದಾನೆ. ನಮ್ಮ ನೆಂಟರೇ ಇರಬಹುದು. ಆದರೆ ನನಗೆ ಜ್ಞಾಪಕಕ್ಕೆ ಬರುತ್ತಿಲ್ಲ. ಹೇಗಾದರಾಗಲಿ ಎಂದು ಅವರನ್ನೇ ಕೇಳಿದೆ. ಕ್ಷಮಿಸಿ ತಮ್ಮ ಪರಿಚಯ ಗೊತ್ತಾಗಲಿಲ್ಲ, ತಮ್ಮ ಹೆಸರು?

ನಾನು ನಾರಾಯಣರಾವ್ ಸರ್, ಇಲ್ಲಿಯ ಪೋಸ್ಟ್‌ಮನ್ ಎಂದರು ಆತ!

87. ಚನ್ನಗಿರಿ ಕೇಶವಮೂರ್ತಿಯೂ ಅವರೆ, ಕ್ರಿಕೆಟ್ ಕೇಶವಮೂರ್ತಿಯೂ ಅವರೇ

ನನ್ನ ಪರಿಚಯ ಚನ್ನಗಿರಿ ಕೇಶವಮೂರ್ತಿಯವರೊಡನೆ ಬಹಳ ವರ್ಷಗಳದ್ದು. ನಾನು ಬಾಳೇಹೊನ್ನೂರಿನಲ್ಲಿ ಕೆಲಸಮಾಡುತ್ತಿದ್ದಾಗ ಅವರಿಗೂ ಅಲ್ಲಿಗೆ ವರ್ಗವಾಯಿತು. ಸಂಸಾರಸ್ಥರಲ್ಲದವರಿಗೆ ಮೂರು ನಾಲ್ಕು ಕೆಲಸದವರಿಗೆ ಒಂದು ಮನೆ ಕೊಡುತ್ತಿದ್ದರು. ಕೇಶವಮೂರ್ತಿಗೆ ಆಗಿನ್ನೂ ಮದುವೆಯಾಗಿರಲಿಲ್ಲ. ಅವರು ಬೇರೊಬ್ಬರ ಜೊತೆಯಲ್ಲೂ ಬೆರೆಯುತ್ತಿರಲಿಲ್ಲ. ಅವರಾಯಿತು. ಅವರ ಕೆಲಸವಾಯಿತು. ಅವರಿಗೆ ಇಸ್ಪೀಟ್ ಆಡುವ ಹವ್ಯಾಸ ಇದ್ದುದರಿಂದ ನಾವು ಎರಡು ಮೂರು ಜನ ಅವರೊಡನೆ ಹೆಚ್ಚು ಬೆರೆಯುತ್ತಿದ್ದುದು. ಅವರು ಅಲ್ಲಿದ್ದ ಕ್ಯಾಂಟೀನ್‌ನಲ್ಲಿ ಊಟ ಮಾಡುತ್ತಿದ್ದರು. ನಾನು ಗಣಪತಿಹಬ್ಬದ ದಿನವಾದರೂ ನಮ್ಮ ಮನೆಗೆ ಅವರನ್ನು ಊಟಕ್ಕೆ ಕರೆಯಬೇಕೆಂದಿದ್ದೆ. ಅವರಿಗೆ ಸಂಕೋಚ. ಅವರು ಕ್ಯಾಂಟೀನ್‌ಗೆ ಹೋಗಬೇಕಾದರೆ ನಮ್ಮ ಮನೆಯ ಮುಂದೆಯೇ ಹೋಗಬೇಕು. ನಾನು ಎಲ್ಲಿ ಅವರನ್ನು ತಡೆದುಬಿಡುತ್ತೇನೋ ಎಂದು ಆ ದಿನ ಮನೆಯಿಂದ ಹೊರಗಡೆಯೇ ಬರಲಿಲ್ಲ. ಆ ದಿನ ಊಟವೂ ಇಲ್ಲ! ಬರುಬರುತ್ತ, ನಮ್ಮಿಬ್ಬರ ಮಧ್ಯೆ ಸಲಿಗೆ ಹೆಚ್ಚಾಯಿತು.

ಕೇಶವಮೂರ್ತಿಗೆ ಬೆಂಗಳೂರಿಗೆ ವರ್ಗವಾಯಿತು. ಆಗ ಅವರ ಅಣ್ಣನ ಮನೆಯಲ್ಲಿ ಇರುತ್ತಿದ್ದರಂತೆ, ಆಗಲೂ ಹೆಚ್ಚಾಗಿ ಇನ್ನೊಬ್ಬರ ಜೊತೆ ಬೆರೆಯುತ್ತಿರಲಿಲ್ಲ.

ಒಂದು ಅಟ್ಟದ ತರಹ, ಅಲ್ಲಿ ಅವರ ಬಿಡಾರ. ಒಂದು ಏಣಿಯಮೇಲೆ ಹತ್ತಿ, ಅದನ್ನು ಮೇಲಕ್ಕೆ ಎಳೆದುಬಿಡುತ್ತಿದ್ದರಂತೆ. ಇನ್ನೊಬ್ಬರು ಅಲ್ಲಿಗೆ ಬರದಹಾಗೆ! ಅವರು ಅಂತಹ ವಿಚಿತ್ರ ಸ್ವಭಾವದವರು.

ನಾನೂ ಬೆಂಗಳೂರಿಗೆ ಬಂದನಂತರ, ಒ.ಇಜ. ಪರೀಕ್ಷೆಗ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳ ಥೀಸಿಸ್ ಟೈಪ್ ಮಾಡಿಕೊಡುತ್ತಿದ್ದೆ.. ಅದು ಬಹಳ ಜವಾಬ್ದಾರಿಯ ಕೆಲಸ. ಕೇಶವಮೂರ್ತಿಯವರು ನನಗೆ ಸಹಾಯವಾಡುವುದಾಗಿ ಹೇಳಿದರು. ಆದರೆ ಒಂದು ಕರಾರಿನಮೇಲೆ. ಅವರು ನಮ್ಮ ಮನೆಗೆ ಬಂದು ಟೈಪ್ ಮಾಡುವಾಗ ಯಾರೂ ಅವರೊಡನೆ ಮಾತನಾಡಬಾರದು, ಅವರಿಗೆ ಕಾಫಿ, ಟೀ ಏನನ್ನೂ ಕೊಡಕೂಡದು. ಅವರು ಮಾಡಿದ ಕೆಲಸಕ್ಕೆ ನಾನು ಹಣಕೊಡಬಾರದು ಎಂದು! ಬೇರೇ ಗತಿಯಿಲ್ಲದೆ ಆ ಕರಾರಿಗೆ ಒಪ್ಪಬೇಕಾಯಿತು. ಬಾಯಾರಿಕೆಯಾದರೆ ಸ್ವಲ್ಪ ನೀರು ಕೊಡಬಹುದೇ ಎಂದು ಕೇಳಿದಾಗ ದೊಡ್ಡಮನಸ್ಸುವಾಡಿ ಆಗಲಿ ಎಂದರು! ನನಗೆ ಕನಕಾಭಿಷೇಕವಾದಾಗ ಆ ಸಮಾರಂಭಕ್ಕೆ ಬಂದಿದ್ದರು.

ಕ್ರಿಕೆಟ್ ಆಟ ಆಡದಿದ್ದರೂ ಭಾರತದಲ್ಲಿ ನಡೆಯುವ ಎಲ್ಲ ಕ್ರಿಕೆಟ್ ಪಂದ್ಯಗಳ ಅಂಕಿಅಂಶಗಳನ್ನು ಸಂಗ್ರಹಮಾಡಲು, ಬೆಂಗಳೂರು ಕ್ರಿಕೆಟ್ ಕ್ಲಬ್ಬಿನವರು ಅವರನ್ನು ನೇಮಕಮಾಡಿದ್ದರು. ಪ್ರತಿಯೊಬ್ಬ ಕ್ರಿಕೆಟ್ ಆಟಗಾರನ ವಯಸ್ಸು, ಎತ್ತರ, ಅವನು ಎಷ್ಟು ಪಂದ್ಯಗಳಲ್ಲಿ ಭಾಗವಹಿಸಿದ್ದಾನೆ ಮುಂತಾದ ಎಲ್ಲ ವಿಷಯಗಳಲ್ಲೂ ಅವರಿಗೆ ತಿಳಿಯದ ಸಮಾಚಾರವೆ ಇಲ್ಲ. ಸಚಿನ್ ತಂಡೂಲ್ಕರ್ ಮೇಲೆ ಒಂದು ಪುಸ್ತಕವನ್ನೇ ಪ್ರಕಟಿಸಿದ್ದಾರೆ. ಇತ್ತೀಚೆಗೆ ಒಂದು ಪ್ರಕಟನೆ 'ಸಾಹಿತ್ಯವೆ ಹಸಿರು, ಕ್ರಿಕೆಟ್ಟೇ ಉಸಿರು' ಎಂಬ ಪುಸ್ತಕ ಬಿಡುಗಡೆಯಾಯಿತು.

ಇಂತಹ ನನ್ನ ಸಹೋದ್ಯೋಗಿ ಕೇಶವಮೂರ್ತಿ ಕಣ್ಮರೆಯಾದರೆಂದು ತಿಳಸಲು ವ್ಯಥೆಯಾಗುತ್ತೆ.

88. ಹೊಸಮನೆಗೆ ಪ್ರವೇಶ, ಹೊಸಮಾದರಿ ಪೂಜೆ!

ನಮ್ಮ ಸ್ನೇಹಿತರೊಬ್ಬರು ಒಂದು ಮನೆಯನ್ನು ಕೊಂಡುಕೊಂಡರು. ಅದಕ್ಕೆ ಆ ದಿನ ಸಣ್ಣ ಪೂಜೆ ಮಾಡಲೇಬೇಕೆಂದು ಕೇಳಿದರು. ಅವರ ಮನೆಯವರೆಲ್ಲರೂ ನನಗೆ ತುಂಬಾ ಪರಿಚಯ. ಆ ಮನೆಯಾತ ನಮ್ಮ ಆಫೀಸಿನಲ್ಲಿ ಕೆಲವಾರು ತಿಂಗಳು ನಮ್ಮ ಜೊತೆಯೇ ಕೆಲಸಮಾಡಿದ್ದರು. ನಾನು ಈಚೆಗೆ ಆ ತರಹ ಪೂಜೆಪುನಸ್ಕಾರಗಳನ್ನು ಮಾಡಿಸುತ್ತಿಲ್ಲ, ಬೆಂಗಳೂರಿನಲ್ಲಿದ್ದಾಗ ಗೌರಿ ಗಣಪತಿ ವ್ರತ, ಕತೆಗಳನ್ನು ಗಿಳಿಪಾಠದಂತೆ ಮಂತ್ರಹೇಳಿ ಮಾಡಿಸುತ್ತಿದ್ದೆ, ಸ್ವಲ್ಪ

ತಿಳುವಳಿಕೆ ಬಂದನಂತರ ಅದನ್ನೂ ನಿಲ್ಲಿಸಿಬಿಟ್ಟೆ ಎಂದು ಹೇಳಿದೆ. ಅಮೆರಿಕಾಕ್ಕೆ ಬಂದಮೇಲಂತೂ ಅವೆಲ್ಲವೂ ನಿಂತುಹೋಗಿತ್ತು. ಮಗಳು ಇಂದಿರಾ ಪುರುಷೋತ್ತಮ್ ನ್ಯೂಯಾರ್ಕಿನಲ್ಲಿದ್ದಾಗ ನಾಲ್ಕಾರು ವರ್ಷ ಅಲ್ಲಿಗೆ ಹೋಗಿ ಗೌರಿ ಗಣಪತಿ ವ್ರತಗಳನ್ನು ಮಾಡಿಸಿಬರುತ್ತಿದ್ದೆ ಎಂದು ತಿಳಿಸಿದಾಗ ಅವರು ಅಷ್ಟಕ್ಕೇ ಸುಮ್ಮನಾಗಲಿಲ್ಲ. ನೀವು ಹಿರಿಯರು ಬರಲೇಬೇಕು ಎಂದು ಒತ್ತಾಯಮಾಡಿದರು. ಹಿರಿಯ ಎಂದು ಒಪ್ಪಿಕೊಳ್ಳುತ್ತೇನೆ. ಆದರೆ ಹಿರಿಯುವುದಿಲ್ಲ ಎಂದೆ! ಅವರು ನಕ್ಕು ಆಗಲಿ ಎಂದರು. ಯತ್ನವಿಲ್ಲದೆ ಹೋಗಬೇಕಾಯಿತು. ಇಷ್ಟೆಲ್ಲಾ ಆದಮೇಲೆ ಪೂಜಾರಿಯ ವೇಷಭೂಷಣವೂ ಬದಲು. ಪೂಜಾರಿ ಪ್ಯಾಂಟ್, ಷರ್ಟ್‌ಧಾರಿಯಾಗಿ ಆ ದೇವರಮುಂದೆ ನಿಂತಿದ್ದ!

ಪೂಜೆಗೆ ಬೇಕಾದ ಸಿದ್ಧತೆಗಳೆಲ್ಲ ಆಗಿವೆ ಎಂದರು. ಆದರೆ ಪ್ರಾರಂಭಕ್ಕೆ ಬೇಕಾದ ಮಂತ್ರಾಕ್ಷತೆಯೇ ಇರಲಿಲ್ಲ, ಸ್ವಲ್ಪ ಹೂವೇನೋ ಇತ್ತು, ಧೂಪಂದರ್ಶಯಾಮಿ ಎನ್ನುವುದಕ್ಕೆ ಊದಿನಕಡ್ಡಿಯೂ ಇಲ್ಲ. ತಂದಿದ್ದ ಕರ್ಪೂರವೂ ತಂಟೆಮಾಡಿತು ಹೊತ್ತಿಕೊಳ್ಳಲು. ಹಿತ್ತಾಳೆಯ ಗಂಟೆ ಹೊಸದಾದ್ದರಿಂದ ಶಬ್ದಮಾಡುತ್ತಿತ್ತು! ಶ್ರೀ ಗುರುಭ್ಯೋನಮಃ ಹರಿ: ಓಂ ಎಂದು ಪ್ರಾರಂಭಮಾಡಿ ಇನ್ನೂ ಜ್ಞಾಪಕದಲ್ಲಿದ್ದ ಗಣಪತಿಪೂಜಾ ಮಂತ್ರವನ್ನು ಪಠಿಸಿ ಮಂಗಳಾರತಿಮಾಡಿ ಆಯಿತು ಎಂದೆ. ನನ್ನಿಂದಲೇ ಪೂಜೆ ಆಗಬೇಕೆಂಬ ಅವರ ಆಸೆ ತೀರಿತು.

ಇನ್ನು ಹಾಲು ಉಕ್ಕಿಸಬೇಕು. ಅದು ಉಕ್ಕಿ ಸ್ಟೌ ಮೇಲೆಲ್ಲ ಚಲ್ಲಿದರೆ ಅದನ್ನು ತೊಳೆಯುವವರಾರು, ಉಕ್ಕುವುದಕ್ಕೆ ಮೊದಲೇ ತೆಗೆದುಬಿಡೋಣ ಎಂದು ಅವರವರೇ ಮಾತನಾಡಿಕೊಳ್ಳುತ್ತಿದ್ದರು! ಗಂಡ, ಹೆಂಡತಿ ಇಬ್ಬರು ಮಕ್ಕಳು ಎಲ್ಲರೂ ನಮಸ್ಕಾರ ಮಾಡಿದರು. ಊಟ ಒಂದು ಹೊಟೇಲಿನಲ್ಲಿ ಏರ್ಪಡಿಸಿದ್ದರು. ಊಟ ಚೆನ್ನಾಗಿತ್ತು.

ಇನ್ನು ಎರಡು ತಿಂಗಳಾದ ಮೇಲೆ, ಮನೆಗೆ ಬೇಕಾದ ಅಚ್ಚುಕಟ್ಟುಗಳೆಲ್ಲ ಒದಗಿರುತ್ತೆ. ಮತ್ತೊಮ್ಮೆ ಆ ಮನೆಗೆ ಹೋಗಬೇಕು. ಆಗ ಪೂಜೆ ಪುನಸ್ಕಾರಗಳ ಗಡಿಬಿಡಿಯೇನೂ ಇರುವುದಿಲ್ಲ. ಅವರ ಸ್ನೇಹಿತರೆಲ್ಲ ಒಟ್ಟಿಗೆ ಸೇರುವುದಕ್ಕೆ ಒಂದು ಅವಕಾಶ.

89. ಬು. ಕೃ. ಮೂರ್ತಿಗಳು ಸ್ವರ್ಗದ–ಕನಸಿನಲ್ಲಿ

ಬು. ಕೃ. ಮೂರ್ತಿಗಳು ಸ್ವರ್ಗಲೋಕದಲ್ಲಿ ಯಮ ಧರ್ಮರಾಯನ ಮುಂದೆ ಕೈಕಟ್ಟಿಕೊಂಡು ನಗುತ್ತಾ ನಿಂತಿದ್ದಾರೆ. ಅಕಸ್ಮಾತ್ ಅವನು ಮೂರ್ತಿಗಳನ್ನು

ನೋಡಿದಾಗ, ಏಕಪ್ಪಾ ಇಷ್ಟು ಬೇಗ ಬಂದುಬಿಟ್ಟೆ, ಇನ್ನೂ ನಾಲ್ಕಾರು ವರ್ಷಗಳ ಅವಧಿ ಇದೆ ನಿನಗೆ, ಏಕೆ ಅಲ್ಲಿಯ ಬವಣೆ ಸಾಕಾಯಿತೇ ಎಂದ.

ಇಲ್ಲ ದೇವಾ. ನಾನು ಅಲ್ಲಿಯೇ ಜೀವ ಬಿಟ್ಟರೆ ಸುಟ್ಟು ಬೂದಿ ಮಾಡುತ್ತಾರೆ. ಅದಕ್ಕಾಗಿ ನನ್ನ ಪಾರ್ಥಿವ ಶರೀರವನ್ನು ಒಂದು ವೈದ್ಯಕೀಯ ಶಾಲೆಗೆ ತಲುಪಿಸಬೇಕೆಂದು ಬರೆದುಕೊಟ್ಟಿದ್ದೇನೆ, ಅದೂ ಒಬ್ಬ ಪರಿಚಯಸ್ಥರಾದ ವಕೀಲರ ಮುಖಾಂತರ.

ಒಳ್ಳೆಯ ಕೆಲಸವನ್ನೇ ಮಾಡಿದ್ದೀಯ. ಹೋಗು, ನಾಲ್ಕಾರು ವರ್ಷವಾದ ಮೇಲೆ ಬಾ. ನೀನು ಮೊದಲೇ ಅರ್ಜಿ ಕೊಟ್ಟಹಾಗೆ ಜ್ಞಾಪಕ. ನಿನಗೆ ಒಂದು ವಿಶೇಷ ಸ್ಥಾನ ಮೀಸಲಾಗಿಟ್ಟಿದ್ದೇನೆ. ಅದು ನಿಮ್ಮದೇ ಆದ ಪ್ರಪಂಚ. ಅಲ್ಲಿ ಹೆಸರಾಂತ ಸಾಹಿತಿಗಳು, ಕವಿಗಳು, ನಾಟಕ ವಿಭೂತಿಗಳು, ಸಣ್ಣಪುಟ್ಟ ಲೇಖಕರು ಎಲ್ಲರೂ ಇದ್ದಾರೆ. ನೋಡು ಅಷ್ಟು ದೂರದಲ್ಲಿದ್ದರೂ ನಿನ್ನ ಆಪ್ತಸ್ನೇಹಿತ ಬೀಚಿ ನಿನ್ನನ್ನೇ ನೋಡುತ್ತಿದ್ದಾನೆ. ನೀನು ಹಾಯಾಗಿ ಕಾಲಕಳೆಯಬಹುದು, ಹೋಗು ಯೋಚನೆಮಾಡಬೇಡ ಎಂದ. ಅವನು ಕೊಟ್ಟ ಭರವಸೆಯನ್ನು ನಗು ಮುಖದಿಂದಲೇ ಸ್ವಾಗತಿಸಿದೆ.

ಯಮ ಇನ್ನೂ ಮಾತನಾಡುತ್ತಲೇ ಇದ್ದ. ನಾನೂ ವರ್ಷಕ್ಕೆ ಒಮ್ಮೆಯಾದರೂ ಆ ಪ್ರಪಂಚಕ್ಕೆ ಹೋಗಿ ಅವರೊಡನೆ ಬೆರೆತು ಸ್ವಲ್ಪಕಾಲ ಇರುತ್ತೇನೆ. ಮನಸ್ಸಿಗೆ ಸ್ವಲ್ಪ ಹಿತವಾಗುತ್ತೆ. ನನಗೆ ತಾನೇ ಬಿಡುವೆಲ್ಲಿದೆ. ಆ ದೊಡ್ಡ ಸಾಲುಗಳ ಗುಂಪು ಕಾಣುತ್ತಿದೆಯಲ್ಲ, ಅವರ ಹೆಸರು, ವಿಳಾಸ ಎಲ್ಲವನ್ನೂ ಬರೆದುಕೊಂಡು ಅವರನ್ನು ಒಳಕ್ಕೆ ಬಿಡಬೇಕು. ಅದಕ್ಕಾಗಿ ಒಂದುಸಾವಿರ ಗುಮಾಸ್ತರನ್ನು ನೇಮಿಸಿದ್ದೇನೆ. ಅವರಿಗೆ ಊಟ, ತಿಂಡಿಗೂ ಬಿಡುವಿಲ್ಲ ಎಂದ.

ದಿಢೀರನೆ ಎಚ್ಚರವಾಯಿತು. ಹಾಗಾದರೆ ಈಗ ನಡೆದಿದ್ದೆಲ್ಲ ಕನಸು! ಪಕ್ಕದಲ್ಲಿ ನಾಗಾನಂದ ನಿಂತಿದ್ದಾರೆ. ಏನ್ ಸಾಹೇಬರೇ ಕನಸ್ಸಿನಲ್ಲೂ ನಗುತ್ತಿದ್ದೀರಿ. ಏಳು ಗಂಟೆಗೇ ಎದ್ದು ಕಾಫೀ ಕುಡಿಯುವವರು ಈ ದಿನ ಒಂಬತ್ತಾದರೂ ಎದ್ದಿಲ್ಲ, ಏಳಿ ಇವತ್ತು ಭಾನುವಾರ, ಒಂದೆರಡು ಗಂಟೆ ಕೆಲಸವಿದೆ. ಊಟ ಮಾಡಿಕೊಂಡು ಹೋಗೋಣ ಎಂದರು. ಕೂಡಲೇ ಎದ್ದು ಸ್ನಾನಕ್ಕೆ ಹೊರಟೆ.

90. ಹತ್ತತ್ತು ವರ್ಷಗಳ ಆತ್ಮ ಕಥನ

1926–1936: ನಾನು ಹುಟ್ಟಿದ್ದು ಜನವರಿ 1926ರಲ್ಲಿ. ನಾನು ಏಳು ವರ್ಷದವನಾದಾಗ ತಾಯಿಯವರು ತೀರಿಕೊಂಡರು. ನನ್ನ ಅಣ್ಣ, ಅತ್ತಿಗೆ ಮೈಸೂರಿಗೆ ಕರೆದಕೊಂಡು ಹೋದರು, ನನ್ನ ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ. 1933–

34ರ ಎರಡು ವರ್ಷಗಳ ಅವಧಿಯಲ್ಲಿ, ಅಣ್ಣನವರು ಮಾಧ್ಯಮಿಕ ಶಾಲೆಯ ಲೆಕ್ಕಗಳನ್ನು ಮಾಡುವುದರಲ್ಲಿ ಸಂಪೂರ್ಣ ತರಪೇತಿ ಕೊಟ್ಟಿದ್ದರು. ಅವರನ್ನು ಎಂದಿಗೂ ಮರೆಯುವಂತಿಲ್ಲ.

1935ರ ಕೊನೆಯಲ್ಲಿ ಚಿಕ್ಕಮಗಳೂರಿಗೆ ಹಿಂತಿರುಗಿದೆ.

1936–46: ನಾಲ್ಕು ವರ್ಷಗಳ ಕಾಲ ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ. ಆ ನಾಲ್ಕು ವರ್ಷಗಳಲ್ಲೂ ನನಗೆ ಲೆಕ್ಕದಲ್ಲಿ ನೂರಕ್ಕೆ ನೂರು ಅಂಕಗಳು! ನಂತರ ಮೂರು ವರ್ಷಗಳು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿದೆ. 1942ರಲ್ಲಿ ಕಾಂಗ್ರೆಸ್ ಚಳುವಳಿ ಶುರುವಾಯಿತು. ನಾನೂ ಅದರಲ್ಲಿ ಭಾಗವಹಿಸಿದ್ದೆ. ಮೂರನೆಯ ವರ್ಷ ತೇರ್ಗಡೆಯಾಗಲಿಲ್ಲ. ಖ.ಖ.ಐ.ಅ. ಪಾಸಾದ ಮೇಲೆ ಬೆಂಗಳೂರಿಗೆ ಹೋದೆ. ಅಲ್ಲಿ 1943–44ರ ಅವಧಿಯಲ್ಲಿ, ಟೈಪ್‌ರೈಟಿಂಗ್, ಷಾರ್ಟ್‌ಹ್ಯಾಂಡ್, ಅಕೌಂಟೆನ್ಸಿ ತೆಗೆದುಕೊಂಡು ಮೊದಲನೇ ದರ್ಜೆಯಲ್ಲಿ ತೇರ್ಗಡೆಯಾಯಿತು. ಕಾಫೀಬೋರ್ಡಿನಲ್ಲಿ ಕೆಲಸವೂ ಸಿಕ್ಕಿತು. ತಿಂಗಳ ಸಂಬಳ ರಾಜ್ಯ ಸರ್ಕಾರದ ಗುಮಾಸ್ತರಿಗಿಂತ ಸ್ವಲ್ಪ ಹೆಚ್ಚು. ನನಗೆ ಹದಿನೆಂಟು ವರ್ಷ ತುಂಬಿತ್ತು. ಮದುವೆಯೂ ಆಯ್ತು!

1946–1956: 1949ರಲ್ಲಿ ಚಿಕ್ಕಮಗಳೂರಿಗೆ ವರ್ಗವಾಯಿತು. 1950ರಲ್ಲಿ ನನ್ನ ಮೊದಲನೆಯ ಮಗ ಪ್ರಭಾಕರ ಹುಟ್ಟಿದ. ಚಿಕ್ಕಮಗಳೂರಿನಲ್ಲಿದ್ದಾಗ, ನನ್ನ ಸ್ನೇಹಿತರು ಮತ್ತು ನಾನೂ ಸೇರಿ, ಯುವಕ ಸಂಘ ಎಂಬ ಹೆಸರಿನಲ್ಲಿ ಒಂದು ಸಾಂಸ್ಕೃತಿಕ ಸಂಸ್ಥೆಯನ್ನು ಸ್ಥಾಪಿಸಿದೆವು. ಸುಮಾರು ಆರು ನಾಟಕಗಳನ್ನು ಆಡಿದೆವು. ಅಜ್ಜಂಪುರದಲ್ಲಿ, ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಆಡಿದ 'ಸಾಹಿತ್ಯ ಸ್ಟಾಕಿಂಗ್ ಕಂಪೆನಿ' ನಾಟಕಕ್ಕೆ ಮೂರನೆ ಬಹುಮಾನ ಬಂತು. 1953ರಲ್ಲಿ ನನ್ನ ಇಬ್ಬರು ಅವಳಿಜವಳಿ ಮಕ್ಕಳು (ಇಂದು, ಶ್ರೀಧರ) ಹುಟ್ಟಿದರು.

1956–1966: 1957ರಲ್ಲಿ ಬೆಂಗಳೂರಿಗೆ ವರ್ಗವಾಯಿತು. ನಮ್ಮ ಕೆಲವು ಅಧಿಕಾರಿಗಳು ಮತ್ತು ನಾವು ಸೇರಿಕೊಂಡು, ಆಷಾಢಭೂತಿ ಎಂಬ ನಾಟಕವನ್ನು ಆಡಿದೆವು. 1959ರಲ್ಲಿ ನನ್ನನ್ನು ಸ್ಟೆನೋಗ್ರಾಫರ್ ಆಗಿ ಬಾಳೆಹೊನ್ನೂರಿನಲ್ಲಿರುವ ಕಾಫೀ ರಿಸರ್ಚ್ ಸ್ಟೇಷನ್ನಿಗೆ ವರ್ಗಮಾಡಿದರು. ಅಲ್ಲಿದ್ದಾಗ ಆಫೀಸರ್ (ಡೈರೆಕ್ಟರ್ ಆಫ್ ರಿಸರ್ಚ್) ಜೊತೆ ಅನೇಕ ಕಾಫಿತೋಟಗಳಿಗೆ ಹೋಗುತ್ತಿದ್ದೆ. ನನ್ನ ಕಡೆಯ ಮಗ ಆನಂದ 1961ರಲ್ಲಿ ಹುಟ್ಟಿದ. ನಮ್ಮ ಸಹೋದ್ಯೋಗಿಗಳೆಲ್ಲ ಸೇರಿಕೊಂಡು ನಾಲ್ಕು ನಾಟಕಗಳನ್ನು ಪ್ರದರ್ಶಿಸಿದೆವು. 1965ರಲ್ಲಿ ಪುನಃ ಬೆಂಗಳೂರಿಗೆ ವರ್ಗವಾಯಿತು. ನನ್ನ ಇಬ್ಬರು ಸಹೋದ್ಯೋಗಿಗಳ ಮೂಲಕ ಮಹಾಬೋಧಿ

ಸೊಸೈಟಿ ಸ್ವಾಮೀಜಿಯವರ ದರ್ಶನವಾಯಿತು. ಅಲ್ಲಿ ಸುಮಾರು ಮುವ್ವತ್ತು ವರ್ಷಗಳ ಕಾಲ ಸೇವೆಮಾಡಿದೆ. 1965ರಲ್ಲಿ ನಮ್ಮ ಜಯನಗರದ ಮನೆ ಕಟ್ಟಿಸಲು ಪ್ರಾರಂಭಮಾಡಿ, 1966ರ ಅಕ್ಟೋಬರ್ನಲ್ಲಿ ಗೃಹಪ್ರವೇಶ ನಡೆಯಿತು.

1966–76: 1967ರಲ್ಲಿ ಡಾ. ಡಿ.ಎಸ್. ಶಿವಾನಂದ ಅವರ ಸಂಪರ್ಕ. ಅವರೂ, ನಾನೂ ಐವತ್ತು ವರ್ಷಗಳ ಪರಿಚಯದವರು. ಅವರ ವಿದ್ಯಾರ್ಥಿಗಳಾದ ಕೆಲವರ ಒ.ಇಜ. ಥೀಸಿಸ್‌ಗಳನ್ನು ಟೈಪ್ ಮಾಡಬೇಕಂತ ಬಲವಂತಮಾಡಿದರು. ನಾನು ಒಪ್ಪಿಕೊಳ್ಳಲೇಬೇಕಾಯಿತು. 1974ರಲ್ಲಿ ಮಗಳು ಇಂದಿರಾ ಪುರುಷೋತ್ತಮ್‌ರೊಂದಿಗೆ ಮದುವೆ ಆಯಿತು. ಮದುವೆಯಾದ ಹತ್ತು ದಿವಸಗಳಲ್ಲಿ ತಂದೆ (ವೆಂಕಟರಮಣ ಭಾಗವತರು) ಅವರ 95ನೇ ವಯಸ್ಸಿನಲ್ಲಿ ತೀರಿಕೊಂಡರು. 1976ರಲ್ಲಿ, ನನ್ನ ಹೆಂಡತಿ ಚಿನ್ನಮ್ಮ ಮತ್ತು ನಾನು ದೊಡ್ಡ ಪ್ರವಾಸವನ್ನು ಮಾಡಿದೆವು. ಕರ್ನಾಟಕದಲ್ಲಿ ಅನೇಕ ಸ್ಥಳಗಳು, ಗೋವಾ, ಮುಂಬೈ, ಎಲ್ಲೋರ, ಅಜಂತ, ಹೈದರಾಬಾದ್ ಮತ್ತು ಸಿಕಂದರಾಬಾದ್‌ಗಳನ್ನು ನೋಡಿದೆವು.

1976–86: ಪ್ರಭಾಕರ ಮತ್ತು ಶ್ರೀಧರ ಇಬ್ಬರಿಗೂ 1978, 1979ರಲ್ಲಿ ಮದುವೆ ಆಯಿತು. 1980ರಲ್ಲಿ ನನ್ನ ಹೆಂಡತಿ ಮತ್ತು ನಾನು ಇನ್ನೊಂದು ಪ್ರವಾಸವನ್ನು ಕೈಗೊಂಡಾಗ, ಅವಳಿಗೆ ಪಾರ್ಶ್ವವಾಯು ತಗುಲಿತು ಮದರಾಸಿನಲ್ಲಿದ್ದಾಗ. ಅಲ್ಲಿಂದ ಮುಂದಿನ ಪ್ರಯಾಣ ಮಾಡದೆ ಬೆಂಗಳೂರಿಗ ಹಿಂತಿರುಗಿದೆವು. 1984ರಲ್ಲಿ ನಾನು ಕಾಫೀಬೋರ್ಡ್ ಸರ್ವೀಸಿನಿಂದ ನಿವೃತ್ತನಾದೆ. ನಂತರ ಒಂದೆರಡು ಸಂಸ್ಥೆಗಳಲ್ಲಿ ನಾಲ್ಕಾರು ವರ್ಷಗಳು ಕೆಲಸಮಾಡಿದೆ.

1986–1996: 1993ರ ಏಪ್ರಿಲ್ ತಿಂಗಳಲ್ಲಿ, ನಾನು ಬಸ್ಸಿನಿಂದ ಬಿದ್ದು, ನನ್ನ ಹಿಂಭಾಗದ ಮೂಳೆ ಮುರಿಯಿತು. ಕೆ.ಟಿ. ಸುರೇಂದ್ರ ಅವರ ಕ್ಲಿನಿಕ್‌ನಲ್ಲಿ ಆಪರೇಷನ್ ಆಗಿ ಸ್ಟೀಲ್‌ಬಾಲ್ ಹಾಕಿದರು. ಅದಾದ ನಂತರವೂ ನಾನು ಅನೇಕ ಸ್ಥಳಗಳಿಗೆ ಪ್ರಯಾಣ ಮಾಡಿದೆ. ಮಹಾಬೋಧಿ ಆಶ್ರಮದ ಮೂಲಕ, ಕೆಲವಾರು ಬುದ್ಧನ ಸ್ಥಳಗಳಿಗೆ ಹೋಗಿಬರುವ ಅವಕಾಶ ದೊರೆಯಿತು. 1993ರಲ್ಲಿ ಮಗ ಆನಂದನ ಮದುವೆ ಆಯತು. 1994ರಲ್ಲಿ ನನ್ನ ಹೆಂಡತಿ ಚಿನ್ನಮ್ಮ 14 ವರ್ಷ ನರಳಿ, ತೀರಿಕೊಂಡಳು.

1996–2006: 1997ರಲ್ಲಿ ನ್ಯೂಯಾರ್ಕಿನಲ್ಲಿದ್ದ ಮಗಳು ಇಂದಿರಾ ಪುರುಷೋತ್ತಮ್ ನನ್ನನ್ನು ಅಮೆರಿಕಾಕ್ಕೆ ಕರೆಸಿಕೊಂಡಳು. ಆಗಲೇ ನಾನು ಗ್ರೀನ್ ಕಾರ್ಡ್ ಹೋಲ್ಡರ್ ಆಗಿದ್ದೆ. ಅನೇಕ ರಾಜ್ಯಗಳಿಗೆ ಹೋಗಿಬರುವ ಅವಕಾಶ ಸಿಕ್ಕಿತು. ಅಮೆರಿಕಾದ ಎರಡು ಆಸ್ಪತ್ರೆಗಳಲ್ಲಿ ಸ್ವಯಂಸೇವಕನಾಗಿ ಕೆಲಸ ಮಾಡಿದೆ. 1998ರಲ್ಲಿ ಎಲ್. ನಾಗಾನಂದರವರ ಪರಿಚಯವಾಗಿ ಅವರ ಆಫೀಸಿನಲ್ಲಿ ಕೆಲಸ

ದೊರಕಿತು. ಈಗ 28 ವರ್ಷಗಳಿಂದ ಅವರ ಜೊತೆ ಕೆಲಸ ಮಾಡುತ್ತಿದ್ದೇನೆ. 2003ರಲ್ಲಿ ನಾನು ಅಮೆರಿಕಾದ ಪ್ರಜೆಯಾದೆ.

2006–2016: 2006ರಲ್ಲಿ ಆಸ್ಟ್ರೇಲಿಯಾ ಪ್ರವಾಸ. ಅಲ್ಲಿ ನನ್ನ ಮಕ್ಕಳೆಲ್ಲ ಸೇರಿ 80ನೆ ವರ್ಷದ ಹುಟ್ಟುಹಬ್ಬವನ್ನು ಆಚರಿಸಿದರು.

2016–2026: 2016ರಲ್ಲಿ ನನಗೆ ಕನಕಾಭಿಷೇಕ ಆಚರಿಸಿದರು ಬೆಂಗಳೂರಿನಲ್ಲಿ. ಕಾರಣ, ನನ್ನ ಮೊಮ್ಮಗ ಅಶೋಕನಿಗೆ ಮಗಳು ಹುಟ್ಟಿದಳು. 2022ರ ಜನವರಿಗೆ ನನ್ನ 97 ವರ್ಷ ಮುಗಿಯಿತು.


2024ರಲ್ಲಿ 99 ವರ್ಷ ತುಂಬಿದಾಗ ಬೆಂಗಳೂರಿನ ಶ್ರೀ ಜಯರಾಮ ಸೇವಾ ಮಂಡಳಿಯಲ್ಲಿ, ಕುಟುಂಬ ವರ್ಗದವರು ಮತ್ತು ಬಂಧು ಬಳಗದವರು, ಎಲ್ಲರೂ ಒಟ್ಟಾಗಿ ಸೇರಿ ಅದ್ದೂರಿಯಾಗಿ ಹುಟ್ಟುಹಬ್ಬವನ್ನು ಆಚರಿಸಿದರು. ಉಡುಗೊರೆಗಳ ಮಳೆ ಸುರಿಸಿದರು.

2026ರಲ್ಲಿ ಜನವರಿ 8ಕ್ಕೆ 100 ವರ್ಷ ತುಂಬಲಿದೆ. ಆದಿನದಂದು ಭವ್ಯ ಸಮಾರಂಭ ಏರ್ಪಡಿಸುತ್ತೇವೆ ಎಂದು ಬಂಧು–ಮಿತ್ರರು–ಅಭಿಮಾನಿಗಳು ತಿಳಿಸಿದ್ದಾರೆ. ನಾನು ನಡೆದು ಬಂದ ದಾರಿಯಲ್ಲಿ ನಾನು ಜಯಶೀಲನಾಗಿರುವುದು ನನ್ನ ಭಾಗ್ಯ, ಬಂಧು–ಮಿತ್ರರ ಪ್ರೋತ್ಸಾಹ, ನನಗಿದ್ದ ಉತ್ಸಾಹ ಎಂದು ತಿಳಿಯುತ್ತೇನೆ.


ಅಮರಿಕಾದ 28 ವರ್ಷಗಳ ಅವಧಿಯಲ್ಲಿ ಹಲವಾರು ದೇಶಗಳಿಗೆ ಹೋಗುವ ಅವಕಾಶ ದೊರಕಿತು. ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಬಹಾಯಾ ಮತ್ತು ಹವಾಯ್ ದ್ವೀಪಗಳು, ಕೆನಡಾ, ದುಬಾಯ್, ಪೆರು, ಗೆಲಾಪಗೋಸ್, ಪೋರ್ಟೋರಿಕೊ ಮತ್ತು ಈಜಿಪ್ಟ್, ಇಂಡಿಯಾದಲ್ಲಿ ರಾಜಾಸ್ಥಾನ್, ಗುಜರಾತ್, ಅಂಡಮಾನ್ ಮತ್ತು ಡೈಯು ದ್ವೀಪಗಳು, ಶ್ರೀಲಂಕಾ ಮತ್ತು ವಾರಣಾಸಿ ಇತ್ಯಾದಿ ಪ್ರವಾಸ ನನ್ನ ಹವ್ಯಾಸಿ ನಾನೊಬ್ಬ, ಭಾರತ ಪ್ರವಾಸಿ ಅಷ್ಟೇ ಅಲ್ಲ ವಿಶ್ವ ಪ್ರವಾಸಿವಂದರೆ ತಪ್ಪಲ್ಲ. ದೇಶ ನೋಡಬೇಕು. ಕೋಶ ಓದಬೇಖು. ಎಂಬುದು ಗಾದೆ. ನಾನು ಸಾಕಷ್ಟು ದೇಶ ನೋಡಿದ್ದೇನೆ. ಬುಕ್ಕಾಂಬುಧಿ ಕೋಶ ರಚಿಸಿದ್ದೇನೆ. ಅದಕ್ಕಾಗಿ ಹತ್ತಾರು ಕೋಶ ಓದಿದ್ದೇನೆ. ಗಾದೆ ಮಾತನ್ನು ನಿಜ ಮಾಡಿದ್ದೇನೆ.

91. ಅನಾಜಿ ಮತ್ತು ನಾನು

ಅನಾಜಿಯವರು ನನಗೆ ಪರಿಚಯವಾದದ್ದು, ನಾನು ಅಮೆರಿಕಾಕ್ಕೆ ಬಂದ ಕೆಲವಾರು ವರ್ಷಗಳ ನಂತರ. ಕಾರಣ ನಾನು ಇಲ್ಲಿಗೆ ಬರುವವರೆಗೂ ನನಗೆ



ಪ್ರೊ. ಜಿ.ಅಶ್ವತ್ಥನಾರಾಯಣ



ಬರವಣಿಗೆಯ ಹವ್ಯಾಸವಿರಲಿಲ್ಲ. ಒಂದೆರಡು ಕೃತಿಗಳನ್ನು ಬರೆದಮೇಲೆ ಒಂದು ಪುಸ್ತಕಕ್ಕೆ ಮುನ್ನುಡಿ ಬರೆಸಬೇಕಾದ ಸಂದರ್ಭ ಬಂತು. ಆಗ ಖ್ಯಾತ ಬರಹ.ಕಾಮ್ ಶೇಷಾದ್ರಿವಾಸು ಚಂದ್ರಶೇಖರನ್ ಅವರ ತಂದೆ ಕೆ.ಟಿ. ಚಂದ್ರಶೇಖರನ್ ಅವರು ಅನಾಜಿಯವರ ಪರಿಚಯ ಮಾಡಿಸಿದರು. ಇಬ್ಬರ ಮನೆಗಳೂ ಹತ್ತಿರವೇ ಇದ್ದರೂ ಒಬ್ಬರಿಗೊಬ್ಬರ ಪರಿಚಯ ಇರಲಿಲ್ಲ. ಹಾಗೆ ಪ್ರಾರಂಭವಾದದ್ದು ಬರುಬರುತ್ತಾ ನಿಕಟ ಸಂಬಂಧ ಬೆಳೆದುಬಂತು.

ನಾನು ಎರಡುವರ್ಷಕ್ಕೊಮ್ಮೆ ಬೆಂಗಳೂರಿಗೆ ಹೋದಾಗ ನಾನು ಬರೆದ ಲೇಖನ ಅಥವಾ ಪುಸ್ತಕವನ್ನು ಅವರಿಗೆ ತೋರಿಸುತ್ತಿದ್ದೆ, ನೋಡಿಕೊಡಿ. ತಿದ್ದುಪಡಿಮಾಡಿ ಎಂದು. ನನ್ನ ಮೂರು ನಾಲ್ಕು ಪುಸ್ತಕಗಳಿಗೆ ಅವರು ಮುನ್ನುಡಿ ಬರೆದುಕೊಟ್ಟರು. ಅವರ ಅಮೂಲ್ಯ ಕಾಲದಲ್ಲಿ ಸ್ವಲ್ಪವನ್ನಾದರೂ ನನಗೆ ಮೀಸಲಾಗಿಡುತ್ತಿದ್ದರು. ಅದು ನನ್ನ ಭಾಗ್ಯ. ಅಮೆರಿಕಾದಿಂದ ಬೆಂಗಳೂರಿಗೆ ಬಂದಕೂಡಲೆ ಮೊದಲಭೇಟಿ ಅನಾಜಿಯವರೊಡನೆ. ಕೆಲವರು ಅಲ್ಲಿಗೆ ಬಂದಾಗ ಎರಡು ದಿವಸ ಮನೆಯಿಂದ ಹೊರಕ್ಕೇ ಬರುವುದಿಲ್ಲ, ಜೆಟ್‌ಲಾಗ್ ಅಂತ. ನನಗೆ ಜೆಟ್‌ಲಾಗ್ ಕಾಯಿಲೆ ಇಲ್ಲ. ನಾಲ್ಕೈದು ಗಂಟೆಗಳು ಸಾಕು. ಅನಾಜಿಯವರನ್ನು ನೋಡಿ ಸ್ವಲ್ಪಹೊತ್ತು ಮಾತನಾಡಿದರೆ ಮನಸ್ಸಿಗೆ ಹಿತವಾಗುತ್ತೆ.

ಒಂದುಬಾರಿ ಅಲ್ಲಿಗೆ ಬಂದಾಗ ನಾನು ರಚಿಸುತ್ತಿರುವ ಪದಕೋಶದ ಕರಡು ಕೃತಿಯನ್ನು ಅವರ ಮುಂದಿಟ್ಟೆ. ಕೆಲವಾರು ಪುಟಗಳನ್ನು ತಿರುವಿಹಾಕಿ. ಇದನ್ನು

ಮುಂದುವರಿಸಿ. ನಾನು ಸಹಕಾರ ಕೊಡುತ್ತೇನೆ ಎಂದು ಹೇಳಿ ಸಹಸಂಪಾದಕನಾಗಿ ಸಹಾಯ ಮಾಡುತ್ತೇನೆ ಎಂದರು. ನನ್ನ ಸಂತೋಷಕ್ಕೆ ಪಾರವೇ ಇಲ್ಲ. ಅಂತಹ ಹಿರಿಯ ಸಾಹಿತಿಗಳು ನನಗೆ ಬೆಂಬಲಕೊಡುತ್ತಾರೆಂಬ ನಂಬಿಕೆಯೇ ಇರಲಿಲ್ಲ. ಈ ವಿಷಯದಲ್ಲಿ ಅವರ ಮುಂದೆ ನಾನಿನ್ನೂ ವಿದ್ಯಾರ್ಥಿ. ಬುಕ್ಕಾಂಬುಧಿ ಕನ್ನಡ–ಇಂಗ್ಲಿಷ್ ಪದಕೋಶ, ಅನಾಜಿಯವರ ಬೆಂಬಲದಿಂದಾಗಿ. ಒಂದು ರೂಪಕ್ಕೆ ಬಂದು ಇತ್ತೀಚೆಗೆ ನಡೆದ ಅಮೇರಿಕದ ನಾವಿಕ ಕನ್ನಡ ಸಮ್ಮೇಳನದಲ್ಲಿ ಬಿಡುಗಡೆ ಆಯಿತು ಎಂಬುದು ಸಂತಸದ ಸಂಗತಿ, ಇದೀಗ ಬೆಂಗಳೂರಿನಲ್ಲಿ ಅಧಿಕೃತವಾಗಿ ಬಿಡುಗಡೆ ಆಗುತ್ತಿರುವುದೂ ಈ ಕೋಶದ ಬಿಡುಗಡೆಯ ಜತೆಗೆ ನನ್ನ 100 ವರ್ಷಗಳ ಜೀವಿತದಲ್ಲಿ ಘಟಿಸಿದ 100 ಪ್ರಸಂಗಗಳನ್ನು ನೂರು ಚೂರು ಪಾರು ಗ್ರಂಥವೂ ಬಿಡುಗಡೆ ಆಗುತ್ತಿರುವುದು ಸಂತೋಷ ಸಂಗತಿ ಆಗಿದೆ. ಇದ್ದಕ್ಕೆ ಮುಖ್ಯ ಕಾರಣ ಕರ್ತರಾದ ಬಿ.ವಿ.ರಾಜಾರಾಂ ಮತ್ತು ಅನಾಜಿ ಅವರಿಗೆ ಅಭಾರಿ ಆಗಿದ್ದೇನೆ.

ಅನಾಜಿಯವರ ಪುಸ್ತಕರಾಶಿಯನ್ನು ಒಮ್ಮೆ ನೋಡಬೇಕು. ಅವರ ಮನೆಯ ಕೆಳಭಾಗದ ಒಂದು ಕೊಠಡಿಯಲ್ಲಿ ತುಂಬಿದ್ದಾರೆ ಅವರ ಪುಸ್ತಕಗಳ ರಾಶಿಯನ್ನು, ಅವರ ಓದು, ಬರವಣಿಗೆಯ ರೂಮಿನಲ್ಲೂ ಪಸ್ತಕಗಳು, ಮಲಗುವ ಕೋಣೆಯ ಕೋಣೆಯಲ್ಲೂ ಪುಸ್ತಕಗಳು. ಕೆಳಭಾಗದ ಕೊಠಡಿಯೊಳಕ್ಕೆ ಸ್ವಲ್ಪ ದಪ್ಪನಾಗಿರುವವರು ಸಲೀಸಾಗಿ ಒಳಕ್ಕೆ ನುಗ್ಗುವುದಕ್ಕಾಗುವುದಿಲ್ಲ! ನಾನು ತೆಳ್ಳಗಿರುವುದರಿಂದ ಆದರೂ ಅಡ್ಡಡ್ಡಲಾಗಿ ಮೆತ್ತಗೆ ನುಗ್ಗಿಹೋಗಿದ್ದೆ. ಅನಾಜಿಯವರ ಹೆಂಡತಿ ಹೇಳುವಂತೆ, ಅಡುಗೇ ಮನೆಗೆ ಅವರ ಪುಸ್ತಕರಾಶಿಯನ್ನು ಇಡಲು ಪ್ರವೇಶ ಕೊಟ್ಟಿಲ್ಲವಂತೆ. ಕಾರಣ, ಅಲ್ಲಿಯೂ ಪುಸ್ತಕಗಳನ್ನು ತುಂಬಿದರೆ, ಅಡುಗೆ ಪದಾರ್ಥಗಳನ್ನು ಹುಡುಕುವುದೇ ಕಷ್ಟವಾಗುತ್ತೆ. ಆಗ ಅನಾಜಿಯವರ ಊಟ, ತಿಂಡಿ? ಆ ಭಯದಿಂದಾಗಿ ಹೆಂಡತಿಯ ಕರಾರಿಗೆ ಒಪ್ಪಿದ್ದಾರೆಂದು ವದಂತಿ!


ನಾನು ನೂರು ವರ್ಷಗಳ ತುದಿಯನ್ನು ಮುಟ್ಟಿದ್ದೇನೆ. ನೂರಾರು ವರ್ಷ ಬದುಕಲು ಇನ್ನೂ ನಾಲ್ಕಾರು ವರ್ಷಗಳು ಬದುಕಿರಬೇಕೆಂಬ ಆಸೆ ಇರುವುದರಿಂದ, ಅನಾಜಿಯವರ ಸ್ನೇಹವಾತ್ಸಲ್ಯ, ಕೃಪೆ ಸದಾ ನನ್ನ ಮೇಲಿರಲಿ ಎಂದು ಆಶಿಸುತ್ತೇನೆ.

92. ಅಂದು ಕೈ ಬೀಸಣಿಗೆ ಹುಡುಗ ಇಂದು ವಿದ್ಯುತ್ ಪಂಕದ ಕೆಳಗೆ ಅಜ್ಜ

ಮನೆಗಳಲ್ಲಿ ಬಿಸಿಲಿನ ತಾಪದಿಂದ ಸೆಖೆ ಆಗುತ್ತಿದ್ದರೆ, ಹೊದಿಸಿಕೊಳ್ಳುವ ಶಲ್ಯದಿಂದ ಅಥವಾ ರಟ್ಟಿನಿಂದ ಬೀಸಿಕೊಳ್ಳುತ್ತಿದ್ದರು. ಅದೇ ಬೀಸಣಿಗೆ. ಸೌದೆ ಒಲೆಯಲ್ಲಿ ಹೊಗೆಯಾದಾಗ ಅಥವಾ ಹೋಮಕುಂಡದಲ್ಲಿ ಹೊಗೆ ಇದ್ದರೆ, ಬಿದಿರನ್ನು ಸೀಳಿ ಮಾಡಿರುವ ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದರು.

ನನ್ನ ಬಾಲ್ಯದ ಕಾಲದಲ್ಲಿ ಮದುವೆ ಚಪ್ಪರದಲ್ಲಿ ಬೀಗರು ಕುಳಿತಿದ್ದಾಗ ಸೆಖೆಯನ್ನು ತಣಿಸಲು ಲಾಮಂಚದ ಬೇರಿನಿಂದ ತಯಾರಾದ ಬೀಸಣಿಗೆಯಿಂದ ಅವರಿಗೆ ಗಾಳಿ ಬೀಸುತ್ತಿದ್ದರು. ನಮ್ಮ ಹಳ್ಳಿ ಬುಕ್ಕಾಂಬುಧಿ ಮತ್ತು ತಾವರೆಕೆರೆಯಲ್ಲಿ ನಡೆದ ಮದುವೆಗಳಲ್ಲಿ ನಾನು ಆಗಿನ್ನೂ ಹುಡುಗ, ಈಗಲ್ಲ, ಆ ತರಹ ಗಾಳಿ ಬೀಸುತ್ತಿದ್ದೆ. ಎಲ್ಲರೂ ದೊಡ್ಡ ಜಮಖಾನೆಯ ಮೇಲೆ ಕೂರುತ್ತಿದ್ದರು. ಆಗೆಲ್ಲ ಕುರ್ಚಿಗಳಿರಲಿಲ್ಲ. ಲಾಮಂಚದ ಬೀಸಣಿಗೆಯ ಮೇಲೆ ಸ್ವಲ್ಪ ನೀರು ಚುಮುಕಿಸಿದರೆ ಗಮಗಮ ವಾಸನೆ ಬರುತ್ತೆ. ಬಹಳ ಚೆನ್ನಾಗಿದೆ ಬೀಸು ಎನ್ನುತ್ತಿದ್ದರು. ವಿದ್ಯುಚ್ಛಕ್ತಿಯ ಬಳಕೆ ಇನ್ನೂ ತಲೆಹಾಕಿರಲಿಲ್ಲ. ಅದು ಸುಮಾರು 1935–40ರ ಅವಧಿ.

ಅಷ್ಟೇಕೆ 1953ರಲ್ಲಿ ನಾನು ಚಿಕ್ಕಮಗಳೂರಿನಲ್ಲಿದ್ದಾಗ ನಮ್ಮ ಮನೆಗೆ ವಿದ್ಯುದ್ದೀಪ ಇರಲಿಲ್ಲ. ಸೀಮೆಎಣ್ಣೆ ದೀಪಗಳೇ ಎಲ್ಲೆಲ್ಲೂ ಮನೆ ಮಾಲಿಕರಿಗೆ ಗೋಗರೆದು ನಮಗೂ ವಿದ್ಯುದ್ದೀಪ ಹಾಕಿಸಿ ಎಂದು ಕೇಳಿಕೊಂಡೆವು. ನಮ್ಮದು ಮತ್ತು ನಮ್ಮ ಪಕ್ಕದ ಮನ ಎರಡೇ ಅವಳಿ ಜವಳಿಗಳಂತಿದ್ದದ್ದು. ಆ ಕಂಟ್ರಾಕ್ಟರ್ ಬಂದು ಎಲ್ಲೆಲ್ಲಿ ದೀಪ ಹಾಕಬೇಕೆಂದು ಗುರ್ತು ಹಾಕಿದಾಗ ಆ ದಿನವೇ ವಿದ್ಯುದ್ದೀಪ



ಬರಬಹುದೆಂದು ತಿಳಿದಿದ್ದೆವು. ಬಂದದ್ದು ಆರು ತಿಂಗಳ ನಂತರ! ಆ ದಿನ ನಮ್ಮ ಮನೆಯಲ್ಲಿ ಸಿಹಿ ಊಟ!

ಆದರೂ ವಿದ್ಯುಚ್ಛಕ್ತಿಯ ಬೀಸಣಿಗೆ ಅಥವಾ ಬೇರೆ ಬೇರೆ ಸಲಕರಣೆಗಳು ಇರಲಿಲ್ಲ. ಕೆಲವು ದೊಡ್ಡ ಮನೆಗಳಲ್ಲಿ ಕೊಠಡಿಯ ಮೇಲ್ಛಾವಣಿಗೆ ವಿದ್ಯುಚ್ಛಕ್ತಿಯ ಬೀಸಣಿಗೆಯನ್ನು ತಗುಲಿಸಿದ್ದರು. ಈಚೆಗೆ ಎ.ಸಿ. ಕರಂಟ್ ಎಂದು ಹೇಳುವ ಸಲಕರಣೆಯನ್ನು ಅಳವಡಿಸಿದ್ದಾರೆ. ಅದು ಎಲ್ಲಿದೆ ಅನ್ನುವುದೂ ಗೊತ್ತಾಗುವುದಿಲ್ಲ. ಹವಾ ತಣ್ಣಗಿರುತ್ತೆ. ಅಂದು ಕೈ ಬೀಸಣಿಗೆ ಹುಡುಗ ಇಂದು ವಿದ್ಯುತ್ ಪಂಕದ ಕೆಳಗೆ ಅಜ್ಜನಾಗಿದ್ದೇನೆ.

93. ತಾತನ ಕಾಲದಲ್ಲಿ ತಂದೆಯ ಕಾಶೀಯಾತ್ರೆ.

ತಂದೆ ವೆಂಕಟರಮಣ ಭಾಗವತರು 1936–37ರಲ್ಲಿ ಎಂಟು ಹತ್ತು ಜನರ ಗುಂಪನ್ನು ಕರೆದುಕೊಂಡು ಕಾಶೀಯಾತ್ರೆ ಮಾಡಿದರು. ಆಗೆಲ್ಲ ಪ್ರಯಾಣ ಸೌಲಭ್ಯ ಅಷ್ಟೇನು ಸುಲಭವಾಗಿರಲಿಲ್ಲ. ಬಸ್, ರೈಲುಗಳೇ ಆದರೂ, ಈಗಿನಹಾಗೆ ಘಳಿಗೆಗೊಂದು ಗಂಟೆಗೊಂದು ಸಿಗುವ ಕಾಲವಲ್ಲ.


ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ಬರಬೇಕು ಬಸ್ಸಿನಲ್ಲಿ. ಅಲ್ಲಿಂದ ಮುಂದಕ್ಕೆ ರೈಲು ಪ್ರಯಾಣ. ತಂದೆಯವರು ಎಲ್ಲರಿಗೂ ಬಸ್ ಟಿಕೆಟ್ ಕೊಂಡುಕೊಂಡು ಗುಂಪಿನ ಒಬ್ಬ ಪ್ರಯಾಣಿಕರಾದ ಸುಬ್ಬಮ್ಮ ಎಂಬುವವರಿಗೆ ಟಿಕೆಟ್‌ಗಳನ್ನು ಜೋಪಾನವಾಗಿ ಇಟ್ಟುಕೊಂಡಿರಬೇಕೆಂತ ತಿಳಿಸಿದ್ದರಂತೆ. ಅವರು ಸೀರೆಯ ಸೆರಗಿನ ತುದಿಯಲ್ಲಿ ಕಟ್ಟಿಕೊಂಡಿದ್ದರು. ಬಸ್‌ನಿಲ್ದಾಣದಿಂದ ಬಸ್ ಹೊರಡಲು ಸಿದ್ದವಾಗಿತ್ತು. ಇನ್ನೇನು ಟಿಕೆಟ್‌ಗಳನ್ನು ತೆಗೆದುಕೊಡಬೇಕು ಅನ್ನುವಾಗ ಜೋರಾಗಿ ಗಾಳಿಬೀಸಿ ಎಲ್ಲವೂ ದಿಕ್ಕಾಪಾಲಾಗಿ ಹಾರಿಹೋಯಿತು! ತಂದೆಯವರು ರೇಗಿಕೊಂಡು, ಮಂಗನಹಾಗೆ ಮಾಡಿದೀಯಲ್ಲ, ಈಗ ಏನುಮಾಡಬೇಕೆಂತ ತೋಚುತ್ತಿಲ್ಲ ಎಂದು ಅವರನ್ನು ಬೈದರು. ನಿಮ್ಮಂಥವರನ್ನು ಎಲ್ಲಿಯೂ ಕರೆದುಕೊಂಡು ಬರಬಾರದು ಎಂದು ಪೇಚಾಡಿಕೊಂಡರು.

ಅಷ್ಟರಲ್ಲಿ ದಯಾವಂತನಾದ ಬಸ್ ಕಂಡಕ್ಟರ್, ಯೋಚಿಸ ಬೇಡಿ ಸ್ವಾಮಿ, ನೀವು ಟಿಕೆಟ್‌ಗಳನ್ನು ತೆಗೆದುಕೊಂಡಿದ್ದೀರಿ ಅನ್ನುವುದು ನನಗೆ ಗೊತ್ತು. ಎಲ್ಲರೂ ಬಸ್‌ಒಳಗೆ ಕುಳಿತುಕೊಳ್ಳಿ ಎಂದ. ಬೆಂಗಳೂರು ಸೇರಿದನಂತರ ಮುಂದಕ್ಕೆ ರೈಲು ಪ್ರಯಾಣ ಮಾಡಿ ಕಾಶೀಯಾತ್ರೆ ಮುಗಿಸಿ ಎಲ್ಲರೂ ಕ್ಷೇಮವಾಗಿ ವಾಪಸ್ ಬಂದರು.

ಪ್ರಬಂಧ

94. ಮಾವು ನೂರು ತರಹ

ಅಯ್ಯೋ ನೀವು ಹೇಳ್ತಾಇರೂದನ್ನು ಕೇಳಿದರೆ, ನಿಜಕ್ಕೂ ಇಷ್ಟೊಂದು ಬಗೆಯ ಮಾವಿನಹಣ್ಣು ಇದೆ ಅಂತ ನಾನು ಕೇಳಿಯೇ ಇರಲಿಲ್ಲ. ಏನಿದ್ರೂ ನಮ್ಮ ಬೆಂಗಳೂರಿನ ಜಯನಗರದ ಮಾರ್ಕೆಟ್ಟಿನಲ್ಲಿ ಸಿಗುವಂತಹ ಹಣ್ಣುಗಳು, ರಸಪೂರಿ, ಮಲಗೋಬಾ, ಬಾದಾಮಿ, ಗಿಣಿಮೂತಿ ಇಷ್ಟೇ. ನಾನು ಕೇಳಿಯೂ ಇದೀನಿ, ನೋಡಿಯೂ ಇದೀನಿ, ತಿಂದೂ ಇದೀನಿ. ಅಷ್ಟೇ ಅಲ್ಲ, ಆ ಮರಗಳನ್ನೂ ನೋಡಿದೀನಿ!



ರಸಪೂರಿ ಮತ್ತು ಮಲಗೋಬಾ ಹಣ್ಣಿನ ಮರಗಳು ಎತ್ತರಕ್ಕೆ ಬೆಳೆಯುವುದಿಲ್ಲ. ಮಲಗೋಬಾ ಹಣ್ಣಿನ ಮರದಕೆಳಗೆ ಒಬ್ಬ ಹುಡುಗ ನಿಂತುಕೊಂಡು ಇಪ್ಪತ್ತು–ಇಪ್ಪತ್ತೈದು ಹಣ್ಣನ್ನು ಕೀಳಬಹುದು. ಆ ಹಣ್ಣಿನ ತೊಟ್ಟು ಒಂದು ಮೊಳದುದ್ದ ಇರುತ್ತೆ. ಎತ್ತರದಲ್ಲಿದ್ದ ಹಣ್ಣುಗಳನ್ನು ಕೊನೆಗಳುವಿನಿಂದ ಕೆಳಕ್ಕೆ ತರುತ್ತಾರೆ. ರಸಪೂರಿ

ಮತ್ತು ಇತರ ಕಾಯಿಗಳು ಹಣ್ಣಾದಾಗ ಬೇರೆ ಬಣ್ಣಕ್ಕೆ ತಿರುಗಿದರೂ ಮಲಗೋಬಾ ಸಾಮಾನ್ಯವಾಗಿ ಹಸುರಾಗಿಯೇ ಇರುತ್ತೆ.

ಇದಲ್ಲದೆ ಕೊಬರಿಮಾವು, ಅಡಕೆಪುಟ್ಟ, ಗುಂಜುಮಾವು, ಅಲಫಾಂಜ, ಗುಂಗೆಮಾವು. ಚಂದ್ರಮಾವು. ಗದ್ದೆಮಾರು, ಮಿಡಿಮಾವು. ಕೊಬರಿಮಾವು ಹಣ್ಣಾಗುವುದಿಲ್ಲ. ಕಾಯನ್ನು ತಿಂದರೆ ಕೊಬರಿತುರಿ ತಿಂದಹಾಗಿರುತ್ತೆ. ಅಡಕೆಪುಟ್ಟ ಒಂದು ನಿಂಬೇಹಣ್ಣಿನ ಗಾತ್ರ ಇರುತ್ತೆ. ಇನ್ನೆರಡು ಜಾತಿಯ ಮಾವಿನಹಣ್ಣು ಬಹಳ ರುಚಿಯಾಗಿರುತ್ತೆ. ಅದರ ಮರ ತುಂಬಾ ಎತ್ತರಕ್ಕೆ ಬೆಳೆಯುತ್ತೆ. ಮರಕ್ಕೆ ಹತ್ತುವುದು ಕಷ್ಟ. ಸಾಮಾನ್ಯವಾಗಿ ಬೆಳಗಿನ ಝಾವ ತೊಟ್ಟು ಕಳಚಿ ಹಣ್ಣು ನೆಲದಮೇಲೆ ಬೀಳುತ್ತೆ.

ಗುಂಜುಮಾವು ಹಣ್ಣನ್ನು ಹೆಚ್ಚುವುದಿಲ್ಲ. ಒಳಗೆ ನಾರುನಾರಾಗಿರುತ್ತೆ. ಮೇಲೆ ಒಂದು ತೂತುಮಾಡಿ ರಸವನ್ನು ಹೀರಬೇಕು. ಗುಂಗೆಮಾವು ಅದು ಮೊಗ್ಗಾಗಿ, ಹೂವಾಗಿರುವಾಗಲೇ ಒಂದು ಗುಂಗೆಹುಳು ಅದರೊಳಗೆ ಸೇರಿಬಿಡುತ್ತೆ. ಅದಕ್ಕೆ ಮೋಕ್ಷ ನಾವು ಆ ಹಣ್ಣನ್ನು ಹೆಚ್ಚಿದಾಗ ಆ ಹುಳು ಹಾರಿಹೋಗುತ್ತೆ.

ಗದ್ದೆಮಾರು, ಮಿಡಿಮಾವು ಹಣ್ಣಾಗುವುದಿಲ್ಲ. ಅವೆರಡೂ ಉಪ್ಪಿನಕಾಯಿ ಮಾಡುವುದಕ್ಕೆ ಮೀಸಲು. ಗದ್ದೆಮಾರು ಒಂಟಿಯಾಗಿ, ಮಿಡಿಮಾವು ಗೊಂಚಲು ಗೊಂಚಲಾಗಿ ಬಿಟ್ಟಿರುತ್ತೆ. ಮರವೂ ಎತ್ತರವಾಗಿ ಬೆಳೆಯುತ್ತೆ. ಗದ್ದೆಮಾರು ಕಾಯನ್ನು ಕೊನೆಗತ್ತಿಯಿಂದ ಕೆಡವಬಹುದು. ಮಿಡಿಮಾವನ್ನು ಮಾತ್ರ ಮರಹತ್ತಿ, ಸೊಂಟಕ್ಕೆ ಗೋಣೀಚೀಲವನ್ನು ಕಟ್ಟಿಕೊಂಡು ಗೊಂಚಲನ್ನು ಕತ್ತರಿಸಿ ಚೀಲಕ್ಕೆ ತುಂಬಿಕೊಂಡು ಇಳಿಸುತ್ತಾರೆ.

ಮಿಡಿಕಾಯಿನ ಗಾತ್ರ ಅರ್ಧ ನಿಂಬೆಹಣ್ಣಿನ ಗಾತ್ರ. ಅದನ್ನು ಉಪ್ಪಿನಕಾಯಿ ಮಾಡುವಾಗ ಹೆಚ್ಚುವುದಿಲ್ಲ. ಆದರೆ ಗದ್ದೆಮಾರು ಮಾವಿನಕಾಯನ್ನು ಮಚ್ಚಿನಿಂದಲೇ ಹೆಚ್ಚಬೇಕು. ಮಿಡಿಕಾಯನ್ನು ಮರಿಮಗು ಎನ್ನುವುದಾದರೆ, ಗದ್ದೆಮಾರು ಕಾಯನ್ನು ಮುತ್ತಾತನ ತಾತ ಎನ್ನಬಹುದು!

95. ಅಮೆರಿಕಾದ ಆಫೀಸುಗಳಲ್ಲಿ ದಂಡವಾಗುವ ಪದಾರ್ಥಗಳು

ಅಮೆರಿಕಾದ ಒಂದೊಂದು ಆಫೀಸಿನಲ್ಲೂ ಬಿಳೀಕಾಗದ ಎಷ್ಟು ದಂಡವಾಗುತ್ತೆ ಯೋಚಿಸಿ. ದಿನದಿನಕ್ಕೂ ಸಾವಿರಾರು ಬಿಳೀಕಾಗದ ಒಂದೆರಡು ತಪ್ಪಾಗಿದ್ದರೂ ಸಾಕು ತೆಗೆದು ತೊಟ್ಟಿಗೆ ಬಿಸಾಡುತ್ತಾರೆ. ಪೆನ್ಸಿಲ್‌ಗಳು ಸ್ವಲ್ಪ ಸಣ್ಣದಾದರೆ ಅದನ್ನು ಉಪಯೋಗಿಸುವುದಿಲ್ಲ. ಬೆಂಗಳೂರಿನ ಕೆಲವು ಆಫೀಸುಗಳಲ್ಲಿ, ಹೆಚ್‌ಎಎಲ್

ಕಾರ್ಖಾನೆಯಲ್ಲಿ, ಸಣ್ಣದಾದ ಪೆನ್ಸಿಲ್‌ಗಳನ್ನು ಅಲ್ಯೂಮಿನಮ್ ಕೊಳವೆಗೆ ಸೆಕ್ಕಿಸಿ ಕೊನೆಯವರೆಗೂ ಉಪಯೋಗಿಸುತ್ತಿದ್ದರು.

ನಮ್ಮ ಆಫೀಸಿನಲ್ಲಿಯೇ ಬಿಳಿಯಕಾಗದ ಒಂದುಕಡೆ ಅಚ್ಚಾಗಿದ್ದದ್ದು ಒಂದು ಪುಟದಲ್ಲಿ ಎರಡು ಮೂರು ತಪ್ಪಾಗಿದ್ದರೆ ಅದನ್ನು ಮಾತ್ರ ಸರಿಪಡಿಸುವುದಿಲ್ಲ. ನೂರೈವತ್ತು ಇನ್ನೂರು ಹಾಳೆಗಳಿರುವ ಟ್ಯಾಕ್ಸ್ ರಿಟರ್ನ್‌ಗಳನ್ನು ಹಾಗೇ ತೊಟ್ಟಿಗೆ ತುಂಬುತ್ತಾರೆ. ನಾನು ಬೆಂಗಳೂರು ಮಹಾಬೋಧಿ ಸೊಸೈಟಿಯಲ್ಲಿ ಕೆಲಸಮಾಡುತ್ತಿದ್ದಾಗ ಟಪಾಲಿನಲ್ಲಿ ಬಂದ ಕವರುಂಗಳನ್ನು ಹರಿದು ಅದರ ಹಿಂಭಾಗದಲ್ಲಿ ಬರೆಯುವುದಕ್ಕೆ ಉಪಯೋಗಿಸುತ್ತಿದ್ದೆವು. ಸ್ವಾಮೀಜಿಯವರು ಪತ್ರಿಕೆಗೆ ಲೇಖನವನ್ನು ಹೇಳುವಾಗ ಕವರ್ ಹಿಂಭಾಗದಲ್ಲಿ ಷಾರ್ಟ್ ಹ್ಯಾಂಡ್‌ನಲ್ಲಿ ಬರೆದುಕೊಳ್ಳುತ್ತಿದ್ದೆ.

ಕೆಲವು ಕಂಪೆನಿಯವರು ಆಫೀಸುಗಳಿಗೆ ಬೇಕಾಗುವ ಸಾಮಗ್ರಿಗಳ (ಬಿಳೀಕಾಗದ, ಪೆನ್ಸಿಲ್, ಪೆನ್, ಕಂಪ್ಯೂಟರ್ ಇತ್ಯಾದಿ) ಒಂದು ಪುಸ್ತಕವನ್ನು, ಅದು ಸುಮಾರು ಇನ್ನೂರು ಮುನ್ನೂರು ಹಾಳೆಗಳಿಂದ ಆಗಿರುವುದು ಅಂಚೆಯಮೂಲಕ ಕಳುಹಿಸುತ್ತಾರೆ. ನಾವು ಒಂದುಬಾರಿಯಾದರೂ ಏನನ್ನೂ ಅವರಿಂದ ಕೊಂಡಿರುವುದಿಲ್ಲ. ಆದರೂ ನಮಗೆ ಬರುತ್ತೆ. ಅದನ್ನು ಅಚ್ಚುಹಾಕಿಸುವುದಕ್ಕೆ ಎಷ್ಟು ಹಣ ಖರ್ಚಾಗಬಹುದು. ಅಂಚೆಯ ವೆಚ್ಚ. ಇದು ಅನ್ಯಾಯದ ಖರ್ಚು. ಒಂದೆರಡು ಆಫೀಸುಗಳಲ್ಲಿ ಮಾತ್ರವಲ್ಲ, ಸಾವಿರಾರು ಆಫೀಸುಗಳಲ್ಲಿ. ಅದನ್ನು ತೆಗೆದುಕೂಡ ನೋಡುವುದಿಲ್ಲ. ಸೀದಾ ತೊಟ್ಟಿಗೆ ಹೋಗುತ್ತೆ.

ಅಮೇರಿಕೆಯಲ್ಲಿ ದಂಡವಾಗುವ ಪದಾರ್ಥಗಳ ಭಾರತದಲ್ಲಿ ಹಣದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳನ್ನು ಸಾಕಬಹುದು. ಅಷ್ಟೇಕೆ ಮನೆಮನೆಗಳಲ್ಲಿ ಉಪಯೋಗಿಸುವಂತಹ ಸಾಮಾನುಗಳು, ಕುರ್ಚಿ, ಮೇಜು, ಮಂಚ ಸ್ವಲ್ಪ ಮುಕ್ಕಾಗಿದ್ದರೂ ತೆಗೆದು ಹೊರಗಡೆ ರಸ್ತೆಯ ಅಂಚಿನಲ್ಲಿ ಇಟ್ಟುಬಿಡುತ್ತಾರೆ. ಸರಿಯಾಗಿದ್ದ ಪದಾರ್ಥಗಳನ್ನು ಸಹ ಇದನ್ನು ಬಹಳ ವರ್ಷಗಳಿಂದ ಬಳಸುತ್ತಿದ್ದೇವೆ. ಹೊಸದನ್ನು ತರಬೇಕು. ಮಕ್ಕಳಿಗೆ ಬಟ್ಟೆಯನ್ನು ತಂದರೆ, ಆ ಬಣ್ಣದ್ದು ನನಗೆ ಚನ್ನಾಗಿಲ್ಲ ಎಂದು ಮಗ ಹೇಳಿಬಿಟ್ಟರೆ ಸಾಕು ಅದನ್ನು ಅಂಗಡಿಗೆ ವಾಪಸ್ ಕೊಡುವುದಕ್ಕೆ ಅರ್ಧ ದಿನ ಬೇಕಾಗುತ್ತೆ, ಅದನ್ನು ಬಿಸಾಡಬೇಕು. ಮಕ್ಕಳನ್ನು ಆ ರೀತಿ ಬೆಳೆಸಿರುತ್ತಾರೆ.

ಆಹಾರಪದಾರ್ಥಗಳು ದಂಡವಾಗುವುದಂತೂ ಲೆಕ್ಕಕ್ಕಿಲ್ಲ. ಅಂಗಡಿಗಳಲ್ಲೂ ಅಚ್ಚ ಹಸುರಾಗಿರುವ ತರಕಾರಿ, ಹುರುಳಿಕಾಯಿ, ಬೆಂಡೇಕಾಯಿ ಗಿರಾಕಿಗಳು ಬೀಲಕ್ಕೆ

ತುಂಬುವಾಗ ಸ್ವಲ್ಪ ನೆಲದಮೇಲೆ ಬಿದ್ದರೆ, ಅದನ್ನು ವಾಪಸ್ ಹಾಕುವುದಿಲ್ಲ. ತಕ್ಷಣ ಗುಡಿಸಿ ತೊಟ್ಟಿಗೆ ಹಾಕುತ್ತಾರೆ.

ಬೆಂಗಳೂರಿನಲ್ಲಿ ತರಕಾರಿಗಳು ಒಂದುಭಾಗ ಕಪ್ಪಾಗಿದ್ದರೆ ಆ ಭಾಗವನ್ನು ಕತ್ತರಿಸಿ, ಗುಡ್ಡೆಯಾಗಿಟ್ಟು ಕಡಮೇಬೆಲೆಗೆ ಮಾರುತ್ತಾರೆ.

ಇಲ್ಲ ಬಳಸುವ ತರಹಾವಾರಿ ಟಿಶ್ಯುಪೇಪರ್ಗಳ ಖರ್ಚಂತೂ ಅಷ್ಟಿಷ್ಟಲ್ಲ. ಯಾವನೋ ಒಬ್ಬ ಲೆಖ್ಯಹಾಕಿ ಅವುಗಳಿಗೆ ತೆರುವ ಹಣ ಭಾರತದ ಒಟ್ಟು ಆದಾಯಕ್ಕೆ ಸಮಾನವಾಗುತ್ತೆ ಎಂದು ತಿಳಿಸಿದ್ದನಂತೆ!

96. ಪಾಪ, ಪಾಪಿ, ಪಾಪೂ

ಪಾಪ, ಪಾಪಿ, ಪಾಪೂ ಈ ಪದಗಳನ್ನು ನಾವು ಸಾಮಾನ್ಯವಾಗಿ ಪ್ರತಿನಿತ್ಯವೂ ಬಳಸುತ್ತೇವೆ. ಚಿಕ್ಕಮಕ್ಕಳನ್ನು. ಗಂಡಾಗಲಿ, ಹೆಣ್ಣಾಗಲಿ, ಪಾಪೂ, ಪಾಪ ಲೇ ಎಂದೆಲ್ಲ ಮುದ್ದಿಸುತ್ತೇವೆ. ಅವರು ದೊಡ್ಡವರಾದಾಗ. ಅಡ್ಡಹೆಸರಿನಂದ ಪಾಪಮ್ಮ, ಪಾಪಣ್ಣಿ, ಪಾಪಚ್ಚಿ ಎನ್ನುತ್ತೇವೆ.

ಪಾಪ ಅವನು ಎಷ್ಟು ಚನ್ನಾಗಿ ಮಾತನಾಡಿದ.

ಪಾಪಿ ಎನ್ನುವ ಪದವನ್ನು ಕೆಟ್ಟನಡತೆ ಇದ್ದವನಿಗೆ ಅಥವಾ ಇದ್ದವಳಿಗೆ ಬಯ್ಯುವಾಗ ಹೇಳುತ್ತೇವೆ. ಅಯ್ಯೋ ಪಾಪಿ ಯಾಕೆ ಇಂತಹ ಕೆಲಸಮಾಡಿದೆಯೋ, ನಿಮ್ಮ ಅಪ್ಪ ಎಷ್ಟು ಒಳ್ಳೆಯವರು, ಮಹಾನುಭಾವರು ಅವರು, ಅವರ ಹೆಸರಿಗೆ ಕಳಂಕತಂದೆ.

ಹೆಂಗಸಾಗಿ ಹುಟ್ಟಿ ಸಾರ್ಥಕವಾಯಿತು ಬಿಡು ಅಯ್ಯೋ ಪಾಪಿಮುಂಡೇದೆ. ಅಂದರೆ ಗಂಡಸಾದವನು ಕೆಟ್ಟಕೆಲಸ ಮಾಡಬಹುದೆಂದೇ.

ಹೋಗಲಿ ಬಿಟ್ಟುಬಿಡಪ್ಪ ಪಾಪ ಅವನಿನ್ನೂ ಚಿಕ್ಕ ಹುಡುಗ.

ಅಯ್ಯೋ ಪಾಪ, ಅಯ್ಯೋ ಪಾಪ ಎಂದಂದೇ ಅವನನ್ನು ಅಟ್ಟದಮೇಲೆ ಕೂರ್ಸಿದೀರಿ ನೀವೆಲ್ಲ.

ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುದ್ದ ನೀರು ಅನ್ನುವುದು ಗಾದೆ.

ಅಯ್ಯೋ ಪಾಪಿ ಇದನ್ನೆಲ್ಲ ಯಾಕೆ ಬರೆದೆಯೋ ಅಂತ ನೀವು ನನಗೆ ಹೇಳಿದರೆ ನನಗೇನೂ ಬೇಸರವಿಲ್ಲ. ಏನು ಆಕಾಶ ತಲೆಮೇಲೆ ಬಿದ್ದಹಾಗೆ ಕೂಗಾಡ್ತಿದ್ದೀರ. ನನ್ನ ಮನಸ್ಸಿಗೆ ತೋಚಿತು ಬರೆದೆ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದವರು ಮೆಚ್ಚುತ್ತಾರೆ ಪಾಪ. ಅದೇ ನನ್ನ ಪುಣ್ಯ.

97. ಅಮೆರಿಕಾದ ನಾಯಿಗಳಿಗೆ ಶುಶ್ರೂಷೆ

ನಾಯಿ, ಬೆಕ್ಕುಗಳಿಗೆ ಅಮೆರಿಕಾದಲ್ಲಿ ಶುಶ್ರೂಷೆ ಮಾಡುವುದನ್ನು ನೋಡಬೇಕು. ಅವುಗಳಿಗೆ ಬೇಕಾಗುವ ತಿಂಡಿ, ಆಟಪಾಟಗಳಿಗೆ ತಕ್ಕ ಸಾಮಾನುಗಳು, ಕೂತು ಮಲಗುವುದಕ್ಕೆ ವಿಶೇಷ ರೀತಿಯ ಆಸನ. ಇವುಗಳನ್ನು ಮಾರಾಟ ಮಾಡುವುದಕ್ಕೆ ದೊಡ್ಡ ಅಂಗಡಿ. ಅದನ್ನು ಪೆಟ್‌ಮಾರ್ಟ್ ಎಂದು ಕರೆಯುತ್ತಾರೆ. ಆ ಅಂಗಡಿಯಲ್ಲಿ ಬೇರೆ ಯಾವ ಪದಾರ್ಥಗಳೂ ಸಿಗುವುದಿಲ್ಲ. ಆ ತಿಂಡಿಯ ಚೀಲಕ್ಕೆ ಇಪ್ಪತ್ತೈದು ಡಾಲರ್. ಅದು ಮೂರು ತಿಂಗಳಿಗೆ ಸಾಕಾಗುತ್ತೆ.

ಮೂರು ನಾಲ್ಕು ತಿಂಗಳಿಗೊಮ್ಮೆ ನಾಯಿಯ ಕೂದಲನ್ನು ಕತ್ತರಿಸುವುದಕ್ಕೆ ಇಪ್ಪತ್ತೈದು ಡಾಲರ್. ಅದಕ್ಕೆ ಬೆಚ್ಚಗಿರುವ ನೀರಿನಲ್ಲಿ ಸ್ನಾನಮಾಡಿಸಿ, ಬಿಸಿ ಗಾಳಿಯನ್ನು ಬಿಟ್ಟು ಮೈಯನ್ನು ಒರೆಸಿ ಪೌಡರ್ ಹಾಕುತ್ತಾರೆ! ನಂತರ ಎರಡು ಬಿಸ್ಕೆಟ್ ತಿನ್ನಿಸಿ, ಮುದ್ದುಮಾಡಿ ವಾಪಸ್‌ಕೊಡುತ್ತಾರೆ. ನಾಯಿಗಳಿಗೆ ದೊರಕುವ ಉಪಚಾರ ಮನುಷ್ಯರಿಗೆ ಸಿಗಲಾರದು ಬಹುಶಃ. ಒಂದು ದಿಕ್ಕಿನಿಂದ ಅದು ನಾಯಿ. ಇನ್ನೊಂದು ದಿಕ್ಕಿನಿಂದ ಅದು ದೇವರು ಎಂದು ಇಂಗ್ಲಿಷ್ ಭಾಷೆಯಲ್ಲಿ ಹೇಳುತ್ತಾರೆ (ಆಔಆ=ಉಔಆ). ಆದ್ದರಿಂದಲೇ ಅದಕ್ಕೆ ವಿಶೇಷ ಉಪಚಾರ!

ಅಮೆರಿಕಾದಲ್ಲಿ ನಾಯಿಗಳಿಗೂ ಕರ್ಮಸಂಸ್ಕಾರಗಳಿವೆ. ಅವು ಸತ್ತಾಗ ಮನುಷ್ಯರ ಪಾರ್ಥಿವ ಶರೀರಕ್ಕೆ ದಹನಸಂಸ್ಕಾರ ಮಾಡಿದಂತೆ. ಅವುಗಳನ್ನು ಸುಡುತ್ತಾರೆ. ಬೂದಿಯನ್ನು ಒಂದು ಗಾಜಿನ ಸೀಸೆಗೆ ಹಾಕಿ, ನಮಗೆ ಬೇಕು ಎಂದರೆ ಮನೆಗೆ ಕಳುಹಿಸುತ್ತಾರೆ. ಮನೆಯವರು ಅದಕ್ಕೆ ಸ್ವಲ್ಪ ಮಣ್ಣು ಬೆರೆಸಿ ಒಂದು ಗಿಡವನ್ನು ಬೆಳೆಸುತ್ತಾರೆ. ಅದನ್ನು ನೋಡಿದಾಗ ಅದರ ಜ್ಞಾಪಕ ಬರಲಿ ಎಂದು. ನಾವು ತಂದೆ ತಾಯಿಗಳ ಫೋಟೋ ಇಟ್ಟುಕೊಳ್ಳುವುದಿಲ್ಲವೇ ಹಾಗೆ. ಶ್ರಾದ್ಧಕರ್ಮಗಳೇನೂ ಇರುವುದಿಲ್ಲ! ಅವಕ್ಕೆ ಆ ಕರ್ಮಗಳು ಅನ್ವಯಿಸುವುದಿಲ್ಲ ಎಂದು ತೋರುತ್ತೆ. ಇತ್ತೀಚೆಗೆ ಒಬ್ಬರು ದೇಶದಿಂದ ದೇಶಕ್ಕೆ ಹೋಗಿ ಅದರ ಕರ್ಮಾಂತರಗಳಲ್ಲಿ ಭಾಗವಹಿಸಿದ್ದರೆಂದು ವರ್ತಮಾನ ಬಂತು.

ನಮ್ಮೂರಿನಲ್ಲಿ ನಾವು ನೋಡುವಂತೆ, ರಸ್ತೆಯಮೇಲೆ ಬೀದಿನಾಯಿ, ಹಸು, ಕತ್ತೆ, ಕುದುರೆಗಳು ಇಲ್ಲಿಯ ರಸ್ತೆಗಳಮೇಲೆ ಇರುವುದಿಲ್ಲ. ನಾಯಿಗಳಿಗಂತೂ ಎಲ್ಲ ರೀತಿಯ ತರಬೇತಿಯನ್ನು ಕೊಡುತ್ತಾರೆ. ಅದನ್ನು ಹೊರಗಡೆ ಕರೆದುಕೊಂಡು ಹೋಗುವಾಗ ಚರ್ಮದ ಬೆಲ್ಟ್ ಹಾಕಿರಲೇಬೇಕು. ಜೊತೆಗೆ ಒಂದು ಬ್ರಷ್, ಪ್ಲಾಸ್ಟಿಕ್ ಚೀಲ (ಅದು ಒಂದು ಎರಡು ಮಾಡಿದರೆ) ಇಟ್ಟುಕೊಂಡಿರಬೇಕು. ಇದನ್ನು ಕಡ್ಡಾಯವಾಗಿ ಮಾಡಿದ್ದಾರೆ. ಇಲ್ಲದಿದ್ದರೆ ನೂರು ಡಾಲರ್ ಜುಲ್ಮಾನೆ!

ಅಕಸ್ಮಾತ್ ಅದು ಯಾರನ್ನಾದರೂ ಕಚ್ಚಿದರೆ, ಅವರು ನಾಯಿಯ ಮಾಲಿಕರಮೇಲೆ ಕೇಸ್‌ಮಾಡಿ ಲಕ್ಷಾಂತರ ಡಾಲರ್ ಪಡೆಯುತ್ತಾರೆ.

ನಾಯಿಯ ಕತ್ತಿನಮೇಲಿರುವ ಚರ್ಮದಪಟ್ಟಿಯಮೇಲೆ ಮನೆಯ ಫೋನ್ ನಂಬರ್ ಇರುತ್ತೆ. ಅದು ಒಂದು ಪಕ್ಷ ತಪ್ಪಿಸಿಕೊಂಡರೆ, ಯಾರಾದರೂ ಅದನ್ನು ನೋಡಿ ಅದರ ಮಾಲಿಕರಿಗೆ ತಿಳಿಸುತ್ತಾರೆ. ನಾಯಿ ಎಲ್ಲಿದೆ ಎಂದು ಗೊತ್ತಾದಾಗ ಹೋಗಿ ಕರೆದುಕೊಂಡುಬರಬೇಕು. ಅವುಗಳಿಗೂ ಬಹುಶಃ ಒಂದು ಭಾಷೆ ಇದೆ. ತಮಿಳು, ತೆಲುಗು, ಕನ್ನಡ, ಇಂಗ್ಲಿಷ್ ಅವರವರ ಮಾತೃಭಾಷೆಯಂತೆ ಅವುಗಳ ಜೊತೆ ಮಾತನಾಡುತ್ತಾರೆ.

ನಾಯಿಯ ಮಾಲಿಕರು ಯಾವುದಾದರು ಬೇರೆ ಊರಿಗೆ ಏಳೆಂಟು ದಿವಸ ಹೋಗಿಬರಬೇಕಾದರೆ, ಅದನ್ನು ನೋಡಿಕೊಳ್ಳಲು ಕೆಲವು ನಾಯಿಪಾಲನಾ ಮನೆಗಳಿವೆ. ಅದರಿಂದಲೂ ಒಂದು ಆದಾಯ ಮಾಡುತ್ತಾರೆ.

ನಾನು ಅಲಾಸ್ಕಾ, ಆಸ್ಟ್ರೇಲಿಯಾಕ್ಕೆ ಹೋದಾಗ, ನಾಯಿಗಳಿಗೆ ತರಪೇತಿ ಕೊಡುವ ಕೇಂದ್ರವನ್ನು ನೋಡಿದ್ದೆ. ಅಲಾಸ್ಕಾದಲ್ಲಿ ನಾಯಿಗಳಿಗೆ ತರಪೇತಿಕೊಡುವ ಜಾಗ ಬಹಳ ದೊಡ್ಡದು. ಸುಮಾರು 50–60 ನಾಯಿಗಳು ಅಲ್ಲಿವೆ. ಒಂದೊಂದು ನಾಯಿಗೂ ಒಂದು ಸಣ್ಣ ಗೂಡಿನಹಾಗಿರುವ ಮನೆ. ಅವುಗಳಿಗೆ ಎಷ್ಟರಮಟ್ಟಿಗೆ ತರಬೇತಿ ಕೊಟ್ಟಿದ್ದಾರೆಂದರೆ, ಏಳೆಂಟು ನಾಯಿಗಳು ಒಟ್ಟಿಗೆ ಒಂದು ಸಣ್ಣ ಟ್ರಕ್ಕನ್ನು ಎಳೆದುಕೊಂಡು ಹೋದುವು. ಒಂದು ಮರದ ಬ್ಯಾಟನ್ನು ಗಿಡಗಳ ಮಧ್ಯ ಎಸೆದರೆ ಅದು ಹುಡುಕಿ ತರುತ್ತೆ. ಕುರಿಗಳು ಅಲ್ಲಿ ಇಲ್ಲಿ ಚದುರಿಹೋಗಿದ್ದರೆ ಅವುಗಳನ್ನು ಒಂದುಕಡೆ ಸೇರಿಸುವುದು ಅದರ ಕೆಲಸ.

ನಮ್ಮ ಸ್ನೇಹಿತರೊಬ್ಬರು ಕೊಡಗಿನಿಂದ ಬಂದು ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾರೆ. ಅವರ ಮನೆಗೆ ಊಟಕ್ಕೆ ಕರೆದಿದ್ದರು. ಅವರು ಎರಡು ನಾಯಿಗಳನ್ನು ಸಾಕಿದ್ದಾರೆ. ಒಂದು ಗಂಡು, ಒಂದು ಹೆಣ್ಣು. ಹೆಸರು ರಾಮ, ಸೀತೆ! ಬಹಳ ಮುದ್ದಾಗಿವೆ. ಅವುಗಳ ಫೋಟೋ ಬೇಕು ಎಂದು ಕೇಳಿದೆ. ನೋಡು, ಅವರಿಗೆ ನಿಮ್ಮ ಫೋಟೋ ಬೇಕಂತೆ, ಹೋಗಿ ಅವರ ಪಕ್ಕದಲ್ಲಿ ನಿಲ್ಲಿ ಎಂದರು. ಅವು ನನ್ನ ಪಕ್ಕದಲ್ಲಿ ಬಂದು ನಿಂತುಕೊಂಡುವು. ಬಹಳ ಸಾಧು ಪ್ರಾಣಿಗಳು.

98. ಪವನಹೋಮ, ಜೇನು ಕಡಿತ!

ಮೊದಲನೇ ವರ್ಷದ ಶ್ರಾದ್ಧಕಾರ್ಯಕ್ರಮದಲ್ಲಿ, ಪವನಹೋಮವೂ ಒಂದು ಎಂಬ ಪದ್ಧತಿ ಇದೆಯಂತೆ. ಅದನ್ನು ಹೊರಗಡೆ ಮಾಡುತ್ತಿದ್ದಾಗ ಪಕ್ಕದಲ್ಲಿ ಒಂದು ತೆಂಗಿನಮರ. ಅಲ್ಲಿ ಜೇನು ಗೂಡು ಕಟ್ಟಿದೆ. ಅದು ಹೋಮಮಾಡುತ್ತಿರುವವರಿಗೆ

ಗೊತ್ತಿಲ್ಲ. ಹೋಮದ ಹೊಗೆ ಮೇಲಕ್ಕೆ ತಗುಲಿ, ಜೇನುಗಳು ಅಲ್ಲಿ ಇಲ್ಲಿ ಚದುರಿ ಹೋಮಮಾಡುತ್ತಿರುವವರಿಗೂ ಕಚ್ಚಿತಂತೆ. ನೋಡುತ್ತಿರುವವರಿಗೂ ಕಚ್ಚಿತಂತೆ! ಅವಕ್ಕೆ ಬೇಧಭಾವವಿಲ್ಲ! ಅವಕ್ಕೆ ತೊಂದರೆಯಾಗಿರುವುದಂತೂ ನಿಜ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ. ತಕ್ಷಣ ವೈದ್ಯರು ಬಂದು ಎಲ್ಲರಿಗೂ ಚುಚ್ಚುಮದ್ದು, ಮಾತ್ರೆಗಳನ್ನು ಕೊಟ್ಟರೆಂದು ಸುದ್ದಿಬಂತು.

ಅವುಗಳಿಂದ ನಮಗೆ ಎಷ್ಟೋ ಉಪಕಾರವಾಗಿದೆ. ಅದರ ತುಪ್ಪ ಬೇಕು ನಮಗೆ ಆಯುರ್ವೇದದ ಔಷಧಿಗೆ. ಪಂಚಾಮೃತಸ್ನಾನಕ್ಕೆ ಬೇಕು ಜೇನುತುಪ್ಪ. ಹೀಗಿರುವಾಗ ಅವುಗಳಿಂದ ಪ್ರಯೋಜನ ಪಡೆದು, ಅವುಗಳಿಗೆ ನಮ್ಮಿಂದ ತೊಂದರೆಯಾದರೆ ಅವು ಸುಮ್ಮನೆ ಬಿಟ್ಟಾವೆ.

ನಾವು ಎಷ್ಟೋ ಸಂದರ್ಭಗಳಲ್ಲಿ ನಮ್ಮ ಅನುಕೂಲಕ್ಕೆ ತಕ್ಕಂತೆ ಪದ್ಧತಿಗಳನ್ನು ಬದಲಾಯಿಸಿಕೊಂಡಿದ್ದೇವೆ. ನಮ್ಮ ಸ್ನೇಹಿತರೊಬ್ಬರು ತಾಯಿಯ ದಹನಕಾರ್ಯ ಮಾಡಬೇಕಾಗಿತ್ತು. ಆತನಿಗೂ ಆರೋಗ್ಯ ಸರಿ ಇರಲಿಲ್ಲ. ಅವರ ಸಂಬಂಧಿಗಳೆಲ್ಲ ಹೇಳಿದರು, ಪುರೋಹಿತರು ತಿಳಿಸಿದರೂ ಅಂತ ಷರ್ಟು, ಟೋಪಿ ತೆಗೆದುಬಿಡಬೇಡ. ನಿನಗೂ ತೊಂದರೆ ಆಗುತ್ತೆ. ಪುರೋಹಿತರೂ ಹೇಳಿದರಂತೆ. ಏನೂ ಅಭ್ಯಂತರವಿಲ್ಲ. ಷರ್ಟಿನ ಮೇಲೆಯೇ ಜನಿವಾರ ಹಾಕಿಕೊಳ್ಳಿ. ಹೀಗೆ ಎಷ್ಟೋ ಬದಲಾವಣೆಗಳನ್ನು ಮಾಡಿಕೊಂಡಿರುವಾಗ, ನಾವು ಕಂಡಹಾಗೆ ಪವನ ಹೋಮವನ್ನು ಮಾಡಲೇಬೇಕೆಂಬ ನಿಯಮವಿಲ್ಲ. ಅದನ್ನೂ ಬೇರೇ ರೀತಿಯಲ್ಲಿ ಅಳವಡಿಸಿಕೊಳ್ಳಬಹುದು.

ಅವುಗಳಿಗೆ ಮಾಡುವ ಖರ್ಚನ್ನು ಯಾವುದಾದರೂ ಅನಾಥಾಲಯಕ್ಕೆ ಕೊಡಬಹುದು, ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬಹುದು, ಯೋಚಿಸಿ ನೋಡಿ.

99. ಔಷಧಿಗಳ ಪೈಪೋಟಿ

ಒಬ್ಬೊಬ್ಬರೂ ಅವರವರ ಮನಸ್ಸಿಗೆ ತೋಚಿದಂತೆ ವಿಧವಿಧವಾದ ಔಷಧಿಗಳಿಗೆ ಶರಣು ಹೋಗಿರುತ್ತಾರೆ. ಆಯುರ್ವೇದಕ್ಕೆ ಒಬ್ಬರಾದರೆ, ಇನ್ನು ಕೆಲವರು ಹೋಮಿಯೋಪತಿ, ಇನ್ನು ಕೆಲವರಿಗೆ ಇಂಗ್ಲಿಷ್ ಔಷಧಿಯೇ ಪಥ್ಯ. ಏನೇ ಹೇಳಿ ಆಯುರ್ವೇದದ ಮುಂದೆ ಯಾವುದೂ ಇಲ್ಲ ಎಂದು ಹೇಳಿದರೆ, ಹೋಮಿಯೋಪತಿ ವಿಚಾರ ನೀವು ಕೇಳಿಲ್ಲ. ಸುಮ್ಮನೆ ಔಷಧಿ ಕೊಟ್ಟರೆ ಏನಾಯ್ತು, ಕಾಯಿಲೆ ಯಾವ ಕಾರಣದಿಂದಾಗಿದೆ ಅನ್ನುವುದನ್ನು ಮೊದಲು ತಿಳಿದುಕೊಳ್ಳಬೇಕು. ಅದು ಹೋಮಿಯೋಪತಿಯಲ್ಲಿದೆ ಅನ್ನುತ್ತಾರೆ ಅದಕ್ಕೆ ತಲೆಬಾಗಿದವರು.

ನಾನಂತೂ ಯಾವಾಗಲೂ ಇಂಗ್ಲಿಷ್ ಔಷಧಿಗೇ ಮನಸ್ಸು ಅನ್ನುವವರು ಹಲವಾರು ಮಂದಿ. ಸ್ವಾಮಿ, ನಿಮಗೆ ಇಂಗ್ಲಿಷ್ ಔಷಧಿ ಸಮಾಚಾರ ಏನೇನೂ ಗೊತ್ತಿಲ್ಲ. ನಮ್ಮ ಬಳಗದವನೇ ಒಬ್ಬ ಇದಾನೆ. ಅವನೂ ಒಂದು ಇಂಗ್ಲಿಷ್ ಔಷಧಿ ತಯಾರಿಸುವ ಕಂಪೆನಿಯಲ್ಲೇ ಕೆಲಸ ಮಾಡುತ್ತಿರುವುದು. ಅವನೇ ಹೇಳಿದ. ಒಬ್ಬೊಬ್ಬರ ಪ್ರಯೋಗದ ಮೇಲೆ ಬೇರೆಬೇರೆ ಔಷಧಿಗಳು ಹೊರಕ್ಕೆ ಬರುತ್ತೆ ಒಂದೇ ಕಾಯಲೆಗೆ. ಡಾಕ್ಟರೇ ನಾನೂ ಅರು ತಿಂಗಳಿಂದ ನೀವು ಕೊಟ್ಟ ಮಾತ್ರೆಗಳನ್ನೇ ನುಂಗ್ತಾ ಇದೀನಿ, ಸ್ವಲ್ಪವೂ ಗುಣವಾಗಿಲ್ಲ ಅಂದ್ರೆ, ಹೌದಾ ಇವತ್ತು ಬೇರೇ ಮಾತ್ರೆ ಕೊಡ್ತೀನಿ ಅಂದರಂತೆ!

ಇದನ್ನು ಯಾಕೆ ಹೇಳ್ತಾ ಇದೀನಿ ಅಂದ್ರೆ, ನಮ್ಮ ಅಣ್ಣನ ಮಗ ಕೃಷ್ಣಸ್ವಾಮಿ ಇದಾನಲ್ಲ, ಅವನಿಗೆ ಮಂಡಿನೋವು. ನನಗೆ ಮಂಡಿನೋವು. ಅಂತ ಹೇಳಿದರೆ ಅದರಲ್ಲಿ ಆಶ್ಚರ್ಯವೇನಿಲ್ಲ, ವಯಸ್ಸಾಗಿದೆ ಅನ್ನಬಹುದು. ಅವನಿಗಿನ್ನೂ ಚಿಕ್ಕ ವಯಸ್ಸು. ಅರೇಳು ತಿಂಗಳಿಂದ ಮಾತ್ರೆ ನುಂಗ್ತಾನೇ ಇದ್ದ. ಕೊನೆಗೆ ಒಬ್ಬ ಆಯುರ್ವೇದ ಪಂಡಿತರಿಂದ ಔಷಧಿ ತಗಂಡ, ಎರಡೇ ತಿಂಗಳಲ್ಲಿ ವಾಸಿಯಾಗಿದೆ! ಅದಕ್ಕಾಗಿ ಎರಡು ತಿಂಗಳು ರಜಾದಲ್ಲಿದ್ದ. ಈಗ ಇನ್ನೊಂದು ಸಮಸ್ಯೆ ಬಂದಿದೆ. ಆಯುರ್ವೇದ ಪಂಡಿತರು ಕೊಟ್ಟ ಸರ್ಟಿಫಿಕೇಟ್ ಅವನ ಆಫೀಸಿನಲ್ಲಿ ಒಪ್ಪಲಿಲ್ಲವಂತೆ, ಇಂಗ್ಲಿಷ್ ಔಷಧಿ ಡಾಕ್ಟರೇ ಕೊಡಬೇಕು ಅಂತ ಖಡಾಖಂಡಿತವಾಗಿ ಹೇಳಿಬಿಟ್ಟರಂತೆ. ಹಾಗಾಗಿ ಸಂಬಳ ಇಲ್ಲ.

ಕೃಷ್ಣಸ್ವಾಮಿಯ ಸಹೋದ್ಯೋಗಿಯೊಬ್ಬ ಅವನಿಗೆ ಪರಿಚಿತರಾದ ಇಂಗ್ಲಿಷ್ ಡಾಕ್ಟರ್ ಬಳಿಗೆ ಕರೆದುಕೊಂಡು ಹೋದನಂತೆ. ಅವರಿಗೆ 50 ರುಪಾಯಿ ಕೊಡು, ಸರ್ಟಿಫಿಕೇಟ್ ಕೊಡ್ತಾರೆ ಅಂತ ಸಲಹೆ ಕೊಟ್ಟನಂತೆ. ಆ ಡಾಕ್ಟರ್ ನಿನಗೆ ಏನು ಕಾಯಿಲೆ ಎಂದು ಕೇಳಿದಾಗ, ಆವನು ಕಾಯಿಲೆ ಏನೂ ಇಲ್ಲ. ಮಂಡಿನೋವು ವಾಸಿಯಾಗಿದೆ, ನೀವು ಒಂದು ಸರ್ಟಿಫಿಕೇಟ್ ಕೊಟ್ಟರೆ ತುಂಬಾ ಅನುಕೂಲವಾಗುತ್ತೆ ಅಂತ ಹೇಳಿ, 50 ರುಪಾಯಿ ಅವರ ಮುಂದೆ ಇಟ್ಟನಂತೆ. ಅವನ ಮಂಡಿನೋವು ಆಯುರ್ವೇದಿಕ್ ಪಂಡಿತರಿಂದ ವಾಸಿಯಾಯಿತು ಎಂದು ಗೊತ್ತಾಯಿತು. ಆ ಡಾಕ್ಟರ್ ನನಗೂ ಮಂಡಿನೋವು, ಬಾ ಅವರ ಹತ್ತಿರ ಹೋಗೋಣ ಎಂದು, ಆ ಹಣವನ್ನೂ ಮುಟ್ಟದೆ ಅವನ ಜೊತೆ ಹೋದರಂತೆ! ಸರ್ಟಿಫಿಕೇಟನ್ನೂ ಕೊಟ್ಟರಂತೆ!

100. ಅಂಕಿತನಾಮ, ಅರ್ಧನಾಮ, ಅಡ್ಡಹೆಸರು

ಅಂಕಿತನಾಮವನ್ನು ಮಗು ಹುಟ್ಟಿದ ಹನ್ನೊಂದನೆಯ ದಿನ ಆಚರಿಸುವ ನಾಮಕರಣ ಕಾರ್ಯಕ್ರಮದಲ್ಲಿ ಇಡುವ ಹೆಸರು. ಇದು ಸರ್ವೇಸಾಮಾನ್ಯವಾಗಿ

ಹಿರಿಯರ ವಂಶಪರಂಪರೆಯನ್ನು ಮುಂದುವರಿಸಲು ಅದೇ ಹೆಸರನ್ನು ಇಡುವ ಪದ್ಧತಿ. ಕೆಲವು ದೊಡ್ಡ ಹೆಸರಾಗಿದ್ದರೆ, ಕರೆಯುವುದಕ್ಕೆ ಸುಲಭವಾಗಿರಲೆಂದು ಮೊಟಕುಮಾಡಿ ಎರಡು ಮೂರು ಅಕ್ಷರದಲ್ಲಿ ಬರುವಹಾಗೆ, ನಾರಾಯಣಮೂರ್ತಿಯನ್ನು ನಾಣಿ. ವೆಂಕಟರಾಮಯ್ಯನನ್ನು ವೆಂಕ್ಟ ಶಾರದಾಮಣಿಯನ್ನು ಶಾರೀ ಅಥವಾ ಸುಬ್ಬಲಕ್ಷ್ಮಿಯನ್ನು ಸುಬ್ಬಿ ಎಂದು ಕರೆದರೆ ಏನೂ ತೊಂದರೆಯಿಲ್ಲ. ಈ ಮೊಟಕು ಹೆಸರುಗಳು ಆಯಾಯ ಮನೆಯ ನಿಕಟ ಸಂಬಂಧಿಗಳು ಮಾತ್ರ ಬಳಸುವುದು ರೂಢಿಯಲ್ಲಿವೆ. ನನ್ನ ಅಂಕಿತನಾಮ ವೆಂಕಟಕೃಷ್ಣಶರ್ಮ ಎಂದಿದ್ದರೂ, ಮನೆಯಲ್ಲಿ ಪುಟ್ಟು ಆಗಿದ್ದೆ. ಅಮೆರಿಕಾಕ್ಕೆ ಬರುವಾಗ ನನ್ನ ಪೂರ್ತಿ ಹೆಸರು ಬುಕ್ಕಾಂಬುಧಿ ವೆಂಕಟರಮಣಯ್ಯ ಕೃಷ್ಣಮೂರ್ತಿ. ಆ ಹೆಸರು ಕಂಪ್ಯೂಟರ್ನಲ್ಲಿ ಹೋಗಲೇ ಇಲ್ಲ! ಅಮೆರಿಕಾ ಪ್ರಜೆಯಾದಾಗ ಕೇವಲ ಕೃಷ್ಣಮೂರ್ತಿ ಎಂದಾಯಿತು.

ಅಂಕಿತನಾಮಕ್ಕೂ ಅರ್ಧನಾಮಕ್ಕೂ ಸ್ವಲ್ಪವಾದರೂ ಹೋಲಿಕೆ ಇದೆ. ಆದರೆ ಅಡ್ಡಹೆಸರಿಗೆ ಮಾತ್ರ ಏನೇನೂ ಹೋಲಿಕೆ ಇಲ್ಲ. ಸುಬ್ರಮಣ್ಯನನ್ನು ಸುಬ್ಬ ಎಂದರೆ ತಪ್ಪೇನೂ ಆಗಲಾರದು. ಅವನನ್ನು ತಾತ, ಇನ್ನೊಂದುಕಡೆ ಜಟಾಯು ಅಂದಾಗ ನಗುಬರುವಂತಾಗುತ್ತೆ. ಸತ್ಯನಾರಾಯಣನನ್ನು ಲಾರಿ ಎಂದು ಕರೆಯುತ್ತಾರೆ. ವೆಂಕಟರಾಮಯ್ಯ ಶೇಬ ಆದ. ಕೃಷ್ಣಮೂರ್ತಿ ಕಂದಣಿ, ಒಂದೇ ಮನೆಯ ಐದು ಜನ ಅಣ್ಣತಮ್ಮಂದಿರು, ಆಂಬಿ, ಪುಟ್ಟ, ಕಾಟಿ, ಜೂಲಿ. ಕಿಟ್ಟ. ಇನ್ನು ಕೆಲವಂತೂ, ಅಗಟು, ಬೆನಕ, ಅಕ್ಕುಮಯ್ಯ, ಶೀತಿಭಟ್ಟ, ಆಕಾಶರಾಯ ಇವೆಲ್ಲ ವಿಚಿತ್ರ ಅಡ್ಡ ಹೆಸರುಗಳು. ಏತಕ್ಕಾಗಿ ಹಾಗೆ ಕರೆಯುತ್ತಿದ್ದರು ಅನ್ನುವುದಕ್ಕೆ ಸರ್ಕಾರೀವಲಯದಲ್ಲೂ ಯಾವ ದಾಖಲೆಗಳೂ ಇಲ್ಲ. ಹಲವಾರು ವರ್ಷಗಳ ಹಿಂದೆ ಆಗಿದ್ದರೆ ಯಾರನ್ನಾದರೂ ಹಿರಿಯತಲೆಗಳನ್ನು ಭೇಟಿಮಾಡಿ ತಿಳಿಯುವುದಕ್ಕೆ ಸಾಧ್ಯವಿತ್ತು. ಆಗ ನನಗೆ ಬರವಣಿಗೆಯ ಹವ್ಯಾಸ ಇರಲಿಲ್ಲ. ಈಗ ನನ್ನ ವಯಸ್ಸಿನವರಾಗಿ ಒಬ್ಬರೂ ಇಲ್ಲ. ಅದು ಹೋಗಲೀ ಅಂದರೆ, ಆ ಬಗೆಯ ಹೆಸರುಗಳಿಂದ ಕರೆಸಿಕೊಳ್ಳುವ ಜನಗಳೇ ಇಲ್ಲ.

ಈಗಿನ ಪರಂಪರೆಗೆ ನಮ್ಮ ಹಿರಿಯರನ್ನು ಜ್ಞಾಪಿಸಿಕೊಳ್ಳಬೇಕೆಂಬ ಉದ್ದೇಶವೇ ಇಲ್ಲ. ತಂದೆತಾಯಿಗಳಿಗೆ ತೋಚಿದ ಹೆಸರೇ ಕರೆಯುವ ಹೆಸರೂ ಕೂಡ. ಮರಿಮಕ್ಕಳ ಕಾಲಕ್ಕಂತೂ ಕೇಳಲೇಬೇಡಿ. ನಾವು ಅವರನ್ನು ಏನೋ ಕುತೂಹಲದಿಂದ ನೋಡಿದರೂ, ಓಹೋ ನೀವು ನಮ್ಮ ಚಿಕ್ಕಪ್ಪನೇ ನನಗೆ ಗೊತ್ತಿರಲಿಲ್ಲ ಎನ್ನತ್ತಾರೆ! ಹೀಗಾಗಿದೆ ಇಂದಿನ ಕಾಲಪರಿಸ್ಥಿತಿ.

ಬೆನ್ನುಡಿ

ಬುಕ್ಕಾಂಬುಧಿ ಕೃಷ್ಣಮೂರ್ತಿ ಅರ್ಥಾತ್ ಬಿವಿಕೆ ಅಮೇರಿಕೆಯಲ್ಲಿ ದೀರ್ಘಕಾಲದಿಂದ ನೆಲೆಸಿರುವ ಕನ್ನಡ ಸಾಹಿತ್ಯಾಸಕ್ತರಲ್ಲಿ ಅತ್ಯಂತ ಹಿರಿಯರಾದವರು. ಈ ಹೆಗ್ಗಳಿಕೆ ಬೇರಾರಿಗೂ ಇಲ್ಲ. ಅಮೇರಿಕೆಯಲ್ಲಿ ಇವರಿಗಿಂತ ದೀರ್ಘಕಾಲ ಬಾಳುತ್ತಿರುವರು ಇರಬಹುದು ಅದರೆ ಅವರು ಸಾಹಿತಿಗಳಲ್ಲ, ಸಾಹಿತಿಗಳು ಸಾಕಷ್ಟು ಮಂದಿ ಅಮೇರಿಕದಲ್ಲಿ ಇದ್ದಾರೆ ಆದರೆ ಆವರು ಬದುಕಿನಲ್ಲಿ ಸೆಂಚುರಿ ಬಾರಿಸಿಲ್ಲ. ಇಂಥ ವಿಶಿಷ್ಟ ಸಾಹಿತಿಯ ನೂರು ಅನಿಸಿಕೆ ನೆನಪು–ಅಭಿಪ್ರಾಯ–ಅನುಭವ ಪ್ರಸಂಗಗಳ ಚಿಕ್ಕ ಬರಹಗಳ ಚೊಕ್ಕ ಸಂಕಲನ ನೂರು–ಚೂರು–ಪಾರು. ಶತಾಯುಷಿಗಳಾಗಿ ಜನ್ಮದಿನ ನೆರವೇರಿಸಿಕೊಳ್ಳುತ್ತಿರುವ ಜನವರಿ 8, 2026ರ ಸಮಾರಂಭದಲ್ಲಿ ಬೆಂಗಳೂರಿನಲ್ಲಿ ಗ್ರಂಥ ಬಿಡುಗಡೆ ನಡೆಯಲಿದೆ.

ಈ ಸಮಾರಂಭದಲ್ಲಿ ಭಾಗವಹಿಸುತ್ತಿರುವರೆಲ್ಲ ಅವರಿಗಿಂತ ವಯಸ್ಸಿನಲ್ಲಿ ಕಿರಿಯರೇ, ಅವರಂತೆ ತಮ್ಮ ನೂರನೇ ವರ್ಷದ ಹುಟ್ಟು ಹಬ್ಬದ ಆಚರಣೆ ಕಾಣಬೇಕೆಂದು ಸಮಾರಂಭಕ್ಕೆ ಹಿರಿಯರು–ಕಿರಿಯರು, ಬಂದು–ಮಿತ್ರರು–ಗಣ್ಯರು ಭಾಗವಹಿಸುತ್ತಿದ್ದಾರೆ.

ನಮ್ಮಲ್ಲಿ ಅನೇಕ ಸಾಹಿತಿಗಳು ವಯೋವೃದ್ಧರು ತಮ್ಮ ಇಳಿವಯಸ್ಸಿನಲ್ಲಿ ಆತ್ಮಕಥನ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಆದರೆ ಇವರ ಗ್ರಂಥ ವಿಶಿಷ್ಟವಾದುದು. ಅತಿ ಹೆಚ್ಚಿನ ವಯಸ್ಸಿನವರಾದೂ ಕೇವಲ ನೂರು ನೆನಪು ಚಿಂತನಗಳ ಹೂಬುಟ್ಟಿಯಾಗಿದೆ ಈ ಗ್ರಂಥ.

ಗ್ರಂಥಕ್ಕೆ ಮುಕುಟ ಪ್ರಾಯವಾಗಿ ತೊಂಬತ್ತನೇ ಲೇಖನ ಹತ್ತತ್ತು ವರ್ಷಗಳಲ್ಲಿನ ವೃತ್ತಾಂತಗಳು ಕೆಲವೇ ಪುಟಗಳಲ್ಲಿ ತಮ್ಮ ಜೀವನ ಕಥನವನ್ನು ನಮೂದಿಸಿದ್ದಾರೆ.

ಇದೂ ವಿನೂತನ ಕ್ರಮದ ಬರಹ. ಇನ್ನು ಇಲ್ಲಿಯ ಬರಹಳಲ್ಲಿ ಸಾಕಷ್ಟು ವೈವಿಧ್ಯ ಪೂರ್ಣ ಅನಿಸಿಕೆಗಳು ಅನುಭವಗಳು ಚಿಂತನಗಳು ಇವೆ. ಬುಕ್ಕಾಂಬುಧಿ ಕೃಷ್ಣಮೂರ್ತಿಯವರು ತಿಳಿನಗೆಯ ವಿನೋದ ಪ್ರಿಯರು. ಅವರ ಮಾತುಗಳಲ್ಲಿ ಬರಹಗಳಲ್ಲಿ, ಚೌಚೌನಲ್ಲಿ ಗೋಡಂಬಿ ಸಿಕ್ಕಿದಂತೆ, ಲಾಡುವಿನಲ್ಲಿ ದ್ರಾಕ್ಷಿ ಸಿಕ್ಕಂತೆ, ಹಾಸ್ಯ ಮಿನುಗುತ್ತಿರುತ್ತದೆ. ಇಲ್ಲಿ ಅಂಥ ಬರಹಗಳು ಸಾಕಷ್ಟಿವೆ.

ವೆಂಕಟಸುಬ್ಬು, ಮಿತ ಭಾಷಿ, ಹೆಂಡತಿ ಲಕ್ಷ್ಮಿ ಅಪಾರ ವಾಚಾಳಿ. ಅವಳ ಮಾತಿನ ಅಬ್ಬರಕ್ಕೆ ಸಾಕಾಗಿ ಹೆಂಡತಿಗೆ ಹೇಳಿದ. ಇನ್ನು ಮೇಲಾದರೂ ನಾನು, ನನಗೆ, ನನ್ನಿಂದ, ಅನ್ನುವುದನ್ನು ಬಿಟ್ಟುಬಿಡು. ನಾವು, ನಮಗೆ, ನಮ್ಮಿಬ್ಬರು ಅನ್ನುವುದನ್ನು ಕಲಿ ಎಂದು ಉಪದೇಶಿಸಿದ. ಅವಳು ಅನ್ಯಮನಸ್ಕಳಾಗಿ ಏನನ್ನೋ ಯೋಚಿಸುತ್ತಿದುಳು. ವೆಂಕಟಸುಬ್ಬು ಕೆಳಿದ. ಏನನ್ನು ಹುಡುಕುತ್ತಿದ್ದೀಯೇ? ಲಕ್ಷ್ಮೀ ಹೇಳಿದಳು ನಮ್ಮಿಬ್ಬರದೂ ನೈಟಿ ಹುಡುಕ್ತಾ ಇದ್ದೀನಿ.

ಬುಕ್ಕಾಂಬುಧಿ ಅವರ ದೊಡ್ಡತ್ತೆಯನ್ನು ಆಸ್ಪತ್ರೆಗೆ ಸೇರಿಸಿದಾಗ ಚಿಕಿತ್ಸೆ ಫಲಿಸದೆ ನಿಧನರಾದರು. ಅವರ ಶವವನ್ನು ಪಡೆಯಲು ಲಂಚಾಧಿಕಾರಿಯೊಬ್ಬನಿಗೆ ಮಿತ್ರರ ಸಲಹೆಯೆಂತೆ 30 ರೂಗಳನ್ನು ಮೇಜಿನ ಮೇಲಿಟ್ಟರು. ಆತ ಅದನ್ನು ಟೇಬಲ್ಲಿಂದ ತಳ್ಳಿ ನನ್ನ ಘನತೆಗೆ ಅವಮಾನ ಮಾಡುತ್ತಿದ್ದೀರಿ. ಈ ಹಣವನ್ನು ನಾನು ಮುಟುವುದಿಲ್ಲ ಎಂದನಂತೆ. ನಾವು ಇಂತಹ ನಿಯತ್ತಿನ ಅಧಿಕಾರಿಗೆ ಹಣ ಕೊಟ್ಟಿದ್ದು ತಪ್ಪಾಯ್ತು ಎಂದು ಕೊಂಡರೂ, ಆಗ ಅವರ ಘನತೆ ಉಳಿಯಲು 20ರೂ ಹೆಚ್ಚಿಗೆ ಕೊಟ್ಟಾಗ ಶವಪಡೆಯಲು ಅನುಮತಿ ಕೊಟ್ಟರು. ಆಗ ಅವನ ಘನತೆ ಏನೆಂದು ಇವರಿಗೆ ತಿಳಿಯುತಂತೆ.

ಬುಕ್ಕಾಂಬುಧಿಯಲ್ಲಿ ಜಮಾಬಂದಿ ನಡೆದಾಗ ಅಧಿಕಾರಿಗಳು, ಸಿಬ್ಬಂದಿ ಜನ, ಶಾನುಭೊಗರು ಮೊದಲಾದವರು ಸೇರಿ ರಾತ್ರಿ ಮಲಗಲು ಕಟ್ಟಡದ ಹೊರಗೂ ಮಲಗಲು ಜಾಗ ಇರಲಿಲ್ಲ. ಅಷ್ಟೊಂದು ಜನ. ಆಗ ಇವರಣ್ಣ ಮನೆ ಹಿಂಭಾಗಕ್ಕೆ ಹೋಗಿ ಹುಲಿಯಂತೆ ಗರ್ಜನೆ ಮಾಡಿದಾಗ – ಹುಲಿಬಂತು ಅಂತ ಎಲ್ಲರೂ ಎದ್ದು ಜಾಗ ಬಿಟ್ಟೋಡಿದರು. ಇವರು ತಮಗೆ ಬೇಕಾದ ಜಾಗದಲ್ಲಿ ಮಲಗಿಕೊಂಡು ಉಳಿದವರಿಗೆ ಹೇಳಿದರಂತೆ – ಇಲ್ಲಿಗ್ಯಾಕೆ ಹುಲಿ ಬರುತ್ತೆ ನೀವೆಲ್ಲ ಬಂದು ಮಲಗಿಕೊಳ್ಳಿ – ಎಂದು ಮುಸುಕು ಎಳೆದುಕೊಂಡರಂತೆ.

ಕೆಲವು ಜನಜನಿತ ಜನಪ್ರಿಯ ಹಾಸ್ಯ ಪ್ರಸಂಗಗಳನ್ನು ಇವರು ಬರೆದಿದ್ದಾರೆ. ಇವು ಹೊಸದಲ್ಲವಾದರೂ ಬರಹದಲ್ಲಿ ಹೊಸತನವಿದೆ.

ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲ್ ನರಸಿಂಹಯ್ಯನವರು ಪ್ರಾರ್ಥನೆಗೆ ತಪ್ಪಿಸಿಕೊಂಡ ವಿದ್ಯಾರ್ಥಿ ದಿನಕ್ಕೆ ನಾಲ್ಕಾಣೆ ಕೊಡಬೇಕು ಎಂದರಂತೆ. ಆಗ ಒಬ್ಬ ವಿದ್ಯಾರ್ಥಿ ವರ್ಷಪೂರ್ತಿ ತಪ್ಪಿಸಿಕೊಂಡರೆ ಎಷ್ಟು ದುಡ್ಡು ಕೊಡಬೇಕು ಹೇಳಿ ಸಾರ್ ರಿಯಾಯಿತಿ ದರದಲ್ಲಿ ಎಂದನಂತೆ ಇಂಥ ಹತ್ತಾರು ಪ್ರಸಂಗಳು ಇಲ್ಲಿದೆ.

ಇನ್ನು ಅವರ ಬದುಕಿನ ವ್ಯಯಕ್ತಿಕ ಸಂಗತಿಗಳು ಕೇವಲ ಅವರಿಗಷ್ಟೇ ಸಂಬಂಧಿಸದೆ ಉಳಿದವರಿಗೆ ಆದರ್ಶ ಪ್ರಾಯವಾಗಿವೆ. ಬುಕ್ಕಾಂಬುಧಿ ಅವರ ಆಪ್ತರು, ತಮ್ಮ ನಿಧನಾನಂತರ ತಮ್ಮ ದೇಹವನ್ನು ವೈದ್ಯಕೀಯ ಕಾಲೇಜಿಗೆ ದಾನಮಾಡಬೇಕು ಎಂದು ಬರೆದಿಟ್ಟ ಸಂಗತಿಯನ್ನು ತಿಳಿದ ಬುಕ್ಕಾಂಬುಧಿ ಅವರೂ ಸಹ ತಮ್ಮ ದೇಹವನ್ನು ದಹನ ಮಾಡಬಾರದು. ವೈದ್ಯಕೀಯ ಕಾಲೇಜಿಗೆ ದಾನ ಮಾಡಬೇಕು. ಎಂದು ಉಯಿಲು ಮಾಡಿದ್ದಾರೆ. ಸತ್ತಮೇಲೂ ಬದುಕು ಸಾರ್ಥಕವಾಗಬೇಕು ಪರೋಪಕಾರದಿಂದ ಜನ್ಮ ಸಾರ್ಥಕತೆ, ಅಂಧ ಸಂಪ್ರದಾಯಗಳಿಂದಲ್ಲ ಎಂದು ಮಿತ್ರರಿಗೆ ಹೇಳಿದರಂತೆ.

ಆಚಾರದಲ್ಲಿ ಸರಳರಾದರೂ ವಿಚಾರದಲ್ಲಿ ಕ್ರಾಂತಿಕಾರರು ಬುಕ್ಕಾಂಬುಧಿ ಎಂದರೆ ತಪ್ಪಲ್ಲ. ಅದಕ್ಕೆ ಹಲವಾರು ನಿದರ್ಶನಗಳು ಇಲ್ಲಿಯ ತುಣುಕುಗಳಲ್ಲಿ ಸಿಗುತ್ತವೆ.

